# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 10-01-2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಪಿ.ಎನ್.ಸದಾಶಿವ - ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಕೆ.ಚಂದ್ರಶೇಖರ್ - ಸದಸ್ಯರು | ಅಧೀಕ್ಷಕ ಅಭಿಯಂತರರು(ಬೃಹತ್ ರಸ್ತೆಗಳು) |
| ಎನ್.ವೀರಣ್ಣ - ಸದಸ್ಯರು | ಸಹಾಯಕ ಆಯುಕ್ತರು (ಜಾಹಿರಾತು) |
| ಜಿ.ಮಂಜುನಾಥ ರಾಜು - ಸದಸ್ಯರು | ಮುಖ್ಯ ಅಭಿಯಂತರರು (ಪೂರ್ವ) |
| ಎಂ.ಜಿ.ಜಯರತ್ನ - ಸದಸ್ಯರು | ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪಶ್ಚಿಮ), (ಯೋಜನೆ), (ಉತ್ತರ-ಪಶ್ಚಿಮ, ಬೃಹತ್ ರಸ್ತೆಗಳು), (ಟಿ.ಇ.ಸಿ), |
| ಶಕೀಲಾ.ಎಂ - ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಶವಂತಪುರ), (ಬೃಹತ್ ರಸ್ತೆಗಳು). |
| ಟಿ.ಎ.ಗಾಯಿತ್ರಿ - ಸದಸ್ಯರು | ಸಹಾಯಕ ಅಭಿಯಂತರರು (ಯಶವಂತಪುರ) |
| | ವ್ಯವಸ್ಥಾಪಕರು, ಅಪರ ಆಯುಕ್ತರು (ಕಲ್ಯಾಣ) ಕಛೇರಿ |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

**01]. ವಿಷಯದ ಸಂಖ್ಯೆ :-ತೆಆಸ್ಥಾಸ/106/2010-11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ/ರಾರಾನ/ಪಿಆರ್/2075/10-11 ದಿನಾಂಕ : 09-12-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ನಗರ ಪಾಲಿಕೆಯ ಯಶವಂತಪುರ ವಾರ್ಡ್-37 ಹಳೇಯ ವಾರ್ಡ್ ಆಗಿದ್ದು, ಹೆಚ್ಚಿನ ಭಾಗವು ತಗ್ಗು ಪ್ರದೇಶದಿಂದ ಕೂಡಿರುತ್ತದೆ. ಈ ವಾರ್ಡ್‌ನಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಹರಿಜನ ಗಿರಿಜನ, ಅಲ್ಪ ಸಂಖ್ಯಾತರು ಹಾಗೂ ಹಿದುಳಿದ ವರ್ಗದ ಜನರಿಗೆ ವಸತಿ ಸಂಕೀರ್ಣವನ್ನು ಕಲ್ಪಿಸುವುದು ಅವಶ್ಯವಿರುತ್ತದೆ, ಈ ವಾರ್ಡಿನ ಪಾಲಿಕೆಯ ಸದಸ್ಯರು ವಾರ್ಡಿನ ಪರಿವೀಕ್ಷಣೆಯ ಸಮಯದಲ್ಲಿ ಸದರಿ ವಾರ್ಡ್‌ನ ಬಿ.ಕೆ.ನಗರದ 1ನೇ ಮುಖ್ಯ ರಸ್ತೆಯಲ್ಲಿರುವ ನಿವೇಶನವು ವಸತಿ ಸಂಕೀರ್ಣದ ನಿರ್ಮಾಣಕ್ಕೆ ಯೋಗ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಹಾಗೂ ಹಾಲಿ ವಸ್ತುಸ್ಥಿತಿಯನ್ನು ತೋರಿಸುವ ಫೋಟೋಗಳನ್ನು ಸಹ ಇದರೊಂದಿಗೆ ಲಗತ್ತಿಸಲಾಗಿದೆ. ಈ ವಿಷಯವಾಗಿ ಪಾಲಿಕೆ ಸದಸ್ಯರು ಸೂಕ್ತ ಕ್ರಮ ಕೈಗೊಳ್ಳಲು ಅವರ ಪತ್ರ ದಿನಾಂಕ 24-08-2010 ರಲ್ಲಿ ತಿಳಿಸಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ಒಟ್ಟು 32 ಯುನಿಟ್‌ಗಳ 3 ಅಂತಸ್ತಿನ ಇಂತಹ 3 ವಸತಿ ಸಂಕೀರ್ಣದ ನಿರ್ಮಾಣಕ್ಕೆ 2010-2011ರ ಸಾಲಿನಲ್ಲಿ ರೂ. 19.35 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಆದ್ದರಿಂದ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ 2010-2011ರ ದರಪಟ್ಟಿಯಂತೆ ಒಟ್ಟು 6 ಅಂದಾಜು ಪಟ್ಟಿಗಳನ್ನು ಮಾಡಲಾಗಿದ್ದು ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ವಾರ್ಡ್ ಸಂಖ್ಯೆ | ವಿವರಗಳು | ಅಂದಾಜು ಮೊತ್ತ ಕೋಟಿಗಳಲ್ಲಿ |
|---|---|---|---|
| 1 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್-ಎ-1** | 3.645 |

| | | | |
|---|---|---|---|
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಎ–1ಎ** | 2.855 |
| | | **ಒಟ್ಟು** | **6.500** |

.....2



| | | | |
|---|---|---|---|
| 2 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಬಿ–2** | 3.753 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಬಿ–2ಎ** | 2.747 |
| | | **ಒಟ್ಟು** | **6.500** |
| 3 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಡಿ–4** | 4.384 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಡಿ–4ಎ** | 1.966 |
| | | **ಒಟ್ಟು** | **6.350** |
| | | **ಒಟ್ಟು ಮೊತ್ತ** | **19.350** |

ಈ ಹಿನ್ನೆಲೆಯಲ್ಲಿ, ಯಶವಂತಪುರ ವಾರ್ಡ್‌ನ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ಒಟ್ಟು 32 ಯುನಿಟ್‌ಗಳ ಮೂರು ಅಂತಸ್ತಿನ 3 ಬ್ಲಾಕ್‌ಗಳನ್ನು ವಸತಿ ಸಂಕೀರ್ಣದ ನಿರ್ಮಾಣಕ್ಕೆ 2010–2011 ರ ಸಾಲಿನಲ್ಲಿ ರೂ. 19.35 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಮಾನ್ಯ ಅಯುಕ್ತರು ಮೂಲಕ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲು ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/123/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಉಆ(ಆರೋಗ್ಯ ಮತ್ತು ಜಾಹೀರಾತು)/ಪಿಆರ್/744/10–11, ದಿನಾಂಕ: 23–12–2010 ರಲ್ಲಿ ವಿವರಿಸಿರುವಂತೆ, ದಿನಾಂಕ:11–12–2010ರಂದು, ಸನ್ಮಾನ್ಯ ಶ್ರೀ.ಅಶೋಕ್, ಗೃಹ, ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ, ಪಾಲಿಕೆ ಆಡಳಿತ ಪಕ್ಷದ ನಾಯಕರು, ಪಾಲಿಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು, ಹಾಗೂ ಪಾಲಿಕೆ ಆಯುಕ್ತರು, ಪಾಲಿಕೆ ಅಧಿಕಾರಿಗಳೊಂದಿಗೆ ಕೇಂದ್ರ ಕಛೇರಿಯ ಸಭಾಂಗಣ–1ರಲ್ಲಿ ಮಧ್ಯಾಹ್ನಾ 12ರಿಂದ 3.00 ಘಂಟೆಯ ವರೆಗೆ ನಡೆದ ಸಭೆಯಲ್ಲಿ ಬೃ.ಬೆಂ.ಮ.ಪಾಲಿಕೆಯ ಜಾಹೀರಾತು ನೀತಿಯಲ್ಲಿ ಜಾಹೀರಾತು ತೆರಿಗೆಯಲ್ಲಿ ಹೆಚ್ಚು ಆದಾಯ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಾಗಿ ತಿಳಿಸಿ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರುವ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಹಲವಾರು ಬದಲಾವಣೆಗಳನ್ನು ಜಾರಿಗೆ ತಂದು ಸಾರ್ವಜನಿಕರ ಪ್ರಾಣ ರಕ್ಷಣೆ ಮತ್ತು ಆಸ್ತಿ ರಕ್ಷಣೆಗೆ ಒತ್ತು ನೀಡಿ ಪಾಲಿಕೆಗೆ ಯಾವುದೇ ಆದಾಯ ಸೋರಿಕೆ ಆಗದಂತೆ ಹಾಗೂ ಹೆಚ್ಚು ಆದಾಯವನ್ನು ತಂದುಕೊಡುವ ಬಗ್ಗೆ ಪ್ರಸ್ತಾಪಿಸಿದ ಮಾನ್ಯ ಸಚಿವರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಾನ್ಯ ಆಯುಕ್ತರು ಕ್ರಮ ವಹಿಸಲು ಸೂಚಿಸಿರುತ್ತಾರೆ. ಈ ಸಂದರ್ಭದಲ್ಲಿ ಒಂದು ಜಾಹೀರಾತು ಸಂಘದ ಅಧ್ಯಕ್ಷರಾದ ಶ್ರೀ.ಆರ್.ಕೃಷ್ಣ ದೇವರಾಯ ರವರು ಹಾಜರಿದ್ದು, ಜಾಹೀರಾತು ತೆರಿಗೆಯ ಹಾಲಿ ಸ್ಥಿತಿಯನ್ನು ಮುಂದುವರೆಸುವಂತೆ ಸುಮಾರು ಕುಟುಂಬಗಳು ಈ ಕೈಗಾರಿಕೆ ಮೇಲೆ ಅವಲಂಬಿತರಾಗಿರುವುದಾಗಿ ಮನವಿ ಮಾಡಿದರು. ಮಾನ್ಯ ಸಚಿವರು ಎಲ್ಲಾ ಅಹವಾಲುಗಳನ್ನು ಆಲಿಸಿ ಹಾಲಿ ಇರುವ ಜಾಹೀರಾತು–2006ಕ್ಕೆ ತಿದ್ದುಪಡಿ ತರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಒಂದು ವಾರದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ

ಪ್ರಸ್ತಾವನೆ ಮಂಡಿಸಿ, ಮುಂದಿನ ಪಾಲಿಕೆ ಸಭೆಯಲ್ಲಿ ವಿಷಯ ಮಂಡಿಸಿ, ಚರ್ಚಿಸಿ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಿರುತ್ತಾರೆ.

(1) ಈಗಾಗಲೇ ಹಾಲಿ ಇರುವ ಬೈಲಾದಂತೆ 'ಎ' ವಲಯದಲ್ಲಿ ಜಾಹೀರಾತು ನಿಷೇಧಿಸಿದ್ದು, ಸದರೀ ವಲಯಕ್ಕೆ ನಗರದ ಚಾಲುಕ್ಯ ವೃತ್ತದಿಂದ ಬಸವೇಶ್ವರ ವೃತ್ತ, ಹಳೇ ಹೈಗ್ರೌಂಡ್ಸ್ ಪೋಲೀಸ್ ವೃತ್ತ ಬಾಲಬ್ರೂಹಿ ಅಥಿತಿ ಗೃಹ ಮತ್ತು ಗಾಲ್ಫ್ ಕ್ಲಬ್ ಮೂಲಕ ಸಂಚರಿಸುವ ರಸ್ತೆ ವಿಂಡ್ಸರ್ ಮ್ಯಾನರ್ ಜಂಕ್ಷನ್, ಬಿ.ಡಿ.ಎ ಜಂಕ್ಷನ್ ಮೂಲಕ – ಕಾವೇರಿ ಜಂಕ್ಷನ್ ಮೂಲಕ ಮೇಖ್ರಿ ವೃತ್ತದ ವರೆಗೆ ಸೇರಿಸಬೇಕೆಂದು ಹಾಗೂ ಕಾವೇರಿ ಜಂಕ್ಷನ್‌ನಿಂದ ಬಾಷ್ಯಂ ವೃತ್ತದವರೆಗೆ ಸೇರಿಸಬೇಕೆಂದು ಆದೇಶಿಸಿರುತ್ತಾರೆ.



(2) 'ಎ' ವಲಯಗಳಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಮೂಲ ಸೌಲಭ್ಯಗಳನ್ನು ಸೃಷ್ಟಿ ಮಾಡುವ ಯೋಜನೆಗಳನ್ನು ಬಿಟ್ಟು ಯಾವುದೇ ತರಹದ ಜಾಹೀರಾತಿಗೆ ಅವಕಾಶ ನೀಡತಕ್ಕದ್ದಲ್ಲ.

(3) ಕಟ್ಟಡಗಳ ಮೇಲೆ ಯಾವುದೇ ಕಾರಣಕ್ಕೂ ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ರಕ್ಷಣೆ ದೃಷ್ಟಿಯಿಂದ ಹಾಗೂ ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡುವ ದೃಷ್ಠಿಯಿಂದ ಮತ್ತು ಬೆಂಗಳೂರು ನಗರದ ಸೌಂದರ್ಯವನ್ನು ಕಾಪಾಡುವ ದೃಷ್ಠಿಯಿಂದ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡತಕ್ಕದ್ದಲ್ಲ. ಈ ಕೂಡಲೇ ಎಲ್ಲಾ ಕಟ್ಟಡಗಳ ಮೇಲೆ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸತಕ್ಕದ್ದು.

(4) ಬಿ.ಬಿ.ಎಂ.ಪಿ ಸ್ವತ್ತುಗಳ ಜಾಹೀರಾತಿಗೆ ಸಂಬಂಧಿಸಿದಂತೆ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆ ವಿಧಿಸುವ ಪದ್ಧತಿ ಅವೈಜ್ಞಾನಿಕವಾಗಿದ್ದು ಸದರೀ ತೆರಿಗೆಯನ್ನು ವಲಯ ಅಥವಾ ಪ್ಯಾಕೇಜ್ ಅಥವಾ ವಾರ್ಡ್‌ವಾರು ಟೆಂಡರ್ / ಹರಾಜು ಮಾಡಿ ಅದರಂತೆ ಗರಿಷ್ಠ ತೆರಿಗೆಯನ್ನು ನಿಗದಿಪಡಿಸಿ ಕರಾರು ಪತ್ರ ಪಡೆದು, Security Deposit /Bank Guarantee ಪಡೆದು ಪ್ರತಿ ಮೂರು ವರ್ಷಗಳಿಗೊಮ್ಮೆ ವಲಯ ಅಥವಾ ವಾರ್ಡ್‌ವಾರು ಹರಾಜು ಮುಖಾಂತರ ನಿಗದಿಪಡಿಸಿದ ಜಾಹೀರಾತು ತೆರಿಗೆಯನ್ನು ನಿಗದಿಪಡಿಸತಕ್ಕದ್ದು.

(5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ/ಪ್ಯಾಕೇಜ್/ವಾರ್ಡ್‌ವಾರು ಖಾಸಗೀ ಸ್ವತ್ತುಗಳಲ್ಲಿಯೂ ಸಹ ಜಾಹೀರಾತು ಹಕ್ಕುಗಳನ್ನು ಹರಾಜು ಮಾಡಿ ಪಾಲಿಕೆ ಆದಾಯದ ದೃಷ್ಟಿಯಿಂದ ಹೆಚ್ಚು ಆದಾಯವನ್ನು ಪಡೆಯುವಂತೆ ಕ್ರಮ ವಹಿಸುವುದು.

(6) ಹಾಲಿ ಇರುವ ಜಾಹೀರಾತು ನೀತಿಯನ್ನು 31–12–2010 ರವರೆಗೆ ಮಾತ್ರ ಮುಂದುವರೆಸಿ 1–1–2011 ರಿಂದ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರುವುದು.

(7) ಸ್ವಜಾಹೀರಾತುಗಳಿಗೆ ಸಂಬಂಧಿಸಿದಂತೆ ಈ ಜಾಹೀರಾತುಗಳು ಯಾವ ವಲಯ ಅಥವಾ ಪ್ಯಾಕೇಜಿಗೆ ಅನ್ವಯವಾಗುತ್ತವೋ ಅಲ್ಲಿಗೆ ನಿಗಧಿಪಡಿಸಿದ ಜಾಹೀರಾತು ತೆರಿಗೆಯನ್ನು ವಿಧಿಸಲಾಗುವುದು.

(8) ಬಿ.ಬಿ.ಎಂ.ಪಿಗೆ ಸೇರಿದ ಸ್ವತ್ತುಗಳು ಅಂದರೆ Pole Kiosks, Bus-shelters, Glow sign Boxes , Police Umbrallas, Sky walks, Road medians, Toilet Spaces, ಮೊದಲಾದ ಸ್ವತ್ತುಗಳ ಮೇಲೆ ಪ್ರದರ್ಶಿಸಲಾಗುವ ಜಾಹೀರಾತುಗಳನ್ನು ನೀಡುವಲ್ಲಿ ಸಹ **Tender Cum auction** ಮುಖಾಂತರ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಲಾಗುವುದು. ಪರಂತು ಈಗಾಗಲೇ ಇಂತಹ ಸ್ವತ್ತುಗಳ ಮೇಲೆ ನಿಗಧಿಪಡಿಸಿರುವ ಜಾಹೀರಾತು ತೆರಿಗೆಯನ್ನು ಪ್ರಸಕ್ತ ಹರಾಜಿನಲ್ಲಿ ನಿಗಧಿಪಡಿಸಿದ ತೆರಿಗೆಗೆ ಸರಸಮಾನವಾಗಿ ಪರಿಷ್ಕರಿಸಲಾಗುವುದು. ಈ ರೀತಿ ಪರಿಷ್ಕೃತ ತೆರಿಗೆಗೆ ಒಪ್ಪದಿರುವ ಪ್ರಕರಣಗಳ ಒಪ್ಪಂದಗಳನ್ನು ರದ್ದುಪಡಿಸಿ ಹೊಸದಾಗಿ Tender Cum auction ಮುಖಾಂತರ ವಿಲೇವಾರಿ ಮಾಡಲಾಗುವುದು

(9) ಭೂ ಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆ, ಮುಂತಾದ ಅನಿವಾರ್ಯ ಕಾರಣದಿಂದ ಅಳವಡಿಸಲಾಗಿರುವ ಫಲಕಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಹಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ 10,000–00 ವಿಧಿಸಿ ಅನುಮತಿ ನೀಡಬಹುದಾಗಿದೆ. ಅದೇ ರೀತಿ ರೂ 10,000–00 ವರ್ಗಾವಣೆ ಶುಲ್ಕ ವಿಧಿಸಿ ಒಂದು ಸಂಸ್ಥೆಯು ನೊಂದಾಯಿಸಿರುವ ಜಾಹೀರಾತು ಫಲಕಗಳನ್ನು ಮತ್ತೊಂದು ಸಂಸ್ಥೆಗೆ ವರ್ಗಾಹಿಸಿಕೊಳ್ಳಲು ಅನುಮತಿ ನೀಡಬಹುದಾಗಿರುತ್ತದೆ.

(10) ನಿಯಾನ್ ಬೋರ್ಡ್‌ಗಳು ಮತ್ತು ಎಲ್.ಇ.ಡಿ ಬೋರ್ಡ್‌ಗಳಿಗೂ ಸಹ ವಲಯ/ಪ್ಯಾಕೇಜುವಾರು ಹರಾಜು ಮಾಡಿ ಪ್ರತ್ಯೇಕವಾಗಿ ಗರಿಷ್ಠ ಜಾಹೀರಾತು ತೆರಿಗೆಯನ್ನು ವಿಧಿಸಬಹುದಾಗಿದೆ.

(11) 4ಎ(ii) ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000–00 ಮೊತ್ತವನ್ನು ರೂ.20,000–00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ ಹಾಲಿ ಇರುವ ಮೊತ್ತ ರೂ.2,000–00 ಗಳಿಂದ ರೂ.5,000–00 ಗಳಿಗೆ ಹೆಚ್ಚಿಸುವುದು.



**<u>ತಿದ್ದುಪಡಿ</u>**

These Amended Bye-laws shall be called Amended Bye-laws of 2010 and come into effect from 1st Jan 2011 or from the date of approval by the government.

ಈ ತಿದ್ದುಪಡಿ ಉಪವಿಧಿಗಳನ್ನು 2010ರ ತಿದ್ದುಪಡಿ ಉಪವಿಧಿಗಳೆಂದು, ಹಾಗೂ 1ನೇ ಜನವರಿ 2011 ರಿಂದ ಅಥವಾ ಸರ್ಕಾರದಿಂದ ಅನುಮೋದಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

wherever it is mentioned as corporation or Bangalore city corporation in these Bye-laws it should be read as Bruhat Bangalore Mahanagara Palike

ಎಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯೆಂದು ಉಲ್ಲೇಖಿಸಲಾಗಿದೆಯೋ ಅದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ಓದತಕ್ಕದ್ದು.

## <u>Defnition :</u>

**<u>ಸ್ಪಷ್ಟೀಕರಣ:</u>**

**1.A(1)** These Bye-laws shall be called Bruhath Bangalore Mahanagara Palike, Advertisement Bye-laws.

**1.(ಎ)(1)** ಈ ಉಪವಿಧಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳೆಂದು ಪರಿಗಣಿಸತಕ್ಕದ್ದು.

**2.A(2)(a)** The Advertisement Tax leived by the corporation on all advertisements as per section 134 of KMC Act 1976 and such advertisement tax can be fixed by way of tendering or auction- ioning the advertisement rights and the maximum amount got by uch auction shall be fixed as advertisement tax for that term of three years.

**2.ಎ(2)(ಎ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆ.ಎಂ.ಸಿ ಕಾಯ್ದೆ 1976ಕಲಂ 134ರಂತೆ ವಿಧಿಸುವ ಜಾಹೀರಾತು ತೆರಿಗೆಯನ್ನು ಟೆಂಡರ್ ಮತ್ತು ಹರಾಜಿನ ಮುಖಾಂತರ ನಿಗಧಿಪಡಿಸಲಾಗುವುದು. ಹಾಗೂ ಅತಿ ಹೆಚ್ಚಿನ ಮೊತ್ತವನ್ನು ಜಾಹೀರಾತುತೆರಿಗೆಯಾಗಿ ಮುಂದಿನ 3 ವರ್ಷಗಳ ಕಾಲಾವಧಿಗೆ ವಿಧಿಸಲಾಗುವುದು.

**1.A(1)** The Bye laws will come into effect in all the eight zones of BBMP. In these Bye-laws Corporation or Bangalore city corporation should be read as Bruhat Bangalore Mahanagara Palike

**1.ಎ(1)** ಜಾಹೀರಾತು ಉಪವಿಧಿಗಳು ಎಲ್ಲಾ ಪಾಲಿಕೆಯ 8 ವಲಯಗಳಲ್ಲಿ ಅನ್ವಯವಾಗುವುದು ಈ ಉಪ ವಿಧಿಗಳಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯ ಉಲ್ಲೇಖನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಪರಿಗಣಿಸತಕ್ಕದ್ದು.

2.A(11)Commissioner means commissioner of Bangalore Mahanagara Palike (BBMP)

2.ಎ(11) ಆಯುಕ್ತರು ಎಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು

1) For the words BMP – BBMP shall be incorporated

-5-

**12)** ಬೆಂ.ಮ.ಪಾ ಅನ್ನು ಬೃ.ಬೆಂ.ಮ.ಪಾ ಎಂದು ನಮೂದಿಸತಕ್ಕದ್ದು.

**13)** For the words Bangalore Mahanagara Palike shall be Incorporated

**13)** ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ನಮೂದಿಸತಕ್ಕದ್ದು.

**2.A(21)** Shall be deleted.
(as it diverts the attention of drivers & leads to accidents)

**2.ಎ(21)** ಕೈ ಬಿಡತಕ್ಕದ್ದು.
(ವಾಹನ ಚಾಲಕರನ್ನು ದಿಕ್ಕುತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ)

**(22)** the words or "any portion of a roof " shall be deleted

(22) ವಾಕ್ಯ ಅಥವಾ ಮೇಲ್ಚಾವಣಿಯ ಎಲ್ಲಾ ವಿಧಗಳ ಭಾಗವನ್ನು ಕೈಬಿಡತಕ್ಕದ್ದು.

## Section II

## ಕಲಂ II

**3.A (2)** " or any portion of a roof " shall be delected

**3.ಎ (2)** "ಅಥವಾ ಮೇಲ್ಚಾವಣಿಯ ಎಲ್ಲಾ ಭಾಗದಲ್ಲಿ" ಕೈಬಿಡತಕ್ಕದ್ದು.

**3.A (7)** at a Rate not less than one lakh rupees & removal of such hoarding without any further notice & to take action to cancel the Registration of the agency.

**3.ಎ (7)** ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಆಗದಂತ ದರ ಮತ್ತು ನೋಟೀಸ್ ಅನ್ನು ನೀಡದೆ ಫಲಕವನ್ನು ತೆರವುಗೊಳಿಸುವುದು ಹಾಗೂ ಸಂಸ್ಥೆಯ ನೊಂದಣಿಯನ್ನು ರದ್ದುಗೊಳಿಸಲು ಕ್ರಮವಹಿಸುವುದು.

**3.A (8)** The words “In respect of high rise buildings, NOC should be obtained from Fire force Department” shall be deleted.

**3.ಎ (8)** ಎತ್ತರದ ಕಟ್ಟಡಗಳಿಗೆ ಅಗ್ನಿ ಶಾಮಕ ದಳ ಇಲಾಖೆಯಿಂದ ನಿರಾಕ್ಷೇಪಣ ಪತ್ರವನ್ನು ಪಡೆಯುವುದು ಕೈಬಿಡುವುದು.

**3A (14)** “and 30 feet by 15 feet when erected on a roof top provided the hoarding does not project beyond building line or beyond roof edges” shall be deleted.

**3ಂ (14) “ಮತ್ತು 30 ಅಡಿ X 15 ಅಡಿ ಜಾಹೀರಾತು ಫಲಕಗಳನ್ನು ಮೇಲ್ಚಾವಣಿಯಲ್ಲಿ ಅಳವಡಿಸಿದರೆ ಅಂತಹ ಜಾಹೀರಾತು ಫಲಕಗಳು ಕಟ್ಟಡದ ರೇಖೆಗಳನ್ನು ಅಥವಾ ಮೇಲ್ಚಾವಣಿಯ ತುದಿಗಳನ್ನು ಅತಿಕ್ರಮಿಸುವುದು” ಎನ್ನುವುದನ್ನು ಕೈಬಿಡತಕ್ಕದ್ದು.**

**3A (14) (i)** “The minimum distance between the two hoardings shall be 10 Metres” shall be included.



**3ಂ (14) (i) “ಎರಡು ಫಲಕಗಳ ನಡುವಿನ ಅಂತರ ಕನಿಷ್ಠ 10 ಮೀಟರು ನಷ್ಟಿರಬೇಕು” ಎಂದು ಸೇರಿಸತಕ್ಕದ್ದು.**

**(ii)** “The minimum distance to be maintained between two hoardings shall be Ten metres” shall be included.

**(ii) “ಎರಡು ಫಲಕಗಳ ನಡುವಿನ ಅಂತರ ಕನಿಷ್ಠ 10 ಮೀಟರು ನಷ್ಟಿರಬೇಕು” ಎಂದು ಸೇರಿಸತಕ್ಕದ್ದು.**

**(iii)** “Shall Ten Metres” shall be included.
“No hoardings shall be permitted one above the other, when erected on roof of any building” shall be deleted.

“The hoardings one above the other may be permitted on the ground” shall be included

**(iii) “10 ಮೀಟರು”ಗಳೆಂದು ಸೇರಿಸತಕ್ಕದ್ದು**

“ಕಟ್ಟಡಗಳ ಛಾವಣಿಯ ಮೇಲೆ ಯಾವುದೇ ಫಲಕಗಳು ಒಂದರ ಮೇಲೊಂದು ಅಳವಡಿಸತಕ್ಕದಲ್ಲ.” ಎನ್ನುವುದನ್ನು ಕೈಬಿಡತಕ್ಕದ್ದು.

“ನೆಲದ ಮೇಲೆ ಫಲಕಗಳನ್ನು ಒಂದರ ಮೇಲೆ ಮತ್ತೊಂದನ್ನು ಅಳವಡಿಸಲು ಅನುಮತಿ ನೀಡಬಹುದು” ಎಂದು ಸೇರಿಸತಕ್ಕದ್ದು.

**(v) <u>From ground</u>**

| | | |
|---|---|---|
| Zone A | - | No hoardings including neons |
| Zone B | - | 40 feet (From Ground) |
| Zone C | - | 50 feet (From Ground) |
| Zone D | - | 80 feet (From Ground) |

**(V) ನೆಲದಿಂದ**

ಎ ವಲಯ – ಜಾಹೀರಾತು ಫಲಕಗಳು ಹಾಗೂ ನಿಯಾನ್ ಸೈನ್ ಒಳಗೊಂಡಂತೆ ಕಡ್ಡಾಯವಾಗಿ ಅನುಮಿತಿ ಇಲ್ಲ.

ಬಿ ವಲಯ – 40 ಅಡಿ (ನೆಲದಿಂದ)

ಸಿ ವಲಯ – 50 ಅಡಿ (ನೆಲದಿಂದ)

ಡಿ ವಲಯ – 80 ಅಡಿ (ನೆಲದಿಂದ)

**3.A (22)** "All Advertisement tax shall be paid by the 30th July each year in single installment". The Advertiser shall furnish security deposit of one year advance and furnish a Bank Guarantee for the total amount of the period which may be mentioned in the agreement. All other provisions in this sub rule shall be deleted.

**3.ಎ (22)** "ಏಜೆನ್ಸಿಗಳು ಎಲ್ಲಾ ಜಾಹೀರಾತುಗಳ ವಾರ್ಷಿಕ ತೆರಿಗೆಯನ್ನು ಒಂದೇ ಕಂತಿನಲ್ಲಿ ಪ್ರತಿ ವರ್ಷ ಜುಲೈ 30ನೇ ದಿನಾಂಕದೊಳಗಾಗಿ ಪಾವತಿಸತಕ್ಕದ್ದು." ಜಾಹೀರಾತುದಾರರು ಭದ್ರತಾ ಠೇವಣಿಯಾಗಿ ಮುಂಗಡ ವಾರ್ಷಿಕ ಠೇವಣಿಯನ್ನು ಪಾವತಿಸತಕ್ಕದ್ದು. ಮತ್ತು ಕರಾರಿನಲ್ಲಿ ನಮೂದಿಸಿರುವ ಅವಧಿಗೆ ಬ್ಯಾಂಕ್ ಭರವಸೆ ನೀಡುವುದು. ಇತರೇ ನಿಯಮಗಳನ್ನು ಕೈಬಿಡತಕ್ಕದ್ದು.



ಮೇಲ್ಕಂಡ ತಿದ್ದುಪಡಿಗಳನ್ನು ಅಳವಡಿಸಲು ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**–ಮುಂದೂಡಿದೆ–**

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/124/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)75/10–11, ದಿನಾಂಕ: 22–12–2010 ರಲ್ಲಿ ವಿವರಿಸಿರುವಂತೆ, ದಿನಾಂಕ: 07/12/2010 ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಮುಖ್ಯ ಅಭಿಯಂತರರು, ಸಂಪರ್ಕ & ಕಟ್ಟಡಗಳು (ದಕ್ಷಿಣ) ರವರುಗಳು ಮೇಯೋಹಾಲ್ ನ್ಯಾಯಾಲಯದ ಕಟ್ಟಡವನ್ನು ಪರಿವೀಕ್ಷಣೆ ಮಾಡಿರುತ್ತಾರೆ. ಅದೇ ಸಮಯದಲ್ಲಿ ಮೇಯೋಹಾಲ್ ಕಟ್ಟಡವನ್ನು ಸಹ ಪರಿವೀಕ್ಷಣೆ ಮಾಡಿರುವುದಾಗಿ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ರವರು ತಿಳಿಸಿರುತ್ತಾರೆ.

ಹಾಲಿ ಮೇಯೋಹಾಲ್ ಕೋರ್ಟ್‌ನಲ್ಲಿ ಸ್ಥಳಾವಕಾಶ ಕಡಿಮೆ ಇರುವುದಾಗಿ ನ್ಯಾಯಾಂಗದ ರಿಜಿಸ್ಟರ್ ರವರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಮೇಯೋಹಾಲ್ ಕಟ್ಟಡ ಸಂಕೀರ್ಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಮೇಯೋಹಾಲ್ ಕಟ್ಟಡವನ್ನು 6 ಸಂಖ್ಯೆ ಹೆಚ್ಚುವರಿ ಕೋರ್ಟ್‌ಹಾಲುಗಳನ್ನಾಗಿ ಪರಿವರ್ತಿಸಲು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಅವಶ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ)ರವರು ದಿನಾಂಕ: 16/12/2010 ರಂದು ಪತ್ರದ ಮುಖೇನ ಕೋರಿರುತ್ತಾರೆ.

ಮೇಯೋಹಾಲ್ ಕಟ್ಟಡವು ನೆಲಮಹಡಿ ಹಾಗೂ ಮೊದಲನೇ ಮಹಡಿವುಳ್ಳದಾಗಿದ್ದು ಪ್ರತಿ ಅಂತಸ್ತಿನ ವಿಸ್ತೀರ್ಣ 498.89 ಚ.ಮೀ. (5368.00 ಚ.ಅಡಿ) ಇದು ಒಟ್ಟು ಕಟ್ಟಡದ ವಿಸ್ತೀರ್ಣ 997.78 ಚ.ಮೀ. (10736.00 ಚ.ಅಡಿ) ಇರುತ್ತದೆ.

ಆದರೆ ಸದರಿ ಮೇಯೋಹಾಲ್ ಕಟ್ಟಡವು 1883 ರಲ್ಲಿ ನಿರ್ಮಾಣವಾಗಿದ್ದು ಇದು ಒಂದು ಪಾರಂಪಾರಿಕ ಕಟ್ಟಡವಾಗಿರುತ್ತದೆ. ಮೇಯೋಹಾಲ್ ಕಟ್ಟಡದಲ್ಲಿ ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವ ಸಲುವಾಗಿ ದಿನಾಂಕ: 30/09/2005 ರಂದು ಪಾಲಿಕೆಯ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವ

ಬಗ್ಗೆ ಕೆಂಪೇಗೌಡ ಸ್ಮಾರಕ ಪ್ರತಿಷ್ಠಾಪನ ಸಹಯೋಗದೊಂದಿಗೆ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಕ್ರಮ ವಹಿಸಿದ್ದು ಅನೇಕ ಸಭೆಗಳು ಜರುಗಿರುತ್ತವೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಫೀಲ್ಡ್ ಮಾರ್ಷಲ್, ಕೆ.ಎಂ.ಕರಿಯಪ್ಪ ರಸ್ತೆಯಲ್ಲಿರುವ ಮೇಯೋಹಾಲ್ ಕಟ್ಟಡವನ್ನು ***"ಹೆಚ್ಚುವರಿ ಕೋರ್ಟು ಆಗಿ ಪರಿವರ್ತಿಸಲು ಲೋಕೋಪಯೋಗಿ ಇಲಾಖೆಗೆ ಲೀಸ್ ಆಧಾರದ ಮೇಲೆ ಹಸ್ತಾಂತರಿಸುವ ಬಗ್ಗೆ"*** ಅಥವಾ ***"ಸದರಿ ಕಟ್ಟಡದಲ್ಲಿ ಈಗಾಗಲೇ ದಿನಾಂಕ:30/09/2005 ರಲ್ಲಿ ತೆಗೆದುಕೊಂಡ ನಿರ್ಣಯದಂತೆ ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಕೆಂಪೇಗೌಡ ಸ್ಮಾರಕ ಪ್ರತಿಷ್ಠಾಪನ ಸಹಯೋಗದೊಂದಿಗೆ ಸ್ಥಾಪಿಸಲು ಅಂಗೀಕಾರವಾಗಿರುವ ನಿರ್ಣಯದಂತೆ ಪ್ರಾರಂಭಿಸುವ ಬಗ್ಗೆ"*** ಸೂಕ್ತ ನಿರ್ಣಯ ಕೋರಿ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ವಿಷಯದ ಸಂಖ್ಯೆ :–ತೆಆಸ್ಥಾಸ/125/2010–11

ಆಯುಕ್ತರವರ ಟಿಪ್ಪಣಿ ದಿನಾಂಕ: 21–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಕಾರ್ಯಪಾಲಕ ಅಭಿಯಂತರರು, ಸಂಚಾರಿ ಕಾಮಗಾರಿ ವಿಭಾಗದ ವತಿಯಿಂದ Wideninf of Suranjan Das Road from Old Madras Road to Kuvempu Circle (upto Old Airport Road) ಕಾಮಗಾರಿಯನ್ನು ರೂ.1474–05 ಲಕ್ಷಗಳೊಂದಿಗೆ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಸದರಿ ಕಾಮಗಾರಿಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯು ದಿನಾಂಕ 28–8–2010ರ ವಿಷಯ ಸಂಖ್ಯೆ 3(81)/2010–11 ರಂತೆ ಅನುಮೋದನೆ ನೀಡಿರುತ್ತದೆ.



ಮೇಲ್ಕಂಡ ಕಾಮಗಾರಿಯನ್ನು ಆಯವ್ಯಯ ಪ್ರಧಾನ ಲೆಕ್ಕ ಶೀರ್ಷಿಕೆ ಸಂಚಾರಿ ಶಾಖೆ ಪ್ರಧಾನ ಲೆಕ್ಕ ಶೀರ್ಷಿಕೆ – ರಸ್ತೆ ಅಗಲೀಕರಣ ಕಾಮಗಾರಿಗಳು **ಪಿ.ಕೋಡ್ 0537** ಉಪ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಭರಿಸಬೇಕಾಗಿರುತ್ತದೆ. ಆದರೆ ಸದರಿ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಮೀಸಲಿಟ್ಟ ರೂ.672.00 ಲಕ್ಷಗಳ ಅನುದಾನವು ಮುಂದುವರೆದ ಕಾಮಗಾರಿಗಳಿಗಾ ಸೀಮಿತವಾಗಿರುತ್ತದೆ. ಚಾಲ್ತಿ ಕಾಮಗಾರಿಗೆ ವೆಚ್ಚವನ್ನು ಭರಿಸಲು ಸಾಧ್ಯವಾಗುವುದಿಲ್ಲ.

ಆದ್ದರಿಂದ, ಮೇಲ್ಕಂಡ ಕಾಮಗಾರಿಯ ರೂ.1474.05 ಲಕ್ಷಗಳನ್ನು 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ "ಸಂಚಾರಿ ಶಾಖೆ" ಪ್ರಧಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಿ.ಕೋಡ್ 0537 ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳೆಂದು ಅಳವಡಿಸುವ ಷರತ್ತಿಗೆ ಒಳಪಡಿಸಿ ಹಾಗೂ ಕಾಮಗಾರಿ ಸಂಕೇತವನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಕಡತದ ಕಂಡಿಕೆ 176 ರಲ್ಲಿ ಮಾನ್ಯ ಆಯುಕ್ತರವರು ಅನುಮೋದಿಸಿರುತ್ತಾರೆ.

**ಆದ್ದರಿಂದ, ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ, 2010–11ನೇ ಸಾಲಿನ ಆಯವ್ಯಯದಲ್ಲಿ ಹಾಲಿ ಇರುವ "ಸಂಚಾರಿ ಶಾಖೆ" ಪ್ರಧಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಿ.ಕೋಡ್ 0537 ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳೆಂದು ಲೆಕ್ಕ ಶೀರ್ಷಿಕೆಯನ್ನು ಸೃಜಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿಯನ್ನು ಮಂಡಿಸಿದೆ.**

ನಿರ್ಣಯ :– ಆಯುಕ್ತರ ದಿನಾಂಕ 21–12–2010ರ ಟಿಪ್ಪಣಿಯನ್ನು ಒಪ್ಪಿದೆ.

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/126/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)82/10–11, ದಿನಾಂಕ: 23–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಟಿ. ವರದರಾಜು, ಪ್ರಧಾನ ಕಾರ್ಯದರ್ಶಿ, ಛಾಯಾ ಭಾನು ಕಲಾಸಂಘ (ನೋ.) ರವರು ಪೂಜ್ಯ ಮಹಾಪೌರರಿಗೆ

ಪತ್ರ ಬರೆದು ತಮ್ಮ ಸಂಸ್ಥೆಯು 1995 ರಲ್ಲಿ ಸ್ಥಾಪಿತವಾಗಿದ್ದು, ಸುಮಾರು 25 ವರ್ಷಗಳಿಂದ ರಾಜ್ಯ ಮಟ್ಟದ ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದು, ರಂಗಶಿಬಿರ, ವಿಚಾರ ಸಂಕೀರ್ಣ ಹಿರಿಯ ಮತ್ತು ಮಕ್ಕಳ ಪ್ರತಿಭೆಗಳನ್ನು ಹೊರಹೊಮ್ಮಲು ರಂಗಗೀತೆ, ಭಾವಗೀತೆ, ಜಾನಪದಗೀತೆ, ಚಲನಚಿತ್ರ ಗೀತೆ, ಜಾನಪದ ನೃತ್ಯ, ಚಲನಚಿತ್ರ ನೃತ್ಯ, ಭರತನಾಟ್ಯ ಮತ್ತು ರಾಜ್ಯ ಮಟ್ಟದ ಪೌರಾಣಿಕ ನಾಟಕಗಳ ರಂಗೋತ್ಸವ ಇತ್ಯಾದಿ ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ನಿರಂತರವಾಗಿ ಪ್ರತಿ ವರ್ಷವೂ ಡಿಸೆಂಬರ್ ತಿಂಗಳಲ್ಲಿ ನಡೆಸುತ್ತಾ ಬಂದಿರುವುದಾಗಿ ತಿಳಿಸಿ, ಅದೇ ರೀತಿ ಪ್ರತಿ ವರ್ಷದಂತೆ ಈ ವರ್ಷವೂ ತಾರೀಖು 17.12.2010 ರಿಂದ 24.12.2010 ರವರೆಗೆ ನಯನ ರಂಗ ಮಂದಿರ ಮತ್ತು ರವೀಂದ್ರ ಕಲಾಕ್ಷೇತ್ರದಲ್ಲಿ 8 ದಿನಗಳು ರಾಜ್ಯ ಮಟ್ಟದ ಪೌರಾಣಿಕ ನಾಟಕಗಳ ರಂಗೋತ್ಸವವನ್ನು ಆಚರಿಸುತ್ತಿದ್ದೇವೆಂದು, ಈ ರಂಗೋತ್ಸವದಲ್ಲಿ ರಾಜ್ಯ ಮಟ್ಟದಲ್ಲಿ ಅಂಗವಿಕಲರ ತಂಡ, ಮಹಿಳಾ ನಾಟಕ ತಂಡ, ಮಕ್ಕಳ ನಾಟಕ ತಂಡಗಳು ಹಾಗೂ ನಗರ ಜಿಲ್ಲೆ ಮತ್ತು ಗ್ರಾಮಾಂತರ ನಾಟಕ ತಂಡಗಳಿಂದ ಸುಮಾರು 30 ಪೌರಾಣಿಕ ನಾಟಕ ತಂಡಗಳು ಭಾಗವಹಿಸುತ್ತಿದ್ದು, ಈ ಎಲ್ಲಾ ಕಾರ್ಯಕ್ರಮದ ಅಂದಾಜು ವೆಚ್ಚ ರೂ. 5,29,000/- (ಐದು ಲಕ್ಷದ ಇಪ್ಪತ್ತೊಂಭತ್ತು ಸಾವಿರ ರೂಪಾಯಿಗಳು) ಆಗಿರುತ್ತದೆಂದು ತಿಳಿಸುತ್ತಾ, ತಮ್ಮ ಸಂಸ್ಥೆಯು ರೂ. 50,000/- ಗಳನ್ನು ಭರಿಸುತ್ತಿದ್ದು, ಉಳಿತ ಹಣವನ್ನು ಪಾಲಿಕೆ ವತಿಯಿಂದ ಧನ ಸಹಾಯ ನೀಡಿ ನಮ್ಮ ಈ ರಾಜ್ಯ ಮಟ್ಟದ ಪೌರಾಣಿಕ ನಾಟಕ ರಂಗೋತ್ಸವ ಚಟುವಟಿಕೆಗೆ ಪ್ರೋತ್ಸಾಹ ನೀಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಮಾರ್ಗಸೂಚಿಗಳನ್ವಯ ಸದರಿ ಸಂಸ್ಥೆಗೆ ರೂ.10,000/- (ರೂ. ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 23-12-2010ರ ಟಿಪ್ಪಣಿಯನ್ನು ಒಪ್ಪಿದೆ.**



## 06]. ವಿಷಯದ ಸಂಖ್ಯೆ :-ತೆಆಸ್ಥಾಸ/127/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)71/10-11, ದಿನಾಂಕ: 23-12-2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು, ಪತ್ರ ಬರೆದು ಕನ್ನಡ ಅನುಷ್ಠಾನ ಮಂಡಳಿ (ನೊಂ) ರವರು ಕನ್ನಡ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಯೋಜನೆಯ ವಾರ್ಷಿಕ ಚಟುವಟಿಕೆಗಳಿಗಾಗಿ, ಪಾಲಿಕೆ ವತಿಯಿಂದ ಧನ ಸಹಾಯ ನೀಡುವಂತೆ ಸಮಿತಿಗೆ ಒಕ್ಕಣೆಯನ್ನು ಬರೆದು ಕಳುಹಿಸಿರುತ್ತಾರೆಂದು, ಪೂಜ್ಯ ಮಹಾಪೌರರ ಸೂಚನೆ ಮೇರೆಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಯಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದ್ದು, ಪೂಜ್ಯ ಮಹಾಪೌರರು ಪ್ರಸ್ತಾವಿತ ಸಂಸ್ಥೆಯವರ ಮನವಿ ಮೇಲೆ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಮಾಡವುದು ಎಂದು ಷರಾ ಬರೆದಿರುತ್ತಾರೆ.

ಕನ್ನಡ ಅನುಷ್ಠಾನ ಮಂಡಳಿ (ನೊಂ), ನಂ. 97, 1ನೇ ಮಹಡಿ, 5ನೇ ಅಡ್ಡರಸ್ತೆ, ಗೀತಾಂಜಲಿ ಟಾಕೀಸ್ ಹತ್ತಿರ, ಮಲ್ಲೇಶ್ವರಂ. ಬೆಂಗಳೂರು – 03, ಸಂಸ್ಥೆಯವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಸರ್ಕಾರದ ಕನ್ನಡ ಅನುಷ್ಠಾನ ನೀತಿಯ ಅನುಗುಣವಾಗಿ ಕಳೆದ 12 ವರ್ಷಗಳಿಂದ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿತ್ತಿದ್ದು, ಪ್ರಥಮವಾಗಿ ಕನ್ನಡದಲ್ಲಿ ಟೆಲಿಪೋನ್ ಡೈರೆಕ್ಟರಿಯನ್ನು ಮುದ್ರಿಸಿ ಹಂಚುವ ಪ್ರಮುಖ ಸಾಧನೆ, ಕನ್ನಡ ಅಂಕಿ ಬಳಕೆ ಸಪ್ತಾಹದ ಮೂಲಕ ಯುವ ಜನಾಂಗದಲ್ಲಿ ಕನ್ನಡ ಅಂಕಿ ಬಳಕೆಯ ಕುರಿತು ವ್ಯಾಪಕ ಜಾಗೃತಿಯನ್ನುಂಟು

ಮಾಡುವುದು, ಕನ್ನಡ ನಾಮಫಲಕ ಸಪ್ತಾಹ, ಜನಮನದಲ್ಲಿ ಕನ್ನಡ ಜನಾಂದೋಲನ, ಕನ್ನಡ ಸಂಸ್ಕೃತಿ ಮೇಳ ಯುಗಾದಿ ಉತ್ಸವ, ನಿರುದ್ಯೋಗಿ ಯುವಕ ಯುವತಿಯರಿಗಾಗಿ ಕನ್ನಡದಲ್ಲಿಯೇ ವ್ಯಕ್ತಿತ್ವವಿಕಸನ ದೊರಕಿಸಿ ಕೊಡುವುದು, ಕಾನೂನು ವಲಯಗಳಲ್ಲಿ ಕನ್ನಡ ಬಳಕೆಗಾಗಿ ಉತ್ತೇಜಿಸುವ ಹಲವಾರು ಜನಾಂದೋಲನ ಕಾರ್ಯಕ್ರಮಗಳ ಮೂಲಕ ನಾಡಿನ ಭಾಷಾ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಲು ಶ್ರಮಿಸುತ್ತಿರುವುದಾಗಿ ತಿಳಿಸಿ, ಕನ್ನಡದ ಕ್ರಿಯಾತ್ಮಕ ಸಾಮಾಜಿಕ ಕಾರ್ಯ ನಿರ್ವಹಿಸುತ್ತಿರುವ ಮತ್ತು ಕನ್ನಡದ ಅಭಿವೃದ್ಧಿಗಾಗಿ ಸಾಂಸ್ಕೃತಿಕವಾಗಿ ಹಾಗೂ ಬೆಂಗಳೂರು ರಾಜಧಾನಿಯಲ್ಲಿ ಕನ್ನಡಕ್ಕೆ ಗೌರವ ದೊರಕಿಸಲು ಶ್ರಮಿಸುತ್ತಿರುವ ಜನಸಾಮಾನ್ಯರಲ್ಲಿ ಕನ್ನಡದ ಜಾಗೃತಿ ಮೂಡಿಸಿ ಸಾರ್ವಜನಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದ ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಬಲವರ್ಧನೆಗೆ ಶ್ರಮಿಸುತ್ತಿರುವ ಮತ್ತು ಕನ್ನಡ ಮಾಧ್ಯಮದವರಿಗೆ ಔದ್ಯೋಗಿಕ ವಿಕಸನ ಶಿಬಿರಗಳನ್ನು ಏರ್ಪಡಿಸುತ್ತಾ ಯಾಶಸ್ವಿಯಾಗಿರುವ ಕನ್ನಡ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಯೋಜನಿಗಳಿಗೆ ರೂ. 51.00 ಲಕ್ಷಗಳು ಖರ್ಚಾಗುತ್ತಿದ್ದು, ಪಾಲಿಕೆ ವತಿಯಿಂದ ರೂ. 50.00 ಲಕ್ಷ ಧನಸಹಾಯವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ.

ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ.. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 22–12–2010ರ ಟಿಪ್ಪಣಿಯನ್ನು ಒಪ್ಪುತ್ತಾ ರೂ : 2 ಲಕ್ಷ ಸಹಾಯಧನ ಮಂಜೂರು ಮಾಡುವುದೆಂದು ತೀರ್ಮಾನಿಸಲಾಯಿತು.**



## 07]. ವಿಷಯದ ಸಂಖ್ಯೆ :–ತೆಆಸ್ಥಾಸ/128/2010–11

ಆಯುಕ್ತರವರ ಟಿಪ್ಪಣಿ ದಿನಾಂಕ: 28–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಬೃಹತ್ ರಸ್ತೆಗಳು ವಿಭಾಗದ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| ಕ್ರ.ಸ | ಕಾಮಗಾರಿಗಳ ವಿವರಗಳು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Construction of swimming pool at Yelahanka (Air force station) | 495.00 |

| | | |
|---|---|---|
| 2 | Illumination of sports complex at HRTC | 190.00 |
| 3 | Renovation of Manoranjan Auditorium at HRTC | 128.75 |
| | Total Rs. | 813.75 |

ಕ್ರಮ ಸಂಖ್ಯೆ 1 ರ ಕಾಮಗಾರಿಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯು ದಿನಾಂಕ 28–8–2010 ರಂದು ಅನುಮೋದನೆ ನೀಡಿರುತ್ತದೆ.

ಕ್ರಮ ಸಂಖ್ಯೆ 2ರ ಕಾಮಗಾರಿಗೆ ಕಡತದ ಕಂಡಿಕೆ ಸಂಖ್ಯೆ 45 ರಲ್ಲಿ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ.

ಕ್ರಮ ಸಂಖ್ಯೆ 3ರ ಕಾಮಗಾರಿಗೆ ಕಡತದ ಕಂಡಿಕೆ ಸಂಖ್ಯೆ 48 ರಲ್ಲಿ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ.

| Sl. No. | Details of work | Amount (Rs.in lakhs) | WORK CODE |
|---|---|---|---|
| 1 | Construction of swimming pool at Yelahanka (Air force station) | 495.00 | 000-11-N-P-J-O-FO-001 |
| 2 | Illumination of sports complex at HRTC | 190.00 | 000-11-N-P-J-B-FO-001 |
| 3 | Renovation of Manoranjan Auditorium at HRTC | 128.75 | 000-11-M-P-J-B-SR-001 |
| | Total Rs. | 813.75 | |

ಮೇಲ್ಕಂಡ ಮೂರು ಕಾಮಗಾರಿಗಳಿಗೆ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಸದರಿ ಕಾಮಗಾರಿಗಳ ಅಂದಾಜು ಮೊತ್ತ ರೂ.813.75 ಲಕ್ಷಗಳನ್ನು 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ "ಸಂಚಾರಿ ಶಾಖೆ" ಪ್ರಧಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ "ಯಲಹಂಕ ಏರ್‌ಫೋರ್ಸ್‌ನ ಅಭಿವೃದ್ಧಿ ಕಾಮಗಾರಿಗಳು" ಎಂಬ ಉಪ ಲೆಕ್ಕ ಶೀರ್ಷಿಕೆಯನ್ನು ಸೃಜಿಸುವ ಷರತ್ತಿಗೆ ಒಳಪಡಿಸಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆದ ನಂತರ ಕಾಮಗಾರಿ ನಿರ್ವಹಿಸಲು ತಿಳಿಸಿ ಮೇಲ್ಕಂಡಂತೆ ಕಾಮಗಾರಿ ಸಂಕೇತವನ್ನು ನೀಡಲಾಗಿದೆ. ಕಡತದ ಕಂಡಿಕೆ 52 ರಲ್ಲಿ ಮಾನ್ಯ ಆಯುಕ್ತರವರು ಅನುಮೋದಿಸಿರುತ್ತಾರೆ.



ಆದ್ದರಿಂದ, ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ, 2010–11ನೇ ಸಾಲಿನ ಆಯವ್ಯಯದಲ್ಲಿ ಹೊಸದಾಗಿ ಲೆಕ್ಕ ಶೀರ್ಷಿಕೆಯನ್ನು ಸೃಜಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿಯನ್ನು ಮಂಡಿಸಿದೆ.

**ನಿರ್ಣಯ :– ಆಯುಕ್ತರ ದಿನಾಂಕ 28–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 08]. ವಿಷಯದ ಸಂಖ್ಯೆ :–ತೆಆಸ್ಥಾಸ/129/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)94/10–11, ದಿನಾಂಕ: 27–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಆರ್. ರಾಮಸ್ವಾಮಿ, ಗೌರವ ಕಾರ್ಯದರ್ಶಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ : ತೆ.ಆ/256/2009–10 ದಿ: 10.08.2009 ರಂದು ಅನುಮೋದಿಸಿರುವಂತೆ 2010–11 ನೇ ಸಾಲಿನ ವಾರ್ಷಿಕ ಅನುದಾನ ರೂ. 40,000/– (ರೂ. ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಬಿಲ್ ಗಳನ್ನು ತ್ರಿಪ್ರತಿಯಲ್ಲಿ ಸಲ್ಲಿಸುತ್ತಿರುವುದಾಗಿ ತಿಳಿಸಿ, ಸಂಸ್ಥೆಯ ಆಡಳಿತ ಮಂಡಳಿಯ ಸರ್ವಸದಸ್ಯರ ಸಭೆಯ ವರದಿ, ದಿ: 01–4–2009 ರಿಂದ 31–03–2010 ರವರೆಗೆ ಕೈಗೊಂಡಿರುವ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯ ಕಾರ್ಯಕ್ರಮಗಳು, ವಿಶೇಷ ಕಾರ್ಯಕ್ರಮಗಳು, ಡಿ.ವಿ.ಜಿ. ಸ್ಮಾರಕ ಭವನ ಸಂಸ್ಥೆ ಕಾರ್ಯಕಾರಿ ಸಮಿತಿ, ಆರ್ಥಿಕ ಸ್ಥಿತಿಯ ಲೆಕ್ಕ ಪತ್ರಗಳು, ವಾಚನಾಲಯ ಮತ್ತು ಗ್ರಂಥಾಲಯದ ಮಾಹಿತಿಗಳನ್ನು ಒದಗಿಸುತ್ತಾ ಪಾಲಿಕೆಯಲ್ಲಿ ಸಂಘ ಸಂಸ್ಥೆಗಳ ಲೆಕ್ಕ ಶೀರ್ಷಿಕೆಯಡಿ ಮೀಸಲಿಟ್ಟಿರುವ ಅನುದಾನವನ್ನು ತ್ವರಿತ ಗತಿಯಲ್ಲಿ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (12) ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ರವರಿಗೆ ನಿಗಧಿ ಪಡಿಸಲಾಗಿರುವ ರೂ. 1.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 27–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 09]. ವಿಷಯದ ಸಂಖ್ಯೆ :–ತೆಆಸ್ಥಾಸ/130/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)92/10–11, ದಿನಾಂಕ: 27–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಗೀತಾ ನೃತ್ಯ ಶಾಲಾ (ರಿ), 104, 4ನೇ ಕ್ರಾಸ್, 7ನೇ ಮುಖ್ಯ ರಸ್ತೆ, ಜೆ.ಪಿ. ನಗರ, 3ನೇ ಹಂತ, (ವಿಜಯ ಬ್ಯಾಂಕ್ ರಸ್ತೆ), ಬೆಂಗಳೂರು – 560 078. ರವರು ಹೆಸರಾಂತ ಕಲಾವಿದೆ ಹಾಗೂ ರಾಜ್ಯೋತ್ಸವ ತಜ್ಞ ಪ್ರಶಸ್ತಿ ಸೇರಿ 5 ರಾಜ್ಯ ಪ್ರಶಸ್ತಿ ಪುರಸ್ಕೃತವಾದ ನೃತ್ಯ ನಿರ್ದೇಶಕಿ ಮತ್ತು ಕಾರ್ಯದರ್ಶಿ ಗೀತಾಬಾಲಿ ರವರು ನೀಡಿರುವ ಪತ್ರವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಸದರಿಯವರು ತಮ್ಮ ಮನವಿಯಲ್ಲಿ ತಮ್ಮ ಸಂಸ್ಥೆಯ ವತಿಯಿಂದ ಕರ್ನಾಟಕ ನೃತ್ಯ ವೈಭವ (ನೃತ್ಯ ರೂಪಕ) ಎರಡು ದಿನದ ಸಾಂಸ್ಕೃತಿಕ ಕಾರ್ಯಕ್ರಮವನ್ನು ದಿನಾಂಕ 24, 25 ಡಿಸೆಂಬರ್ 2010 ರಂದು ಹಮ್ಮಿಕೊಂಡಿದ್ದು ಸದರಿ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ರೂ. 2,50,000/– ಗಳ ಅನುದಾನವನ್ನು ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸಿ, ಗೀತಾ ನೃತ್ಯ ಶಾಲಾ (ರಿ) ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 1.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.



ಪ್ರಸ್ತಾವಿತ ಸಂಸ್ಥೆಯವರು ಮನವಿ ಸಲ್ಲಿಸಿ, ತಮ್ಮ ಶಾಲೆಯು 1988 ರಲ್ಲಿ ಸ್ಥಾಪನೆಯಾಗಿದ್ದು, ಸುಮಾರು 30 ವರ್ಷಗಳಿಂದ ಅನೇಕ ವಿದ್ಯಾರ್ಥಿಗಳಿಗೆ ನೃತ್ಯ ಶಿಕ್ಷಣವನ್ನು ನೀಡಿರುವುದಾಗಿ, ಹಾಗೂ ರಮಣ ಮಹರ್ಷಿ ಅಂಧರ ಶಾಲೆಯಲ್ಲಿ ಅಂಧ ಮಕ್ಕಳಿಗೆ ನೃತ್ಯ ಶಿಕ್ಷಣವನ್ನು ನೀಡಿದ್ದು, ಭರತ ನಾಟ್ಯ ಮತ್ತು ಕೂಚಿಪುಡಿ ನೃತ್ಯದಲ್ಲಿ ಪರಿಣತಿ ಹೊಂದಿದ್ದು ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ನೃತ್ಯ

ಪ್ರದರ್ಶನಗಳನ್ನು ನೀಡಿ, 2008ನೇ ಸಾಲಿನ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ, 2009 ನೇ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, 2003 ನೇ ಸಾಲಿನ ವಿಶೇಷ ಶಿಕ್ಷಕರ ರಾಜ್ಯ ಪ್ರಶಸ್ತಿ, ಪಾಲಿಕೆಯ 2001 ನೇ ಸಾಲಿನ ಕೆಂಪೇಗೌಡ ಪ್ರಶಸ್ತಿ ಮತ್ತು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿಯನ್ನು ಪಡೆದಿರುವುದಾಗಿ ತಿಳಿಸುತ್ತಾ, ಕರ್ನಾಟಕ ನೃತ್ಯ ವೈಭವ (ನೃತ್ಯ ರೂಪಕ) ಎರಡು ದಿನದ ಸಾಂಸ್ಕೃತಿಕ ಕಾರ್ಯಕ್ರಮವನ್ನು ದಿನಾಂಕ 24, 25 ಡಿಸೆಂಬರ್ 2010 ರಂದು ಹಮ್ಮಿಕೊಂಡಿದ್ದು ಸದರಿ ಕಾರ್ಯಕ್ರಮಕ್ಕೆ ಅಂದಾಜು ರೂ. 2,50,000/- ಗಳು ವೆಚ್ಚವಾಗುತ್ತಿದ್ದು, ಸದರಿ ಮೊತ್ತವನ್ನು ಪಾಲಿಕೆ ವತಿಯಿಂಧ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/- ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 27-12-2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.: 25,000-00 ಸಹಾಯಧನ ಮಂಜೂರು ಮಾಡುವುದೆಂದು ತೀರ್ಮಾನಿಸಲಾಯಿತು.**

## 10]. ವಿಷಯದ ಸಂಖ್ಯೆ :-ತೆಆಸ್ಥಾಸ/73/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)95/09-10, ದಿನಾಂಕ: 27-12-2010 ರಲ್ಲಿ ವಿವರಿಸಿರುವಂತೆ, ವಾಸವಿ ಯುವಜನ ಸಂಘ, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಶ್ರೀ ವಾಸವಿ ದೇವಸ್ಥಾನ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. ಇವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ದಿನಾಂಕ : 12-02-2010 ರಂದು ನಗೆಹಬ್ಬ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೋಸ್ಕರ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಗಳನ್ನು ಕಳೆದ ವರ್ಷವೂ ಸಹ ಆಚರಿಸಿದ್ದು, ಸುಮಾರು ರೂ. 8.00 ಲಕ್ಷಗಳು ಖರ್ಚಾಗುತ್ತದೆಂದು, ಪಾಲಿಸಿಕೊಂಡು ರೂ. 8.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿದ್ದರ ಹಿನ್ನಲೆಯಲ್ಲಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 15-11-2010 ರಂದು ನಡೆದ ನಡವಳಿಗಳ ವಿಷಯದ ಸಂಖ್ಯೆ: ತೆಆಸ್ಥಾಸ/73/2010-11ರನ್ವಯ ಸದರಿ ಸಂಘಕ್ಕೆ ರೂ 1.00 ಲಕ್ಷ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪ್ರಸ್ತಾವಿತ ಸಂಸ್ಥೆಯವರು ಮತ್ತೊಮ್ಮೆ ಪತ್ರ ಬರೆದು ತಮ್ಮ ಸಂಘದ ವತಿಯಿಂದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ದಿ: 12-02-2010 ರಂದು ನಗೆಹಬ್ಬ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೋಸ್ಕರ ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮವನ್ನು ಪ್ರತಿ ವರ್ಷವು ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿ, ಸದರಿ ಕಾರ್ಯಕ್ರಮಕ್ಕಾಗಿ ನಗರ ಪಾಲಿಕೆ ವತಿಯಿಂದ ರೂ. 8.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿ ಮನವಿಯನ್ನು ಸಲ್ಲಿಸಲಾಗಿತ್ತೆಂದು, ಆದರೆ ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿರುವುದಾಗಿ ತಿಳಿದು ಬಂದಿದು, ತಮ್ಮ ಮನವಿಯನ್ನು ಪುನರ್ ಪರಿಶೀಲಿಸಿ ತಮ್ಮ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗಾಗಿ ಪಾಲಿಕೆಯ ಸಂಘ ಸಂಸ್ಥೆಗಳ ಅನುದಾನದಡಿಯಲ್ಲಿ ರೂ. 8.00 ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡಬೇಕೆಂದು ಮತ್ತೊಮ್ಮೆ ಕೋರಿರುತ್ತಾರೆ.

ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಸದಸ್ಯರು ವಾರ್ಡ್-65 ರವರು ಸಹ ಮಾನ್ಯ ಆಯುಕ್ತರಿಗೆ ಪತ್ರ ಬರೆದು ವಾಸವಿ ಯುವಜನ ಸಂಘ ರವರು ನಗೆಹಬ್ಬ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 8.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಲಾಗಿದ್ದು, ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿರುವುದಾಗಿ ತಿಳಿಸಿರುತ್ತಾರೆಂದು, ಸದರಿ ಸಂಸ್ಥೆಯು ಪ್ರತಿ ವರ್ಷವು ಉತ್ತಮ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಸದರಿ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಾಲಿಕೆಯ ಸಂಘ ಸಂಸ್ಥೆಗಳಿಗಾಗಿ ಮೀಸಲಿರಿಸಿರುವ ಅನುದಾನದಲ್ಲಿ ಕನಿಷ್ಠ ರೂ. 5.00 ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು

ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 27–12–2010ರ ಟಿಪ್ಪಣಿಯನ್ನು ಒಪ್ಪುತ್ತಾ ದಿನಾಂಕ 15–11–2010ರಲ್ಲಿ ರೂ : ಒಂದು ಲಕ್ಷ ಸಹಾಯಧನ ಮಂಜೂರು ಮಾಡಿದ್ದು, ಈಗ ಹೆಚ್ಚುವರಿಯಾಗಿ ರೂ : 4ಲಕ್ಷ ಸಹಾಯಧನ ಮಂಜೂರು ಮಾಡುವುದೆಂದು ಒಪ್ಪಿದೆ.**

## 11]. ವಿಷಯದ ಸಂಖ್ಯೆ :–ತೆಆಸ್ಥಾಸ/131/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)93/10–11, ದಿನಾಂಕ: 29–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು, ಬೆಂಗಳೂರು ಅಂತಾರಾಷ್ಟ್ರೀಯ ಕಲಾ ಮಹೋತ್ಸವ ಸಮಿತಿಯು ದಿನಾಂಕ 01–10–2010 ರಿಂದ 10–10–2010 ರವರೆಗೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನ, ಸುಚಿತ್ರ ಸಿನೆಮಾ ಮತ್ತು ಕಲ್ಚರಲ್ ಅಕಾಡೆಮಿ, ಓಪಸ್, ಮಂಗಳ ಮಂಟಪ ಹಾಗೂ ಚೌಡಯ್ಯ ಸ್ಮಾರಕ ಭವನಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಳಿಸಿರುವ ಸಮಿತಿಯ ನಿರ್ದೇಶಕರಾದ ವೀಣಾ ಮೂರ್ತಿ ವಿಜಯ್ ರವರು ಕಲಾ ಮಹೋತ್ಸವಕ್ಕಾಗಿ ಮಹಾನಗರ ಪಾಲಿಕೆಯಿಂದ ಮೀಸಲಿಟ್ಟಿರುವ ಅನುದಾನವನ್ನು ಬಿಡುಗಡೆ ಮಾಡಲು ಕೋರಿ ಮನವಿಯೊಂದಿಗೆ ಫೋಟೋಗಳು, ದಿನಪತ್ರಿಕೆಯ ಜಾಹೀರಾತುಗಳ ಪ್ರತಿಗಳನ್ನು ಸಲ್ಲಿಸಿರುವುದಾಗಿ ತಿಳಿಸಿ, 2010–11 ನೇ ಸಾಲಿನ ಆಯವ್ಯಯದಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ಕಲಾ ಮಹೋತ್ಸವ ಸಮಿತಿಗಾಗಿ ರೂ. 10.00 ಗಳನ್ನು ಕಾಯ್ದಿರಿಸಲಾಗಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಡಾ॥ ಅಶ್ವತ್ ನಾರಾಯಣ್ ಸಿ. ಎನ್. ಮಾನ್ಯ ಶಾಸಕರು, ಮಲ್ಲೇಶ್ವರಂ ಕ್ಷೇತ್ರ, ರವರು ಸದರಿ ಸಂಸ್ಥೆಯವರಿಗೆ ರೂ. 10.00 ಗಳ ಪ್ರಾಯೋಜಕತ್ವದ ಮೊತ್ತವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (43) ರಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ಕಲಾ ಮಹೋತ್ಸವಕ್ಕೆ ನಿಗಧಿ ಪಡಿಸಲಾಗಿರುವ ರೂ. 10.00 ಲಕ್ಷಗಳ (ಹತ್ತು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 29–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 12]. ವಿಷಯದ ಸಂಖ್ಯೆ :–ತೆಆಸ್ಥಾಸ/132/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)91/10–11, ದಿನಾಂಕ: 27–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನಾಗರಾಜ್, ಮಾನ್ಯ ವಿರೋಧ ಪಕ್ಷದ ನಾಯಕರು, ಪತ್ರ ಬರೆದು ಆದರ್ಶ ಹಿಂದುಳಿದ ವರ್ಗಗಳ ವೇದಿಕೆ (ರಿ), ನಂ. 290, 20ನೇ ಮುಖ್ಯರಸ್ತೆ, ನಂದಿನಿ ಬಡಾವಣೆ, ಬೆಂಗಳೂರು – 560 096. ನಂದಿನಿ ಬಡಾವಣೆ, ಬೆಂಗಳೂರು ರವರು ಸಮಾಜದ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಗಳಿಗೆ ಪಾಲಿಕೆ ವತಿಯಿಂದ ಸಹಾಯ ಕೋರಿ ಸಲ್ಲಿಸಿರುವ ಮನವಿ ಪತ್ರವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ವೇದಿಕೆ ವತಿಯಿಂದ 2009–10 ನೇ ಸಾಲಿನಲ್ಲಿ ಬಡ ರೋಗಿಗಳಿಗೆ ವೈದ್ಯಕೀಯ ಸಹಾಯ ಮತ್ತು ಬಡ ವಿದ್ಯಾರ್ಥಿಗಳಿಗೆ ಪುಸ್ತಕ, ಯೂನಿಫಾರಂ, ಮುಂತಾದ ಸಹಾಯ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಬಗ್ಗೆ ಹಾಗೂ ಸದರಿ ಸಂಸ್ಥೆಯ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧಕರ ತಪಾಸಣೆಗೆ ಒಳಪಡಿಸಿ, ಲೆಕ್ಕ ಪರಿಶೋಧನಾ ವರದಿ ದೃಢೀಕರಿಸಿರುವ ಕುರಿತು ಹಾಗೂ ಸದರಿ ಸಂಸ್ಥೆಯ ವತಿಯಿಂದ

2010–11 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಹಿತದೃಷ್ಟಿಯಿಂದ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದ್ದು, ಪಾಲಿಕೆ ವತಿಯಿಂದ ಧನ ಸಹಾಯವನ್ನು ಕೋರಿರುತ್ತಾರೆಂದು ತಿಳಿಸಿ, ಪ್ರಸ್ತಾವಿತ ವಿಷಯದಲ್ಲಿ ಉದ್ದೇಶಿತ ಕಾರ್ಯ ಯಶಸ್ವಿಯಾಗಲು



ಅನುಕೂಲವಾಗುವಂತೆ 2010–11 ನೇ ಸಾಲಿನ ಬಿಬಿಎಂಪಿ ಆಯವ್ಯಯದಲ್ಲಿ ರೂ. 2.00 ಲಕ್ಷ ಅನುದಾನವನ್ನು ಕಾಯ್ದಿರಿಸಿರುವುದರಿಂದ, ಆದರ್ಶ ಹಿಂದುಳಿದ ವರ್ಗಗಳ ವೇದಿಕೆ (ರಿ) ರವರ ಕೋರಿಕೆಯನ್ನು ಪರಿಗಣಿಸಿ ನಿಗಧಿತ ಅನುಧಾನವನ್ನು ಬಿಡುಗಡೆ ಮಾಡಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಸದರಿ ಪ್ರಸ್ತಾವಿತ ಸಂಸ್ಥೆಯವರು ಮನವಿ ಸಲ್ಲಿಸಿ, 2009–10 ನೇ ಸಾಲಿನಲ್ಲಿ ಬಡ ರೋಗಿಗಳಿಗೆ ವೈದ್ಯಕೀಯ ಸಹಾಯ ಮತ್ತು ಬಡ ವಿದ್ಯಾರ್ಥಿಗಳಿಗೆ ಪುಸ್ತಕ, ಯೂನಿಫಾರಂ, ಮುಂತಾದ ಸಹಾಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರೈಸಿದ್ದು, 2010–11 ನೇ ಸಾಲಿನಲ್ಲಿ ಕಡುಬಡವರಿಗೆ ತರಕಾರಿ ಮಾರಲು ತಳ್ಳುವ ಗಾಡಿಗಳನ್ನು ಒದಗಿಸುವುದು, ಅಂಗವಿಕಲ ನಿರುದ್ಯೋಗಿ ಯುವಕರಿಗೆ ಕಂಪ್ಯೂಟರ್ ಕೊಡಿಸುವುದು, ಕಿವುಡರಿಗೆ ಮತ್ತು ಕುರುಡರಿಗೆ ಬೇಕಾಗುವ ಸಾಧನಗಳನ್ನು ಒದಗಿಸುವುದು, ಸರ್ಕಾರಿ ಮತ್ತು ಅರೆ ಸರ್ಕಾರಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಸಮವಸ್ತ್ರ ಒದಗಿಸುವ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, 5 ರಿಂದ 6 ಲಕ್ಷಗಳು ವೆಚ್ಚವಾಗುತ್ತಿದ್ದು, ಪಾಲಿಕೆ ವತಿಯಿಂದ ಹೆಚ್ಚಿನ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (29) ರಲ್ಲಿ ಆದರ್ಶ ಹಿಂದುಳಿದ ವರ್ಗಗಳ ವೇದಿಕೆ ರವರಿಗೆ ನಿಗಧಿ ಪಡಿಸಲಾಗಿರುವ ರೂ. 2.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 27–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 13]. ವಿಷಯದ ಸಂಖ್ಯೆ :–ತೆಆಸ್ಥಾಸ/133/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)39/10–11, ದಿನಾಂಕ: 27–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ತಮ್ಮ ಪತ್ರದೊಂದಿಗೆ ಶ್ರೀ ಎಂ. ನಾಗರಾಜ್, ಮಾನ್ಯ ವಿರೋಧ ಪಕ್ಷದ ನಾಯಕರು ಬರೆದಿರುವ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಚಾಲುಕ್ಯ ಡಾ|| ರಾಜ್ ಕುಮಾರ್ ಪ್ರತಿಮೆ ಪ್ರತಿಷ್ಠಾಪನ ಟ್ರಸ್ಟ್ (ನೋಂ) ರವರ ವತಿಯಿಂದ ಕುರುಬರಹಳ್ಳಿ ಬಸ್ ನಿಲ್ದಾಣದಲ್ಲಿ ಹಂಪಿ ಕಲ್ಲಿನ ರಥದ ಮೇಲೆ ಡಾ|| ರಾಜ್ ಕುಮಾರ್ ರವರ ಕಂಚಿನ ಪ್ರತಿಮೆ ಪ್ರತಿಷ್ಠಾನಕ್ಕಾಗಿ ಕಾಯ್ದಿರಿಸಲಾಗಿದ್ದ ರೂ. 15.00 ಲಕ್ಷಗಳಲ್ಲಿ ನಗರ ಪಾಲಿಕೆಯ ವತಿಯಿಂದ ದಿನಾಂಕ 16–11–2010 ರಂದು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಉಳಿಕೆ ಮೊತ್ತ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆಂದು ತಿಳಿಸಿ, ಸದರಿಯವರ ಮನವಿಯನ್ನು ಪರಿಗಣಿಸಿ, ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು

ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಚಾಲುಕ್ಯ ಡಾ॥ ರಾಜ್ ಕುಮಾರ್ ಪ್ರತಿಮೆ ಪ್ರತಿಷ್ಠಾಪನ ಟ್ರಸ್ಟ್ ರವರಿಗೆ ಕ್ರ.ಸಂ. (48) ರಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ನಿಗಧಿ ಪಡಿಸಲಾಗಿದ್ದ ಹಿನ್ನೆಲೆಯಲ್ಲಿ ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ.
ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೊಮ್ಮೆ ಪತ್ರ ಬರೆದು ಪ್ರಸ್ತಾವಿತ ಟ್ರಸ್ಟ್‌ಗೆ ರೂ. 5.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಆದ್ದರಿಂದ ಮೇಲ್ಕಂಡ ಲೆಕ್ಕ ಶೀರ್ಷಿಕೆಯಡಿ ಉಳಿಕೆ ಅನುದಾನದಲ್ಲಿ



ಸದರಿ ಟ್ರಸ್ಟ್‌ಗೆ ರೂ. 5.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 27–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 14]. ವಿಷಯದ ಸಂಖ್ಯೆ :–ತೆಆಸ್ಥಾಸ/134/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)83/10–11, ದಿನಾಂಕ: 23–12–2010 ರಲ್ಲಿ ವಿವರಿಸಿರುವಂತೆ, ಅಖಿಲ ಕರ್ನಾಟಕ ಮಕ್ಕಳ ಕೂಟ (ರಿ), ಶ್ರೀಮತಿ ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಂಗಳೂರು – 560 018. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಅಖಿಲ ಕರ್ನಾಟಕ ಮಕ್ಕಳ ಕೂಟವು 1938 ರಲ್ಲಿ ಸಮಾಜ ಸೇವಕಿ, ಮಹಿಳಾ ಮತ್ತು ಮಕ್ಕಳ ಸಾಹಿತಿ ಶ್ರೀಮತಿ ಆರ್. ಕಲ್ಯಾಣಮ್ಮನವರಿಂದ ಸ್ಥಾಪಿತವಾಗಿ ಸುಮಾರು 70 ವರ್ಷಗಳಿಂದಲೂ ಮಕ್ಕಳ ಮಾನಸಿಕ, ಸಾಮಾಜಿಕ, ದೈಹಿಕ ಮತ್ತು ನೈತಿಕ ಹಾಗೂ ಮುಖ್ಯವಾಗಿ ಶಿಸ್ತಿನ ಬೆಳವಣಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಾವುದೇ ರೀತಿಯ ಆದಾಯದ ಪ್ರತಿಪಲಾಪೇಕ್ಷೆಯಿಲ್ಲದೇ ನಿಸ್ವಾರ್ಥತೆಯಿಂದ ಕೆಲಸ ಮಾಡುತ್ತಿರುವ ಕರ್ನಾಟಕದ ಐತಿಹಾಸಿಕ ಹಾಗೂ ಅತಿ ಹಿರಿಯ ಮಕ್ಕಳ ಸಂಸ್ಥೆಯಾಗಿದ್ದು, ಇತರೆ ಚಟುವಟಿಕೆಗಳ ಜೊತೆಗೆ 28 ರಾಜ್ಯ ಮಟ್ಟದ ಮಕ್ಕಳ ಸಮ್ಮೇಳನ ಮತ್ತು ಬೇಸಿಗೆ ರಜೆಯಲ್ಲಿ ಒಂದು ತಿಂಗಳ ಕಾಲ ಮಕ್ಕಳ ಬೇಸಿಗೆ ಶಿಕ್ಷಣ ಹಾಗೂ ಮನರಂಜನಾ ಶಿಬಿರವನ್ನು ಕಳೆದ 44 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿ, ಈ ಮಕ್ಕಳ ಕೂಟಕ್ಕೆ ಮಾಜಿ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು, ರಾಷ್ಟ್ರ ಹಾಗೂ ರಾಜ್ಯ ಮಟ್ಟದ ನಾಯಕರುಗಳು, ಕರ್ನಾಟಕದ ರಾಜ್ಯಪಾಲರುಗಳು, ಮುಖ್ಯಮಂತ್ರಿಗಳು ಭೇಟಿ ನೀಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದಾಗಿ ತಿಳಿಸಿರುತ್ತಾರೆ.
ಅಖಿಲ ಕರ್ನಾಟಕ ಮಕ್ಕಳ ಕೂಟದಲ್ಲಿ ಇನ್ನೂ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಕ್ಕೆ ಹಾಗೂ ಮಕ್ಕಳ ಕೂಟದ ಸ್ಥಾಪಕಿ ಶ್ರೀಮತಿ ಆರ್. ಕಲ್ಯಾಣಮ್ಮನವರ ಸ್ಮಾರಕ ಭವನ ಸಮಿತಿ ವತಿಯಿಂದ 'ಮಕ್ಕಳ ರಂಗ ಮಂದಿರ', ಪುಸ್ತಕ ಭಂಡಾರ ಸ್ಥಾಪಿಸಲಾಗಿದ್ದು, ರಂಗಮಂದಿರದಲ್ಲಿ ಈಗಾಗಲೇ ಮಕ್ಕಳ ಚಟುವಟಿಕೆಗಳಾದ ನಾಟಕ, ಚರ್ಚಾಸ್ಪರ್ಧೆ ಡ್ರಾಯಿಂಗ್, ಪೈಂಟಿಂಗ್, ನೃತ್ಯ, ಸಂಗೀತ, ಯೋಗ, ಕರಾಟೆ ಇನ್ನೂ ಮುಂತಾದ ಕಾರ್ಯಚಟುವಟಿಕೆಗಳು ಪ್ರತಿದಿನವೂ ನಡೆಯುತ್ತಿದ್ದು, ದಿನಾಂಕ 13.05.2000 ರಂದು ಸ್ಮಾರಕ ಭವನದ ಶಿಲಾನ್ಯಾಸ ಸಭಾರಂಭವು ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣ ಅವರಿಂದ ನೆರೆವೇರಿತು. ಸರ್ಕಾರದ ವತಿಯಿಂದ ರೂ. 25 ಲಕ್ಷಗಳನ್ನು ಬಿಡುಗಡೆ ಮಾಡಿದ್ದರು.

ಇದೇ ಸಂದರ್ಭದಲ್ಲಿ ಹಾಜರಿದ್ದ ಅಂದಿನ ಪೂಜ್ಯ ಮಹಾಪೌರರು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 10 ಲಕ್ಷ ಹಣವನ್ನು ಮಂಜೂರು ಮಾಡುವುದಾಗಿ ಘೋಷಿಸಿದ್ದರೆಂದು, ಇದುವರೆವಿಗೂ ಮಕ್ಕಳ ಕೂಟಕ್ಕೆ ಸದರಿ ಮೊತ್ತವು ತಲುಪಿಲ್ಲವೆಂದು ಹಾಗೂ ಪ್ರತಿ ವರ್ಷ 20 ಸಾವಿರ ರೂ.ಗಳನ್ನು ಅನುದಾನ ಕೊಡುತ್ತಿದ್ದುದಾಗಿ, ಆದರೆ ಎರಡು ವರ್ಷಗಳಿಂದ ಆ ಅನುದಾನವೂ ಬರುತ್ತಿಲ್ಲವೆಂದು ಪ್ರಸಕ್ತ ಸಾಲಿನಲ್ಲಿ ಈ ಅನುದಾನವನ್ನು 40 ಸಾವಿರ ರೂ.ಗಳಿಗೆ ಏರಿಸಬೇಕಾಗಿ ವಿನಂತಿಸಿರುತ್ತಾರೆ. ಪಾಲಿಕೆ ವತಿಯಿಂದ ಸಾಧ್ಯವಾದಷ್ಟು ಅನುದಾನವನ್ನು ಕೊಟ್ಟು ಈ ಮಕ್ಕಳ ಕೂಟವು ಇನ್ನೂ ಉತ್ತಮ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸಲು ಸಹಕರಿಸಬೇಕೆಂದು ಕೋರುತ್ತಿದ್ದಾರೆ.

ಪ್ರಸ್ತಾವಿತ ಸಂಸ್ಥೆಯವರು ಮತ್ತೊಂದು ಮನವಿ ಸಲ್ಲಿಸಿ, ನವೆಂಬರ್ 14 ರಂದು ಮಕ್ಕಳ ಕೂಟದ ಆವರಣದಲ್ಲಿ ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವವನ್ನು ಹಮ್ಮಿಕೊಂಡಿದ್ದು, ಸುತ್ತ ಮುತ್ತಲಿನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಮಕ್ಕಳು ಅನೇಕ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ



ಭಾಗವಹಿಸುತ್ತಿರುವುದಾಗಿ ತಿಳಿಸಿ, ಪಾಲಿಕೆ ವತಿಯಿಂದ ಧನ ಸಹಾಯವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ,

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ.

ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಮಾರ್ಗಸೂಚಿಗಳನ್ವಯ ಸದರಿ ಸಂಸ್ಥೆಗೆ ರೂ.. 10,000/- (ರೂ.. ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುಲು ಅವಕಾಶವಿರುತ್ತದೆ. ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 23-12-2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ : 25,000-00 ಸಹಾಯಧನ ಮಂಜೂರು ಮಾಡುವುದೆಂದು ತೀರ್ಮಾನಿಸಿದೆ.**

## 15]. ವಿಷಯದ ಸಂಖ್ಯೆ :-ತೆಆಸ್ಥಾಸ/135/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)95/10-11, ದಿನಾಂಕ: 27-12-2010 ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಎಸ್. ಶಾಂತಿ, ಕರಾಟೆ ಪಟು, ನಂ. 199, 1ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆ, ಬಾಪೂಜಿನಗರ, ಬೆಂಗಳೂರು-26 ರವರು ಆಯುಕ್ತರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, 2010 ಡಿಸೆಂಬರ್ 23 ರಿಂದ 26 ರವರೆಗೆ ನವದೆಹಲಿಯಲ್ಲಿ ನಡೆಯಲಿರುವ 25ನೇ ರಾಷ್ಟ್ರೀಯ ಮತ್ತು 4ನೇ ಅಂತರ ರಾಷ್ಟ್ರೀಯ ಮಟ್ಟದ ತೇಕವಾನ್-ಡೊ ಸ್ಪರ್ಧೆ ನಡೆಯಲಿದ್ದು, ತಾನು ಅದರಲ್ಲಿ ಭಾವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುವ

ತಮಗೆ ನವದೆಹಲಿಗೆ ಹೋಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಪಾಲಿಕೆ ವತಿಯಿಂದ ಸಹಾಯಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕರಾಟೆಪಟುವಿನ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿಯವರಿಗೆ ರೂ. 10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 27–12–2010ರ ಟಿಪ್ಪಣಿಯನ್ನು ಒಪ್ಪಿದೆ.**



## 16]. ವಿಷಯದ ಸಂಖ್ಯೆ :–ತೆಆಸ್ಥಾಸ/136/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)77/10–11, ದಿನಾಂಕ: 23–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಎಂ.ಕೆ. ಅಯ್ಯಪ್ಪ, ಐ.ಎ.ಎಸ್. ಉಪ ಆಯುಕ್ತರು ಮತ್ತು ಜಿಲ್ಲಾ ದಂಡನಾಧಿಕಾರಿಗಳು, ಬೆಂಗಳೂರು ಜಿಲ್ಲೆ. ಇವರು ಪತ್ರ ಬರೆದು ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಕರ್ನಾಟಕ, ದಿ ಬೆಂಗಳೂರ್ ಸೌತ್ ಡಿಸ್ಟ್ರಿಕ್ಟ್ ಅಸೋಸಿಯೇಷನ್, ರವರ ವತಿಯಿಂದ 26ನೇ ಕರ್ನಾಟಕ ರಾಜ್ಯ ಜಾಂಬೋರೇಟ್ ಅನ್ನು ಸಿ.ಆರ್.ಫಿ.ಎಫ್, ಟ್ರೈನಿಂಗ್ ಸೆಂಟರ್, ತರಳು ಹಳ್ಳಿ, ಕಗ್ಗಲಿಪುರ, ಬೆಂಗಳೂರು – 82 ಇಲ್ಲಿ ದಿನಾಂಕ 22–12–2010 ರಿಂದ 2–01–2011 ರವರೆಗೆ ಆಯೋಜಿಸಿರುವುದಾಗಿ ತಿಳಿಸಿ, ಭಾರತೀಯ ಸ್ಕೌಟ್ ಅಂಡ್ ಗೈಡ್ಸ್ ಸಂಸ್ಥೆಯು, ಒಂದು ಸ್ವಯಂ, ಶಿಕ್ಷಣ, ಅಂತರ ರಾಷ್ಟ್ರೀಯ ಚಳುವಳಿಯಾಗಿದ್ದು, ಯಾವುದೇ ಎಲ್ಲೆ, ಬೇಧ ಇಲ್ಲದ ಲಾಭ ರಹಿತವಾಗಿ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಿದ್ದು, 1907 ರಲ್ಲಿ ಇದರ ಸಂಸ್ಥಾಪಕರಾದ ಲಾರ್ಡ್ ಬಾಡನ್ ಪೌವೆಲ್ ರವರ ತತ್ವಗಳ ಆಧಾರದಲ್ಲಿ ರೂಪುಗೊಂಡಿತೆಂದು, ಸದಸ್ಯರನ್ನು ಒಬ್ಬ ಜವಾಬ್ದಾರಿಯುತ ಪೌರರನ್ನಾಗಿಸುವುದು ಮುಖ್ಯವಾದ ಧ್ಯೇಯೋದ್ದೇಶವಾಗಿರುವುದಾಗಿ ತಿಳಿಸಿರುತ್ತಾರೆ.

ಜಾಂಬೋರೇಟ್ ಹೆಚ್ಚಿನ ಸಂಖ್ಯೆಯಲ್ಲಿ ಸಮವಸ್ತ್ರದಾರಿ ಸ್ಕೌಟ್ ಅಂಡ್ ಗೈಡ್ಸ್‌ರನ್ನು ಒಂದೆಡೆ ಸೇರಿಸುವುದಾಗಿದ್ದು, ಭಾಗವಹಿಸುವವರಲ್ಲಿ ಸಮುದಾಯ ಸೇವೆಗೆ ಅಗತ್ಯವಿರುವ ಪ್ರತಿಭೆಯನ್ನು ಹೊರತರುವುದರೊಂದಿಗೆ ಯುವಕರಲ್ಲಿ ರಾಷ್ಟ್ರೀಯ ಭಾವೈಕ್ಯತೆ, ಸೇವೆ, ಶಿಸ್ತು, ದೇಶ ಪ್ರೇಮ ಮತ್ತು ಶಾಂತಿಯುತ ಸಹ ಬಾಳ್ವೆಯನ್ನು ಕುರಿತು ಜಾಗೃತಿ ಮೂಡಿಸುವುದಾಗಿದೆ.

ಈ ಬಾರಿಯ ಜಾಂಬೋರೇಟ್ ವಿಶೇಷದಾಗಿದ್ದು, ಸುಮಾರು 10,000 ಸ್ಕೌಟ್ ಅಂಡ್ ಗೈಡ್ಸ್‌ಗಳು ರಾಜ್ಯದ ಮತ್ತು ನೆರೆ ರಾಜ್ಯಗಳಿಂದ ಭಾಗವಹಿಸುತ್ತಿರುವುದಾಗಿ ತಿಳಿಸಿ, ಸುಮಾರು 150 ಲಕ್ಷಗಳನ್ನು ಅಂದಾಜಿಸುವುದಾಗಿ ಪಾಲಿಕೆ ವತಿಯಿಂದ ಮುಖ್ಯ ಗ್ಯಾಲರಿ, ಭಾಷಣ ಪೀಠ ಮತ್ತು ಮುಖ್ಯ ವೇದಿಕೆಯ ಪ್ರಾಯೋಜಕತ್ವ ನೀಡಲು ಇದಕ್ಕೆ 8 ಲಕ್ಷ ರೂ.ಗಳಷ್ಟು ಅಂದಾಜು ಮಾಡಲಾಗಿರುವುದಾಗಿ ಈ ಮೊತ್ತವನ್ನು ಚೆಕ್ ಅಥವಾ ಡಿ.ಡಿ. ಮುಖೇನ ರಾಜ್ಯ ಕಾರ್ಯದರ್ಶಿ, ಭಾರತೀಯ ಸ್ಕೌಟ್ ಅಂಡ್ ಗೈಡ್ಸ್, ಕರ್ನಾಟಕ. ರವರ ಹೆಸರಿಗೆ ನೀಡಲು ಕೋರಿ ಈ ಮುಖೇನ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು

ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 23-12-2010ರ ಟಿಪ್ಪಣಿಯನ್ನು ಒಪ್ಪುತ್ತಾ ರೂ : ಒಂದು ಲಕ್ಷ ಸಹಾಯ ಧನ ಮಂಜೂರು ಮಾಡುವುದೆಂದು ತೀರ್ಮಾನಿಸಿದೆ.**

## 17]. ವಿಷಯದ ಸಂಖ್ಯೆ :-ತೆಆಸ್ಥಾಸ/137/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(1ಎ)ಪಿಆರ್/230/10-11, ದಿನಾಂಕ: 24-12-2010 ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಬೆಂಗಳೂರಿನ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ ತಮ್ಮೇಶ್ ಗೌಡ ರವರು ನೀಡಿರುವ ಮನವಿಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಳೆದ 60 ವರ್ಷಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದ್ದು, ಇವರು ದಿನಾಂಕ: 30 ಮತ್ತು 31 ಡಿಸೆಂಬರ್ 2010ರಂದು ವಿದ್ಯಾರ್ಥಿಗಳ ಅಂತರಾಜ್ಯ ಜೀವನ ದರ್ಶನ (SIEL) ಕಾರ್ಯಕ್ರಮಕ್ಕಾಗಿ ಬೆಂಗಳೂರಿಗೆ ಆಗಮಿಸುವ ಸುಮಾರು 90 ವಿದ್ಯಾರ್ಥಿಗಳಿಗಾಗಿ ಉಚಿತ ಊಟ, ವಸತಿ ಮತ್ತು ಸಭೆಗಳನ್ನು ನಡೆಸಲು ನಗರ ಪಾಲಿಕೆಯ ಐ.ಪಿ.ಪಿ. ಕೇಂದ್ರದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. (ಸಂಬಂಧಪಟ್ಟ ಪ್ರತಿಗಳನ್ನು ಲಗತ್ತಿಸಿದೆ)

ಈ ಸಂಬಂಧ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಬೆಂಗಳೂರು, ರವರು ದಿನಾಂಕ: 30 ಮತ್ತು 31 ಡಿಸೆಂಬರ್ 2010ರಂದು ವಿದ್ಯಾರ್ಥಿಗಳ ಅಂತರಾಜ್ಯ ಜೀವನ ದರ್ಶನ (SIEL) ಕಾರ್ಯಕ್ರಮಕ್ಕಾಗಿ



ಬೆಂಗಳೂರಿಗೆ ಆಗಮಿಸಲಿರುವ ಸುಮಾರು 90 ವಿದ್ಯಾರ್ಥಿಗಳಿಗಾಗಿ ಐ.ಪಿ.ಪಿ. ಕೇಂದ್ರ ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಉಚಿತ ಊಟ, ವಸತಿ ಮತ್ತು ಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-.**

## 18]. ವಿಷಯದ ಸಂಖ್ಯೆ :-ತೆಆಸ್ಥಾಸ/138/2010-11

ಆಯುಕ್ತರವರ ಟಿಪ್ಪಣಿ ದಿನಾಂಕ: 28-12-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷ ಆರ್ಥಿಕ (SEZ) Export Promotion Industrial Park (EPIP) ವಲಯದಲ್ಲಿ ರಸ್ತೆಗಳು ಮತ್ತು ಅಂಡರ್‌ಪಾಸ್ ನಿರ್ಮಾಣ ಮಾಡುವ ಕಾಮಗಾರಿಗಳನ್ನು ASIDE, BBMP & WEPPIP ಮೂರು ಸಂಸ್ಥೆಗಳು ಸೇರಿ ವೆಚ್ಚವನ್ನು ಭರಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| ಕ್ರ.ಸ | ಕಾಮಗಾರಿಗಳ ವಿವರಗಳು | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) |
| --- | --- | --- |

| | | |
|---|---|---|
| 1 | Improvements, strengthening and asphalting of Internal Roads (2 Lane Roads of EPIP Zone, Whitefiled, Bangalore. | 13.60 |
| 2 | Improvements, Strengthening and asphalting of Internal roads (4 lane Roads of EPIP Zone, Whitefield, Bangalore. | 16.40 |
| 3 | Construction of Bi-directional Underpass at Graphite India Junction, Near EPIP Zone, Whitefield Bangalore | 15.00 |
| | Total Rs. | 45.00 |

ಮೇಲ್ಕಂಡ ಕಾಮಗಾರಿಗಳ ಒಟ್ಟು ಮೊತ್ತ ರೂ.45.00 ಕೋಟಿಗಳ ಅಂದಾಜು ವೆಚ್ಚವನ್ನು ಭರಿಸಲು ಈ ಕೆಳಕಂಡಂತೆ ಆರ್ಥಿಕ ಹಂಚಿಕೆ ಮಾಡಲಾಗಿದೆ.

| Sl. No. | Details | Amount (Rs.in crores) |
|---|---|---|
| 1 | ASIDE Share | 20.00 |
| 2 | BBMP Share | 20.50 |
| 3 | WEPPIA (White Field Export Promotion Park Industrial Association | 4.50 |
| | Total Rs. | 45.00 |

ಸದರಿ 3 (ಮೂರು) ಕಾಮಗಾರಿಗಳ ಒಟ್ಟು ಮೊತ್ತ ರೂ.45.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರು ದಿನಾಂಕ 17–2–2010ರ ನಡವಳಿಗಳ ವಿಷಯ ಸಂಖ್ಯೆ 600/2009–10ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.



ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ ನಅಇ/346/ ಎಂ.ಎನ್.ವೈ/2010 ಬೆಂಗಳೂರು ದಿನಾಂಕ 7–8–2010 ರಲ್ಲಿ ಅನುಮೋದಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯು ದಿನಾಂಕ 28–8–2010 ರಂದು ನಡೆದು ಮೂರು ಕಾಮಗಾರಿಗಳ ಟೆಂಡರ್ ಮೊತ್ತಕ್ಕೆ ಅನುಮೋದನೆ ನೀಡಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸ | ಕಾಮಗಾರಿಯ ವಿವರಗಳು | ಆಡಳಿತಾತ್ಮಕ ಅನುಮೋದನೆ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಪಾಲಿಕೆಯ ಕೌನ್ಸಿಲ್ ಸಭೆಯ ಟೆಂಡರ್ ಅನುಮೋದನೆ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|---|
| **1** | **Subject No: 10(76)2010-11**<br>Improvements, Strengthening and asphalting of Internal roads (4 lane Roads of EPIP Zone, Whitefield, | **16.40** | **18.43** |

| | | | |
|---|---|---|---|
| | Bangalore. | | |
| 2 | **Subject No: 11(76)2010-11**<br><br>Construction of Bi-directional Underpass at Graphite India Junction, Near EPIP Zone, Whitefield Bangalore | **15.00** | **16.40** |
| 3 | **Subject No: 12(76)2010-11**<br><br>Improvements, strengthening and asphalting of Internal Roads (2 Lane Roads of EPIP Zone, Whitefiled, Bangalore. | **13.60** | **15.39** |
| | **Total Rs.** | **45.00** | **50.22** |

ಮೇಲ್ಕಂಡ ಮೂರು ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಬೇಕಾಗಿರುತ್ತದೆ. ಕಡತದ ಕಂಡಿಕೆ 96 ರಲ್ಲಿ ವಿವರಿಸಿರುವಂತೆ, ಆಯವ್ಯಯ ಲೆಕ್ಕ ಶೀರ್ಷಿಕೆ "ಕಾಮಗಾರಿಗಳು ಮೂಲಭೂತ ಸೌಕರ್ಯಗಳ ಶಾಖೆ – P2019 – Page No.128, Major Road/Arterial/Sub Arterial Road Major Road Division, ರಲ್ಲಿ ನೀಡಬಹುದಾಗಿರುತ್ತದೆ. ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.400.00 ಲಕ್ಷಗಳನ್ನು ಮೀಸಲಿರಿಸಿದ್ದು, ರೂ.367.35 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ನೀಡಲಾಗಿದೆ. ಬಾಕಿ ರೂ.32.65 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೆಚ್ಚುವರಿಯಾಗಿರುವ ಮೊತ್ತ ರೂ.49.89 ಕೋಟಿಗಳನ್ನು ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಕಾಮಗಾರಿ ಸಂಕೇತವನ್ನು ಮೂರು ಕಾಮಗಾರಿಗಳಿಗೆ ಒಟ್ಟು ಮೊತ್ತ ರೂ.50.22 ಕೋಟಿಗಳಿಗೆ ನೀಡಬೇಕಾಗಿರುತ್ತದೆ. ಹಾಗೂ ಮೇಲ್ಕಂಡ ರೂ.50.22 ಕೋಟಿಗಳ ವೆಚ್ಚದ ಬಿಲ್ಲುಗಳನ್ನು ಮುಂದಿನ ಆರ್ಥಿಕ ಸಾಲಿನಲ್ಲಿ ಪಾವತಿಸಲಾಗುತ್ತದೆ.

ಕಡತದ ಕಂಡಿಕೆ ಸಂಖ್ಯೆ 74 ರಲ್ಲಿ ತಿಳಿಸಿರುವಂತೆ, ಪಾಲಿಕೆಯು ಭರಿಸಬೇಕಾದ ವೆಚ್ಚ ರೂ20.50 ಕೋಟಿಗಳೆಂದು ತಿಳಿಸಲಾಗಿದೆ. ಆದರೆ ಟೆಂಡರ್‌ನ ಹೆಚ್ಚುವರಿ ಮೊತ್ತ ರೂ.5.22 ಕೋಟಿಗಳನ್ನು ಸಹ ಭರಿಸಬೇಕಾಗಿರುತ್ತದೆ.



| ಕ್ರ.ಸ | ಕಾಮಗಾರಿಯ ವಿವರಗಳು | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಪಾಲಿಕೆಯ ಕೌನ್ಸಿಲ್ ಸಭೆಯ ಟೆಂಡರ್ ಅನುಮೋದನೆ ಮೊತ್ತ (ರೂ. ಕೋಟಿಗಳಲ್ಲಿ) | ಕಾಮಗಾರಿ ಸಂಖ್ಯೆ |
|---|---|---|---|---|
| 1 | **Subject No: 12(76)2010-11**<br><br>Improvements, strengthening and asphalting of Internal Roads (2 Lane Roads of EPIP Zone, Whitefiled, Bangalore. | **13.60** | **15.39** | **304–11–000001** |

| | | | | |
|---|---|---|---|---|
| **2** | **Subject No: 10(76)2010-11**<br><br>Improvements, Strengthening and asphalting of Internal roads (4 lane Roads of EPIP Zone, Whitefield, Bangalore. | **16.40** | **18.43** | **304–11–000002** |
| **3** | **Subject No: 11(76)2010-11**<br><br>Construction of Bi-directional Underpass at Graphite India Junction, Near EPIP Zone, Whitefield Bangalore | **15.00** | **16.40** | **304–11–000003** |
| | **Total Rs.** | **45.00** | **50.22** | |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಆಡಳಿತಾತ್ಮಕ ಅನುಮೋದನೆಯ ಅಂದಾಜು ಮೊತ್ತ ರೂ.45.00 ಕೋಟಿಗಳಿಗೆ ಎದುರಾಗಿ ಕೌನ್ಸಿಲ್ ಸಭೆಯ ಟೆಂಡರ್ ಅನುಮೋದನೆ ಮೊತ್ತ ರೂ.50.22 ಕೋಟಿಗಳಿಗೆ ಕಾಮಗಾರಿ ಸಂಖ್ಯೆ ಪ್ರಮಾಣಪತ್ರವನ್ನು ನೀಡಿದ್ದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ :– ಆಯುಕ್ತರ ದಿನಾಂಕ 28–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 19]. ವಿಷಯದ ಸಂಖ್ಯೆ :–ತೆಆಸ್ಥಾಸ/139/2010–11

ಆಯುಕ್ತರವರ ಟಿಪ್ಪಣಿ ದಿನಾಂಕ: 27–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯದ ಶೆಟ್ಟಿಹಳ್ಳಿ ವಾರ್ಡ್ ನಂ12ರಲ್ಲಿರುವ ಅಬ್ಬಿಗೆರೆ ಗ್ರಾಮ ಪ್ರದೇಶದಲ್ಲಿರುವ ಸರ್ವೆ ನಂ.13ನ್ನು ಸರ್ಕಾರದ ಸರ್ವೆಯರುಗಳು ಈ ಜಾಗವನ್ನು ಗುರುತಿಸಿ ಸ್ಕೆಚ್ ಮಾಡಿದ್ದು, ಸದರಿ ಜಾಗವು ಸರ್ಕಾರಿ ಗೋಮಾಳವಾಗಿರುತ್ತದೆ. ಇದರ ಒಟ್ಟು ವಿಸ್ತೀರ್ಣ 2964.75 ಚ.ಮೀ ಇರುತ್ತದೆ. ಈ ಸ್ವತ್ತಿನ ಪಕ್ಕದಲ್ಲಿರುವ ಸರ್ವೆ ನಂ.12/1ಬಿ ಜಾಗವು ಹಿಂದಿನ ಸರ್ವೆಯರ್‌ಗಳು ಮಾಡಿದ ತಪ್ಪಿನಿಂದಾಗಿ ಬಹಳ ಹಿಂದಿನಿಂದಲೂ ಸುಮಾರು 80ಕ್ಕೂ ಹೆಚ್ಚು ವರ್ಷಗಳಿಂದ ಪಟೇಲ್ ಲೇಟ್ ಆಂಜನಪ್ಪ ಮನೆತನದವರ ಸ್ವಾಧೀನದಲ್ಲಿದ್ದು, ಅವರ ಮೊಮ್ಮಗನಾದ ಹಾಲಿ ಶ್ರೀ.ಎಸ್. ಹರೀಶ್, ನಂ. 120/ವೈ, 3ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು–10ರ ಮಾಲೀಕತ್ವದಲ್ಲಿ ಇವರಿಗೆ ಸೇರಿದ್ದಾಗಿರುತ್ತದೆ. ಸರ್ವೆ ನಂ.12/1ಬಿ ಇದರ ಒಟ್ಟು ವಿಸ್ತೀರ್ಣ ಸುಮಾರು 2.5 ಎಕರೆಗಳಿರುತ್ತದೆ. ಸದರಿ ಖಾಸಗಿ ಮಾಲೀಕರು ತಮ್ಮ ಜಾಗವನ್ನು ಸರ್ವೆ ಮಾಡಿಸಿ 2 ಕೈಗಾರಿಕಾ ಶೆಡ್‌ಗಳನ್ನು ನಿರ್ಮಾಣ ಮಾಡಿರುತ್ತಾರೆ. ಈ ಎರಡು ಶೆಡ್‌ಗಳ ವಿಸ್ತೀರ್ಣವು ಒಂದನೇ



ಶೆಡ್ ಅಳತೆ 16ಮೀ x 37ಮೀ, ಎರಡನೇ ಶೆಡ್ 19ಮೀ x 9.80ಮೀ ಇರುತ್ತದೆ. ಈ ಎರಡೂ ಶೆಡ್‌ಗಳನ್ನು ಸರ್ಕಾರಿ ಜಾಗವಾದ ಸರ್ವೆ ನಂ.13ರಲ್ಲೂ ಮತ್ತು ಖಾಸಗಿ ಸರ್ವೆ ನಂ. 12/1ಬಿ ಯ ಮದ್ಯದಲ್ಲಿ ನಿರ್ಮಿಸಲಾಗಿರುತ್ತದೆ. ಸರ್ಕಾರದ ವತಿಯಿಂದ ಸರ್ವೆ ಮಾಡಿಸಿದಾಗ ಈ ತಪ್ಪು ನಿರ್ಮಾಣವು ಕಂಡುಬಂದಿರುತ್ತದೆ.

ಆದ್ದರಿಂದ ಸರ್ಕಾರಿ ಸರ್ವೆ 13ನ್ನು ಸೇರಿಸಿಕೊಂಡು ಕಟ್ಟಿರುವ ಶೆಡ್‌ನ್ನು, ಖಾಸಗಿ ಒಡೆತನ ಮಾಲಿಕರು ಈ ಹಿಂದಿನ ತಪ್ಪು ಸರ್ವೆಯಿಂದ ಈ ತಪ್ಪಾಗಿರುತ್ತದೆ ಎಂದು ಬರವಣಿಗೆಯಲ್ಲಿ ತಿಳಿಸಿರುತ್ತಾರೆ, ನಿರ್ಮಿಸಿರುವ

ಶೆಡ್ಡಿನ ಅರ್ಧ ಭಾಗ ಸರ್ಕಾರಿ ಜಾಗದಲ್ಲಿ ಇರುವುದರಿಂದ, ಖಾಸಗಿ ಮಾಲೀಕರು ಈ ಶೆಡ್‌ನ ಪೂರ್ತಿ ಉಪಕರಣಗಳನ್ನು ಕಳಚಿಕೊಂಡು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಒಪ್ಪಿ ಸರ್ಕಾರಿ ಜಾಗವನ್ನು ನಗರ ಪಾಲಿಕೆಯ ಸ್ವಾಧೀನಕ್ಕೆ ನೀಡಲು ಒಪ್ಪಿಕೊಂಡಿರುತ್ತಾರೆ.

ಈ ಸ್ಥಳವನ್ನು ಸಂಬಂಧಿಸಿದ ಅಧಿಕಾರಿಗಳು ಸ್ಥಳಪರಿಶೀಲನೆ ಮಾಡಿದಾಗ, ಖಾಸಗಿಯವರು ನಿರ್ಮಿಸಿರುವ ಕೈಗಾರಿಕಾ ಶೆಡ್‌ನ ಅರ್ಧ ಭಾಗ ಜಾಗ ಸರ್ಕಾರಿ ಸ್ಥಳವಾಗಿದ್ದು, ಸದರಿ ಶೆಡ್‌ನ್ನು, ಈಗಾಗಲೇ ಯಲಹಂಕ ವಲಯದಲ್ಲಿ ನಿರ್ಮಿಸಿರುವ ಘನತ್ಯಾಜ್ಯ ವಸ್ತುಗಳ ಬೇರ್ಪಡಿಸುವ ಸ್ಟೇಷನ್ ಮಾದರಿಯಂತೆ ದಾಸರಹಳ್ಳಿ ವಲಯದಲ್ಲು ಸಹ ಘನತ್ಯಾಜ್ಯ ವಸ್ತುಗಳ ಬೇರ್ಪಡಿಸುವ ಸ್ಟೇಷನ್ ಆಗಿ ಉಪಯೋಗಿಸುವುದು ಬಹಳ ಸೂಕ್ತವೆಂದು ಕಂಡುಬಂದಿರುತ್ತದೆ. ಇದರಿಂದ ಡಂಪಿಂಗ್ ಯಾರ್ಡ್ ಒತ್ತಡ ಕಡಿಮೆಯಾಗುವುದಲ್ಲದೆ ನಗರ ಪಾಲಿಕೆಗೆ ಸಾರಿಗೆ ವೆಚ್ಚವನ್ನು ಗಣನೀವಾಗಿ ಕಡಿತಗೊಳಿಸಬಹುದಾಗಿದ್ದು, ಸದರಿ ಕಟ್ಟಿರುವ ಶೆಡ್‌ನ್ನು ಪಾಲಿಕೆಗೆ ಉಳಿಸಿಕೊಂಡು ಈ ಕಟ್ಟಡದ ವೆಚ್ಚವನ್ನು ಸದರಿ ಖಾಸಗಿ ಮಾಲೀಕರಿಗೆ ಸಂದಾಯ ಮಾಡಿ ಇದನ್ನು ನಗರ ಪಾಲಿಕೆಯ ಉಪಯೋಗಕ್ಕೆ ಉಳಿಸಿಕೊಳ್ಳುವುದು ಸೂಕ್ತವೆಂದು ಭಾವಿಸಲಾಗಿರುತ್ತದೆ. ಮಾಲೀಕರು ಸಹ ಸದರಿ ಶೆಡ್‌ನ್ನು ಕಟ್ಟಡದ ವೆಚ್ಚ ಮತ್ತು ಉಪಕರಣಗಳ ವೆಚ್ಚವನ್ನು ಪಾಲಿಕೆಯವರು ತಮಗೆ ಪಾವತಿ ಮಾಡಿದಲ್ಲಿ, ಈ ಶೆಡ್‌ಗಳ ಉಪಕರಣಗಳನ್ನು ಕಳಚದೇ ಪಾಲಿಕೆಗೆ ಬಿಟ್ಟುಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ.
ಸದರಿ ಶೆಡ್‌ನ ವೆಚ್ಚವನ್ನು ಜಂಟಿ ಆಯುಕ್ತರು (ದಾಸರಹಳ್ಳಿ) 2010-11ನೇ ಸಾಲಿನ ಲೋಕಪಯೋಗಿ ಬೆಂಗಳೂರು ವೃತ್ತದ ದರಪಟ್ಟಿಗಳ ಅನ್ವಯ ಸಿದ್ದಪಡಿಸಿದ್ದು, ಅಂದಾಜು ರೂ.30.00 ಲಕ್ಷಗಳಾಗುವುದೆಂದು ಅದರಲ್ಲಿ ನಿಯಮಾವಳಿಯಂತೆ ಇತರೆ ಶುಲ್ಕಗಳನ್ನು ಕಡಿತಗೊಳಿಸಿ 28,52,000-00 (ಇಪ್ಪತ್ತೆಂಟು ಲಕ್ಷ ಐವತ್ತೇರಡು ಸಾವಿರ ಮಾತ್ರ)ಪಾವತಿ ಮಾಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.
ಆದ್ದರಿಂದ ಈ ಜಾಗವು ದಾಸರಹಳ್ಳಿ ವಲಯದಲ್ಲಿ ಘನತ್ಯಾಜ್ಯ ವಸ್ತುಗಳ ಬೇರ್ಪಡಿಸುವ ಸ್ಟೇಷನ್ ಆಗಿ ಉಪಯೋಗಿಸಿದಲ್ಲಿ ವಲಯದ ಎಲ್ಲಾ ವಾರ್ಡ್‌ಗಳಿಗೆ ಅನುಕೂಲವಾಗುವ್ಯದನ್ನು ಪರಿಗಣಿಸಿ, ಇದು ಉಪಯುಕ್ತ ವ್ಯವಸ್ಥೆಯಾಗಿರುವುದರಿಂದ ಸದರಿ ಮಾಲೀಕರು ಈ ನಿರ್ಮಾಣವಾಗಿರುವ ಕಟ್ಟಡಕ್ಕೆ ಉಪಕರಣದ ಮತ್ತು ಶೆಡ್‌ನ ನಿರ್ಮಾಣದ ವೆಚ್ಚವನ್ನು 2010-11ನೇ ಸಾಲಿನ ಲೋಕೋಪಯೋಗಿ ದರಪಟ್ಟಿ ಅನ್ವಯ ಸಿದ್ದಪಡಿಸಿರುವ ರೂ. ಮೊತ್ತವಾದ 28,52,000-00 (ಇಪ್ಪತ್ತೇಂಟು ಲಕ್ಷ ಐವತ್ತೇರಡು ಸಾವಿರ ಮಾತ್ರ) ಪಾವತಿಸಿ, ಸದರಿ ಸ್ವತ್ತನ್ನು ನಗರ ಪಾಲಿಕೆಯ ಸ್ವಾಧೀನ್ಕಕೆ ಪಡೆದು, ನಗರ ಪಾಲಿಕೆಯ ವಹಿಯಲ್ಲಿ ನಮೂದಿಸಿ, ಸಾರ್ವಜನಿಕ ಉಪಯೋಗಕ್ಕೆ ಬಳಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 27-12-2010ರ ಟಿಪ್ಪಣಿಯನ್ನು ಒಪ್ಪಿದೆ.**



## 20]. ವಿಷಯದ ಸಂಖ್ಯೆ :-ತೆಆಸ್ಥಾಸ/140/2010-11

ಆಯುಕ್ತರವರ ಟಿಪ್ಪಣೆ ದಿನಾಂಕ: 27-12-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗದಿಂದ Providing Tubular Poles along with all accessories from Sirsi Circle to Out ring road (Pipeline

road) at Mysore road on Both sides ಕಾಮಗಾರಿಗೆ ರೂ.55.00 ಲಕ್ಷಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಸದರಿ ಕಾಮಗಾರಿಗೆ 2010-11ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆಯವ್ಯಯದಲ್ಲಿ ಸದರಿ ಕಾಮಗಾರಿಯ ಮೊತ್ತ ರೂ.55.00 ಲಕ್ಷಗಳ ಕಾಮಗಾರಿ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ವಿದ್ಯುತ್-ಹೊಸದಾಗಿ ವಿದ್ಯುತ್ ಸ್ಥಾಪನೆ - Upgrading Street Lighting of Bangalore Major Roads P1517 ರಲ್ಲಿ ರೂ.3000.00 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಇದುವರೆವಿಗೆ ರೂ.2302.77 ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದ್ದು, ಬಾಕಿ 697.23 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೆಚ್ಚವನ್ನು ಭರಿಸಿ ಕಾಮಗಾರಿ ಸಂಕೇತ ಪ್ರಮಾಣ ಪತ್ರವನ್ನು ನೀಡಬಹುದಾಗಿರುತ್ತದೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 27-12-2010ರ ಟಿಪ್ಪಣಿಯನ್ನು ಒಪ್ಪಿದೆ.**

## 21]. ವಿಷಯದ ಸಂಖ್ಯೆ :-ತೆಆಸ್ಥಾಸ/141/2010-11

ಆಯುಕ್ತರವರ ಟಿಪ್ಪಣಿ **ಸಂಖ್ಯೆ: ಮು.ಅ(ಪ)/ಪಿಆರ್/1070/10-11, ದಿನಾಂಕ: 17-12-2010,** ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 64ರ ವೈಯಾಲಿಕಾವಲ್‌ನ ತಿರುಮಲ ತಿರುಪತಿ ದೇವಸ್ಥಾನದ ಸುತ್ತಮುತ್ತ ಹಾಲಿ ಇರುವ ಬೀದಿ ದೀಪಗಳು ಕಡಿಮೆ ಇದ್ದು, ಮರಗಿಡಗಳಿಂದಾಗಿ ಬೀದಿ ದೀಪಗಳ ಬೆಳಕು ತುಂಬಾ ಕಡಿಮೆ ಇದ್ದು, ಈ ದೇವಸ್ಥಾನಕ್ಕೆ ಅಧಿಕ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸುತ್ತಿರುವುದರಿಂದ ಈ ದೇವಸ್ಥಾನದ ಆಜುಬಾಜಿನಲ್ಲಿ ಹೆಚ್ಚಿನ ಬೀದಿ ದೀಪಗಳ (ಉತ್ತಮ ಪ್ರಮುಖತೆಯುಳ್ಳ) ಬೆಳಕಿನ ವ್ಯವಸ್ಥೆ ಕಲ್ಪಿಸಲು ಕೋರಿ ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದ ಮೇರೆಗೆ ಮಾನ್ಯ ಶ್ರೀ ಎಂ. ಲಕ್ಷ್ಮೀನಾರಾಯಣ ಭಾ.ಆ.ಸೇ ಮುಖ್ಯಮಂತ್ರಿಯವರ ಕಾರ್ಯದರ್ಶಿ ರವರು ಮಾನ್ಯ ಆಯುಕ್ತರವರಿಗೆ ಪತ್ರ ಮುಖೇನ ದಿನಾಂಕ: 27/05/2010 ರಲ್ಲಿ ಕೋರಿದ್ದು ಪತ್ರವನ್ನು ಇದರೊಂದಿಗೆ ಬಾವುಟ 'ಅ' ನಲ್ಲಿ ಲಗತ್ತಿಸಿದೆ.

ಆದರೆ ಆಯವ್ಯಯದ ಅನುದಾನದ ಕೊರತೆಯಿಂದಾಗಿ ಈ ಕಾಮಗಾರಿಯನ್ನು ನಿರ್ವಹಿಸಿ ಪೂರ್ಣಗೊಳಿಸಲು ವಿಳಂಬವಾಗುತ್ತಿದ್ದು, ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿ ಪೂರ್ಣಗೊಳಿಸಲು ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರು ದೂರವಾಣಿಯ ಮುಖಾಂತರ ಒತ್ತಾಯ ಪಡಿಸಿರುತ್ತಾರೆ.

ಆದುದ್ದರಿಂದ ಈ ಅಂದಾಜು ಪಟ್ಟಿಯ ಮೊತ್ತ ಬೆಸ್ಕಾಂ ಠೇವಣಿ ಒಳಗೊಂಡು ರೂ. 26,24,000/-ಗಳಿಗೆ 2010-11ನೇ ಸಾಲಿನ ಆಯವ್ಯಯ ಪುಸ್ತಕದ ಪುಟ 50ರ ಕೋಡ್ ಸಂಖ್ಯೆ ಕಔ541ರ ತುರ್ತು ಹಾಗೂ ಅವಶ್ಯಕ ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನದ ಶೀರ್ಷಿಕೆಯಲ್ಲಿ ವರ್ಕ್ಸ್‌ಕೋಡ್/ಜಾಬ್‌ಕೋಡ್ ಪಡೆಯಲು ಕಂಡಿಕೆ 20,21 ಹಾಗೂ 22ರಲ್ಲಿ ಕ್ರಮವಾಗಿ ಪ್ರಧಾನ ಅಭಿಯಂತರರು, ಮುಖ್ಯ ಲೆಕ್ಕಾಧಿಕಾರಿ ರವರು ಹಾಗೂ ಮಾನ್ಯ ಆಯುಕ್ತರವರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಮಂಡಿಸಲು ಆದೇಶ ನೀಡಿರುತ್ತಾರೆ.

ಆದುದ್ದರಿಂದ ಈ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ. 26,24,000/- ಗಳಿಗೆ ವರ್ಕ್ಸ್‌ಕೋಡ್/ಜಾಬ್‌ಕೋಡ್ ಪಡೆಯಲು ಅನುಮತಿಗಾಗಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 27-12-2010ರ ಟಿಪ್ಪಣಿಯಲ್ಲಿ ವಾರ್ಡ್ ಸಂಖ್ಯೆ 64 ಎಂದು ನಮೂಧಿಸಿದ್ದು, ಚರ್ಚೆಯ ನಂತರ T.T.D ದೇವಸ್ಥಾನದ ವ್ಯಾಪ್ತಿ ವಾರ್ಡ್‌ಸಂಖ್ಯೆ 65ರಲ್ಲಿ ಬರುತ್ತಿದ್ದು, ಆಯುಕ್ತರ ಟಿಪ್ಪಣಿಯನ್ನು ವಾರ್ಡ್ ಸಂಖ್ಯೆ 65 ಎಂದು ಮಾರ್ಪಡಿಸಿ ಒಪ್ಪಿದೆ.**

-23-

## 22]. ವಿಷಯದ ಸಂಖ್ಯೆ :-ತೆಆಸ್ಥಾಸ/142/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)98/10-11, ದಿನಾಂಕ: 30-12-2010 ರಲ್ಲಿ ವಿವರಿಸಿರುವಂತೆ, ಶ್ರೀ ಸಂಗೊಳ್ಳಿ ಕೃಷ್ಣಮೂರ್ತಿ, ಅಧ್ಯಕ್ಷರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ (ನೊಂ), ನಂ. 85, 2ನೇ ಮುಖ್ಯರಸ್ತೆ, ಫೈಪ್ ಲೇನ್, 2ನೇ ಹಂತ, ವಿಜಯನಗರ, ಬೆಂಗಳೂರು – 560 040. ರವರು ಪತ್ರ ಬರೆದು ಕನ್ನಡ ನಾಡು ಮತ್ತು ನುಡಿಗಾಗಿ ಕೆಚ್ಚೆದೆಯ ಹೋರಾಟ ನಡೆಸಿ, ನಾಡಿನ ರಕ್ಷಣೆಗಾಗಿಯೇ ಹೋರಾಟದಲ್ಲಿ ಹುತಾತ್ಮರಾದ ಸಂಗೊಳ್ಳಿ ರಾಯಣ್ಣನ ಧೈರ್ಯ ಮತ್ತು ಸಾಹಸ ಇಂದು ನಮಗೆ ಮಾರ್ಗದರ್ಶಕವಾಗಿದ್ದು, ಹಲವು ಕಾಲ ವಿಳಂಭವಾಗಿದ್ದ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಇತ್ತೀಚೆಗೆ ತಾನೆ ಪಾಲಿಕೆಯು ಬಹಳ ಯಶಸ್ವಿಯಾಗಿ ಅನಾವರಣಗೊಳಿಸಿದ್ದು ಸಮಸ್ತ ಕನ್ನಡ ನಾಡಿನ ಜನತೆಯಲ್ಲಿ ಪ್ರಶಂಸೆಯನ್ನು ಮೂಡಿಸಿರುವುದಾಗಿ, ಈ ರೀತಿ ಕನ್ನಡ ನಾಡಿನ ಜನತೆಯ ಮನೆ ಮಾತಾಗಿರುವ ಕ್ರಾಂತಿವೀರನ ಸ್ಮರಣೆಯನ್ನು ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅಂತೆಯೇ ದಿನಾಂಕ:26-01-2011 ರಂದು ನಗರದ ಪುರಭವನದಲ್ಲಿ ಇಂತಹ ಐತಿಹಾಸಿಕ ಕ್ರಾಂತಿವೀರ ಸಂಗೊಳ್ಳಿರಾಯಣ್ಣನ ಸ್ಮರಣ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಕ್ಕೆ ವಿವಿಧ ಗಣ್ಯರನ್ನು ಆಹ್ವಾನಿಸಲಾಗುತ್ತಿದ್ದು, ರಾಯಣ್ಣನ ಕುರಿತು ಸ್ಮರಣ ಪ್ರವಚನಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ಪಾಲಿಕೆಯ ವತಿಯಿಂದ ರೂ.5.00 ಲಕ್ಷಗಳ ವಿಶೇಷ ಅನುದಾನವನ್ನು ಮಂಜೂರು ಮಾಡಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ.5.00 ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 30-12-2010ರ ಟಿಪ್ಪಣಿಯನ್ನು ಒಪ್ಪಿದೆ.**

## 23]. ವಿಷಯದ ಸಂಖ್ಯೆ :-ತೆಆಸ್ಥಾಸ/143/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)80/10-11, ದಿನಾಂಕ: 30-12-2010 ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಸದಸ್ಯರು, ವಾರ್ಡ್ ನಂ. 65 ರವರು ಪತ್ರ ಬರೆದು ತನ್ನ ಪರಿಚಯಸ್ಥರಾಗಿರುವ ಥ್ರೋಬಾಲ್ ಫೆಡೆರೇಷನ್ ಆಫ್ ಇಂಡಿಯಾ ಸಂಸ್ಥೆಯ ಶ್ರೀ ದಿಲೀಪ್ ಟಿ. ಎಸ್. ಮತ್ತು ಶ್ರೀ ಸಂದೀಪ್ ಎಸ್ ರವರು ಸಲ್ಲಿಸಿರುವ ಮನವಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಸದರಿಯವರುಗಳು ಅತ್ಯುತ್ತಮ ಥ್ರೋಬಾಲ್ ಕ್ರೀಡಾಪಟುಗಳಾಗಿದ್ದು, ದಿನಾಂಕ 08-11-2010 ರಿಂದ 18-11-2010 ರವರೆಗೆ ಪ್ಯಾರಿಸ್‌ನಲ್ಲಿ ನಡೆಯಲಿರುವ ಇಂಡೋ ಫ್ರಾನ್ಸ್ ಥ್ರೋ ಬಾಲ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಇಂಡಿಯಾ ಥ್ರೋಬಾಲ್ ಬಾಯ್ಸ್ ಟೀಮ್‌ನ್ನು ಪ್ರತಿನಿಧಿಸುತ್ತಿದ್ದಾರೆಂದು, ಸದರಿ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲು ಪ್ರತಿ ಆಟಗಾರರಿಗೆ ರೂ. 90,000/- ಗಳಷ್ಟು ಖರ್ಚಾಗಲಿರುವುದರಿಂದ ದಯಮಾಡಿ ಸದರಿಯವರಿಗೆ ಹೆಚ್ಚಿನ ಮೊತ್ತದ ಸಹಾಯಧನವನ್ನು ಮಹಾನಗರ ಪಾಲಿಕೆ ನಿಧಿಯಿಂದ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮಾನ್ಯ ಸದಸ್ಯರು ತಮ್ಮ ಪತ್ರದೊಂದಿಗೆ ಭಾರತೀಯ ಥ್ರೋಬಾಲ್ ಸಂಸ್ಥೆಯವರು ಕಳುಹಿಸಿರುವ ಸದರಿ ಕ್ರೀಡಾಪಟುಗಳಿಗೆ ಆಹ್ವಾನ ಮತ್ತು ಆರ್ಥಿಕ ನೆರವು ಒದಗಿಸಲು ಕೋರಿ ಕಳುಹಿಸಿರುವ ಪತ್ರ, ಪ್ರಶಸ್ತಿ ಪತ್ರಗಳು, ಪಡಿತರ ಚೀಟಿ ನಕಲು ಪ್ರತಿ, ಪಾಸ್ ಪೋರ್ಟ್ ಪ್ರತಿ, ಟ್ರಾವೆಲ್ ಇನ್ಸೂರೆನ್ಸ್ ಪ್ರತಿಗಳನ್ನು ಒದಗಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ

ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕ್ರೀಡಾಪಟುಗಳಿಗೆ ತಲಾ ರೂ. 10,000/–ಗಳಂತೆ ಒಟ್ಟು ರೂ. 20,000/– ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 30–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 24]. ವಿಷಯದ ಸಂಖ್ಯೆ :–ತೆಆಸ್ಥಾಸ/144/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)96/10–11, ದಿನಾಂಕ: 30–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ (ನೋ), ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿ ಆವರಣ, ನರಸಿಂಹರಾಜ ರಸ್ತೆ, ಬೆಂಗಳೂರು –2. ರವರು ಮನವಿ ಸಲ್ಲಿಸಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಆಚರಿಸುವ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸಿದ್ದತೆಗಳನ್ನು ನಡೆಸಲಾಗುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾರ್ಯಕ್ರಮಕ್ಕೆ ಸಂಘ ಸಂಸ್ಥೆಗಳ ಲೆಕ್ಕ ಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (35) ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 30–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 25]. ವಿಷಯದ ಸಂಖ್ಯೆ :–ತೆಆಸ್ಥಾಸ/145/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)99/10–11, ದಿನಾಂಕ: 30–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು, ಎಕೋ ಕ್ಲಬ್‌ರವರು ಹಸಿರು ಉಸಿರು ಪರಿಸರ ಸಂರಕ್ಷಣೆ ಹಾಗೂ ಪರಿಸರ ಕಮ್ಮಟ ಎಂಬ ಕಾರ್ಯಕ್ರಮವನ್ನು ದಿನಾಂಕ:30–12–2010 ಮತ್ತು 31–12–2010ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುತ್ತಾರೆಂದು, ಸದರಿ ಕಾರ್ಯಕ್ರಮದಲ್ಲಿ ಬೆಂಗಳ್ರರು ಹಸಿರು ರಕ್ಷಣೆ, ಬೆಂಗಳೂರು ಜಲ ಸಂರಕ್ಷಣೆ ಹಾಗೂ ವೃಷಭಾವತಿ ನದಿ

ಪುನಶ್ಚೇತನ ಹಾಗೂ ಕಸ ನಿರ್ವಹಣೆಯ ಬಗ್ಗೆ ಕಾರ್ಯಾಗಾರ ನಡೆಸಲಾಗುತ್ತಿದ್ದು, ಸದರಿ ಕಾರ್ಯಕ್ರಮಕ್ಕೆ ಒಟ್ಟು ರೂ.16 ಲಕ್ಷ ರೂಪಾಯಿಗಳು ವೆಚ್ಚವಾಗುವುದಾಗಿ ತಿಳಿಸಿರುತ್ತಾರೆಂದು, ಈ ಕಾರ್ಯಕ್ರಮವನ್ನು ಬಿ.ಬಿ.ಎಂ.ಪಿ. ಸಹಯೋಗದೊಂದಿಗೆ ನಡೆಸಲು ನಿರ್ಧರಿಸಲಾಗಿದ್ದು, ಇದಕ್ಕೆ ಪಾಲಿಕೆಯ ಸಮ್ಮತಿ ಹಾಗೂ ನಗರ ಪಾಲಿಕೆಯಿಂದ ರೂ.8 ಲಕ್ಷ ರೂಪಾಯಿಗಳ ಅನುದಾನ ಕೋರಿರುತ್ತಾರೆಂದು, ಸದರಿಯವರ



ಪತ್ರದಲ್ಲಿ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಕಾರ್ಯಾಗಾರ ನಡೆಸಲು "ಎಕೋ ಕ್ಲಬ್" ಬೆಂಗಳೂರುರವರಿಗೆ ಸಂಘ ಸಂಸ್ಥೆಗಳ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ರೂ.8.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 8.00 ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 30–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/146/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)61/10–11, ದಿನಾಂಕ: 05–01–2011 ರಲ್ಲಿ ವಿವರಿಸಿರುವಂತೆ, ಡಾ॥ ಭಾರತಿ ವಿಷ್ಣುವರ್ಧನ, ಚಲನಚಿತ್ರ ಕಲಾವಿದರು, ವಾಲ್ಮೀಕಿ, ನಂ. 1203, 26ನೇ 'ಎ' ಮುಖ್ಯರಸ್ತೆ, 35ನೇ ಅಡ್ಡರಸ್ತೆ, 4ನೇ 'ಟಿ' ಬ್ಲಾಕ್, ಬೆಂಗಳೂರು – 560 041. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಪ್ರಖ್ಯಾತ ಕಲಾವಿದರಾದ ಡಾ॥ ವಿಷ್ಣುವರ್ಧನ ರವರ 60 ನೇ ಜನ್ಮದಿನೋತ್ಸವದ ಸಂದರ್ಭದಲ್ಲಿ ತಮ್ಮ "ವಿಭಾ ಚಾರಿಟೆಬಲ್ ಟ್ರಸ್ಟ್" ವತಿಯಿಂದ ಹಮ್ಮಿಕೊಂಡಿದ್ದ ಡಾ॥ ವಿಷ್ಣುವರ್ಧನ ರವರ ಚಿತ್ರೋತ್ಸವದ 'ಸಿಂಹಾವಲೋಕನ' ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿದ್ದು, ಚಿತ್ರೋತ್ಸವದ ಪರಿಕಲ್ಪನೆಯು ಕರ್ನಾಟಕದ ಮಹಾನ್ ಕಲಾವಿದರಾದ ಡಾ॥ ವಿಷ್ಣುವರ್ಧನರವರಿಗೆ ಭಾವಪೂರ್ಣ ಗೌರವಾರ್ಪಣೆಯಾಗಿದ್ದು, ಅವರು ಅಭಿನಯಿಸಿರುವ ಅಪೂರ್ವ ಚಿತ್ರಗಳನ್ನು ಮತ್ತೊಮ್ಮೆ ವೀಕ್ಷಿಸಲು ಅವರ ಅಭಿಮಾನಿಗಳಿಗೊಂದು ಸದವಕಾಶವನ್ನು ಕಲ್ಪಿಸುವುದಾಗಿತ್ತೆಂದು ತಿಳಿಸಿ, ಡಿಸೆಂಬರ್ 30 ಪ್ರಖ್ಯಾತ ಕಲಾವಿದರಾದ ಡಾ॥ ವಿಷ್ಣುವಧಾನರವರ ಪುಣ್ಯಸ್ಮರಣೆಯ ದಿನವಾದ ಸಂದರ್ಭದಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಸಹಯೋಗದೊಂದಿಗೆ ವಿಭಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕರ್ನಾಟಕದಾದ್ಯಂತ ಡಾ॥ ವಿಷ್ಣುವರ್ಧನ ರವರು ಅಭಿನಯಿಸಿರುವ ಚಿತ್ರಗಳ ಬೃಹತ್ ಚಿತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿದೆಯೆಂದು ತಿಳಿಸಿ, ಈ ಚಿತ್ರೋತ್ಸವು ಡಿಸೆಂಬರ್ 30 ರಂದು ಕರ್ನಾಟಕದಾದ್ಯಂತ 30 ಜಿಲ್ಲೆಗಳಲ್ಲಿ ನೆರವೇರಲಿದ್ದು, ಡಾ॥ ವಿಷ್ಣುವರ್ಧನ್ ರವರು ಅಭಿನಯಿಸಿರುವ ಚಿತ್ರಗಳನ್ನು ಉಚಿತವಾಗಿ ಪ್ರದರ್ಶಿಸಲಾಗುವುದೆಂದು, ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಪ್ರತ್ಯೇಕ ಪ್ರದರ್ಶನದ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿರುತ್ತಾರೆ.

ಈ ಚಿತ್ರೋತ್ಸವದ ಆಯೋಜನೆಯು ದೊಡ್ಡ ಪ್ರಮಾಣದಾಗಿದ್ದು, ಸಹಜವಾಗಿಯೇ ಇದರ ವೆಚ್ಚವೂ ದೊಡ್ಡ ಮೊತ್ತದ್ದಾಗಿರುವುದರಿಂದ ಪಾಲಿಕೆ ವತಿಯಿಂದ ಚಿತ್ರೋತ್ಸವಕ್ಕೆ ಸೂಕ್ತ ಅನುದಾನ ನೀಡಿ ಪ್ರೋತ್ಸಾಹಿಸಬೇಕಾಗಿ ವಿನಂತಿಸಿ, ಅದೇ ದಿನಾಂಕದಂದೇ ಮತ್ತೊಂದು ಮನವಿ ನೀಡಿ ಚಿತ್ರೋತ್ಸವಕ್ಕೆ ಪಾಲಿಕೆ ವತಿಯಿಂದ ಅನುದಾನವಾಗಿ ಮಂಜೂರಾಗಿರುವ ರೂ.3 ಲಕ್ಷ(ಮೂರು ಲಕ್ಷ) ರೂಪಾಯಿಗಳನ್ನು ತಮ್ಮ ವಿಭಾ ಚಾರಿಟೆಬಲ್ ಟ್ರಸ್ಟ್ ಹೆಸರಿನಲ್ಲಿ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ.

ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು, "ವಿಭಾ ಚಾರಿಟೆಬಲ್ ಟ್ರಸ್ಟ್" ಸಂಸ್ಥೆಯವರು ನಡೆಸಿರುವ 'ಡಾ|| ವಿಷ್ಣುವರ್ಧನರವರ ಚಿತ್ರೋತ್ಸವ'ಕ್ಕಾಗಿ 2010-11ನೇ ಸಾಲಿನ ಆಯವ್ಯಯದಲ್ಲಿ ರೂ.3.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವುದನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ



ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76

ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (16) ರಲ್ಲಿ ವಿಷ್ಣು ಚಿತ್ರೋತ್ಸವಕ್ಕೆ ನಿಗಧಿ ಪಡಿಸಲಾಗಿರುವ ರೂ. 3.00 ಲಕ್ಷಗಳ (ಮೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 05-01-2011ರ ಟಿಪ್ಪಣಿಯನ್ನು ಒಪ್ಪಿದೆ.**

## 27]. ವಿಷಯದ ಸಂಖ್ಯೆ :-ತೆಆಸ್ಥಾಸ/147/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)67/10-11, ದಿನಾಂಕ: 05-01-2011 ರಲ್ಲಿ ವಿವರಿಸಿರುವಂತೆ, ಶ್ರೀಮತಿ ವಿಜಯಾ ನಾಯಕ, ವ್ಯವಸ್ಥಾಪಕ ನಿರ್ದೇಶಕರು, ನವಚೇತನ ಟ್ರಸ್ಟ್ (ರಿ), ನಂ. 3, ಎಂಎಲ್ಎ ಆಫೀಸ್ ಕಾಪೌಂಡ್, ಮೊದಲನೇ ಮಹಡಿ, 22ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು -560 070. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ನವಚೇತನ - ವಿಕಲ ಚೇತನ ಮಕ್ಕಳ ಶಾಲೆಯು ಪ್ರಾರಂಭವಾಗಿ 10 ವರ್ಷಗಳಾಗಿದ್ದು, ತಮ್ಮ ಶಾಲೆಯಲ್ಲಿ 70 ಕ್ಕೂ ಹೆಚ್ಚು ಮಕ್ಕಳು ವಿಶೇಷ ತರಬೇತಿ ಪಡೆಯುತ್ತಿದ್ದು, ಅವರೆಲ್ಲರೂ ಅತೀ ಬಡಕುಟುಂಬದಿಂದ ಮತ್ತು ಹಿಂದುಳಿದ ವರ್ಗದಿಂದ ಬಂದ ಮಕ್ಕಳಾಗಿದ್ದು, ಮಕ್ಕಳ ವ್ಯಕ್ತಿತ್ವ ವಿಕಸನಗೊಳಿಸಲು ತರಬೇತಿ ಪಡೆದ ಮತ್ತು ನುರಿತ 10 ಜನ ಶಿಕ್ಷಕಿಯರು ಸೇವೆ ಸಲ್ಲಿಸುತ್ತಿದ್ದು, ಯಾವುದೇ ಸಂಘ ಸಂಸ್ಥೆಗಳಿಂದ/ಸರ್ಕಾರೇತರ ಸಂಸ್ಥೆಗಳಿಂದ ಧನ ಸಹಾಯ ಪಡೆಯುತ್ತಿಲ್ಲವೆಂದು ತಿಳಿಸುತ್ತಾ, ಪಾಲಿಕೆಯ ಸಂಘ ಸಂಸ್ಥೆಗಳ ಅನುದಾನದಡಿಯಲ್ಲಿ ತಮ್ಮ ಟ್ರಸ್ಟ್‌ಗೆ ರೂ. 5.00 ಲಕ್ಷ ಹಣವನ್ನು ಬಿಡುಗಡೆ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (10) ರಲ್ಲಿ ನವಚೇತನ ಟ್ರಸ್ಟ್ (ರಿ)ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 05–01–2011ರ ಟಿಪ್ಪಣಿಯನ್ನು ಒಪ್ಪಿದೆ.**

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 24-01-2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಎನ್.ವೀರಣ್ಣ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ |
| ಜಿ.ಮಂಜುನಾಥ ರಾಜು – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಜಾಹಿರಾತು) |
| ಎಂ.ಜಿ.ಜಯರತ್ನ – ಸದಸ್ಯರು | ಮುಖ್ಯ ಅಭಿಯಂತರರು (ಕೆರೆಗಳು) |
| ಶಕೀಲಾ.ಎಂ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಯಶವಂತಪುರ), (ಕೆರೆಗಳು) |
| ಟಿ.ಎ.ಗಾಯಿತ್ರಿ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಶವಂತಪುರ), |
| ಗೈರು ಹಾಜರಿದ್ದ ಸದಸ್ಯರು | ವ್ಯವಸ್ಥಾಪಕರು, ಅಪರ ಆಯುಕ್ತರು (ಕಲ್ಯಾಣ) ಕಛೇರಿ |
| ಕೆ.ಚಂದ್ರಶೇಖರ್ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

**01]. ವಿಷಯದ ಸಂಖ್ಯೆ :–ತೆಆಸ್ಥಾಸ/106/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ/ರಾರಾನ/ಪಿಆರ್/2075/10–11 ದಿನಾಂಕ : 09–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ನಗರ ಪಾಲಿಕೆಯ ಯಶವಂತಪುರ ವಾರ್ಡ್–37 ಹಳೇಯ ವಾರ್ಡ್ ಆಗಿದ್ದು, ಹೆಚ್ಚಿನ ಭಾಗವು ತಗ್ಗು ಪ್ರದೇಶದಿಂದ ಕೂಡಿರುತ್ತದೆ. ಈ ವಾರ್ಡ್‌ನಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಹರಿಜನ ಗಿರಿಜನ, ಅಲ್ಪ ಸಂಖ್ಯಾತರು ಹಾಗೂ ಹಿದುಳಿದ ವರ್ಗದ ಜನರಿಗೆ ವಸತಿ ಸಂಕೀರ್ಣವನ್ನು ಕಲ್ಪಿಸುವುದು ಅವಶ್ಯವಿರುತ್ತದೆ, ಈ ವಾರ್ಡಿನ ಪಾಲಿಕೆಯ ಸದಸ್ಯರು ವಾರ್ಡಿನ ಪರಿವೀಕ್ಷಣೆಯ ಸಮಯದಲ್ಲಿ ಸದರಿ ವಾರ್ಡ್‌ನ ಬಿ.ಕೆ.ನಗರದ 1ನೇ ಮುಖ್ಯ ರಸ್ತೆಯಲ್ಲಿರುವ ನಿವೇಶನವು ವಸತಿ ಸಂಕೀರ್ಣದ ನಿರ್ಮಾಣಕ್ಕೆ ಯೋಗ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಹಾಗೂ ಹಾಲಿ ವಸ್ತುಸ್ಥಿತಿಯನ್ನು ತೋರಿಸುವ ಫೋಟೋಗಳನ್ನು ಸಹ ಇದರೊಂದಿಗೆ ಲಗತ್ತಿಸಲಾಗಿದೆ. ಈ ವಿಷಯವಾಗಿ ಪಾಲಿಕೆ ಸದಸ್ಯರು ಸೂಕ್ತ ಕ್ರಮ ಕೈಗೊಳ್ಳಲು ಅವರ ಪತ್ರ ದಿನಾಂಕ 24–08–2010 ರಲ್ಲಿ ತಿಳಿಸಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ಒಟ್ಟು 32 ಯುನಿಟ್‌ಗಳ 3 ಅಂತಸ್ತಿನ ಇಂತಹ 3 ವಸತಿ ಸಂಕೀರ್ಣದ ನಿರ್ಮಾಣಕ್ಕೆ 2010–2011ರ ಸಾಲಿನಲ್ಲಿ ರೂ. 19.35 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಆದ್ದರಿಂದ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ 2010–2011ರ ದರಪಟ್ಟಿಯಂತೆ ಒಟ್ಟು 6 ಅಂದಾಜು ಪಟ್ಟಿಗಳನ್ನು ಮಾಡಲಾಗಿದ್ದು ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ವಾರ್ಡ್ ಸಂಖ್ಯೆ | ವಿವರಗಳು | ಅಂದಾಜು ಮೊತ್ತ ಕೋಟಿಗಳಲ್ಲಿ |
|---|---|---|---|
| 1 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಎ–1** | 3.645 |

| | | | |
|---|---|---|---|
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಎ–1ಎ** | 2.855 |
| | | **ಒಟ್ಟು** | **6.500** |

.....2



| | | | |
|---|---|---|---|
| 2 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಬಿ–2** | 3.753 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಬಿ–2ಎ** | 2.747 |
| | | **ಒಟ್ಟು** | **6.500** |
| 3 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಡಿ–4** | 4.384 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಡಿ–4ಎ** | 1.966 |
| | | **ಒಟ್ಟು** | **6.350** |
| | | **ಒಟ್ಟು ಮೊತ್ತ** | **19.350** |

ಈ ಹಿನ್ನೆಲೆಯಲ್ಲಿ, ಯಶವಂತಪುರ ವಾರ್ಡ್‌ನ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ಒಟ್ಟು 32 ಯುನಿಟ್‌ಗಳ ಮೂರು ಅಂತಸ್ತಿನ 3 ಬ್ಲಾಕ್‌ಗಳನ್ನು ವಸತಿ ಸಂಕೀರ್ಣದ ನಿರ್ಮಾಣಕ್ಕೆ 2010–2011 ರ ಸಾಲಿನಲ್ಲಿ ರೂ. 19.35 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರು ಮೂಲಕ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲು ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** ಆಯುಕ್ತರ ಟಿಪ್ಪಣಿ ದಿನಾಂಕ 09–12–2010ರ ಟಿಪ್ಪಣಿಯಲ್ಲಿನ ಕ್ರಮಸಂಖ್ಯೆ 1ರಲ್ಲಿನ ಕಾಮಗಾರಿ, ಬ್ಲಾಕ್–ಎ–1ಗಳಲ್ಲಿನ ವಸತಿ ಸಂಕೀರ್ಣ ನಿರ್ಮಾಣಕ್ಕೆ ಅಂದಾಜು ಮೊತ್ತ ರೂ.3.645 ಕೋಟಿಗಳಿಗೆ ಮಾತ್ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿದೆ. ಉಳಿದ ಕಾಮಗಾರಿಗಳಿಗೆ ಮುಂದಿನ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನದಲ್ಲಿ ಪಡೆಯಬಹುದಾಗಿದೆ.

**02]. ವಿಷಯದ ಸಂಖ್ಯೆ :–ತೆಆಸ್ಥಾಸ/123/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಉಆ(ಆರೋಗ್ಯ ಮತ್ತು ಜಾಹೀರಾತು)/ಪಿಆರ್/744/10–11, ದಿನಾಂಕ: 23–12–2010 ರಲ್ಲಿ ವಿವರಿಸಿರುವಂತೆ, ದಿನಾಂಕ:11–12–2010ರಂದು, ಸನ್ಮಾನ್ಯ ಶ್ರೀ.ಅಶೋಕ್, ಗೃಹ, ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ, ಪಾಲಿಕೆ ಆಡಳಿತ ಪಕ್ಷದ ನಾಯಕರು, ಪಾಲಿಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು, ಹಾಗೂ ಪಾಲಿಕೆ ಆಯುಕ್ತರು, ಪಾಲಿಕೆ ಅಧಿಕಾರಿಗಳೊಂದಿಗೆ ಕೇಂದ್ರ ಕಛೇರಿಯ ಸಭಾಂಗಣ–1ರಲ್ಲಿ ಮಧ್ಯಾಹ್ನಾ 12ರಿಂದ 3.00 ಘಂಟೆಯ ವರೆಗೆ ನಡೆದ ಸಭೆಯಲ್ಲಿ ಬೃ.ಬೆಂ.ಮ.ಪಾಲಿಕೆಯ ಜಾಹೀರಾತು ನೀತಿಯಲ್ಲಿ ಜಾಹೀರಾತು ತೆರಿಗೆಯಲ್ಲಿ ಹೆಚ್ಚು ಆದಾಯ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಾಗಿ ತಿಳಿಸಿ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರುವ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಹಲವಾರು ಬದಲಾವಣೆಗಳನ್ನು ಜಾರಿಗೆ ತಂದು ಸಾರ್ವಜನಿಕರ ಪ್ರಾಣ ರಕ್ಷಣೆ ಮತ್ತು ಆಸ್ತಿ ರಕ್ಷಣೆಗೆ ಒತ್ತು ನೀಡಿ ಪಾಲಿಕೆಗೆ ಯಾವುದೇ ಆದಾಯ ಸೋರಿಕೆ ಆಗದಂತೆ ಹಾಗೂ ಹೆಚ್ಚು ಆದಾಯವನ್ನು ತಂದುಕೊಡುವ ಬಗ್ಗೆ ಪ್ರಸ್ತಾಪಿಸಿದ ಮಾನ್ಯ ಸಚಿವರು, ಸ್ಥಾಯಿ

ಸಮಿತಿ ಅಧ್ಯಕ್ಷರುಗಳು, ಮಾನ್ಯ ಆಯುಕ್ತರು ಕ್ರಮ ವಹಿಸಲು ಸೂಚಿಸಿರುತ್ತಾರೆ. ಈ ಸಂದರ್ಭದಲ್ಲಿ ಒಂದು ಜಾಹೀರಾತು ಸಂಘದ ಅಧ್ಯಕ್ಷರಾದ ಶ್ರೀ.ಆರ್.ಕೃಷ್ಣ ದೇವರಾಯ ರವರು ಹಾಜರಿದ್ದು, ಜಾಹೀರಾತು ತೆರಿಗೆಯ ಹಾಲಿ ಸ್ಥಿತಿಯನ್ನು ಮುಂದುವರೆಸುವಂತೆ ಸುಮಾರು ಕುಟುಂಬಗಳು ಈ ಕೈಗಾರಿಕೆ ಮೇಲೆ ಅವಲಂಬಿತರಾಗಿರುವುದಾಗಿ ಮನವಿ ಮಾಡಿದರು. ಮಾನ್ಯ ಸಚಿವರು ಎಲ್ಲಾ ಅಹವಾಲುಗಳನ್ನು ಆಲಿಸಿ ಹಾಲಿ ಇರುವ ಜಾಹೀರಾತು–2006ಕ್ಕೆ ತಿದ್ದುಪಡಿ ತರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಒಂದು ವಾರದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಪ್ರಸ್ತಾವನೆ ಮಂಡಿಸಿ, ಮುಂದಿನ ಪಾಲಿಕೆ ಸಭೆಯಲ್ಲಿ ವಿಷಯ ಮಂಡಿಸಿ, ಚರ್ಚಿಸಿ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಿರುತ್ತಾರೆ.

.....3



(1) ಈಗಾಗಲೇ ಹಾಲಿ ಇರುವ ಬೈಲಾದಂತೆ 'ಎ' ವಲಯದಲ್ಲಿ ಜಾಹೀರಾತು ನಿಷೇಧಿಸಿದ್ದು, ಸದರೀ ವಲಯಕ್ಕೆ ನಗರದ ಚಾಲುಕ್ಯ ವೃತ್ತದಿಂದ ಬಸವೇಶ್ವರ ವೃತ್ತ, ಹಳೇ ಹೈಗ್ರೌಂಡ್ಸ್ ಪೋಲೀಸ್ ವೃತ್ತ ಬಾಲಬ್ರೂಹಿ ಅಥಿತಿ ಗೃಹ ಮತ್ತು ಗಾಲ್ಫ್ ಕ್ಲಬ್ ಮೂಲಕ ಸಂಚರಿಸುವ ರಸ್ತೆ ವಿಂಡ್ಸರ್ ಮ್ಯಾನರ್ ಜಂಕ್ಷನ್, ಬಿ.ಡಿ.ಎ ಜಂಕ್ಷನ್ ಮೂಲಕ – ಕಾವೇರಿ ಜಂಕ್ಷನ್ ಮೂಲಕ ಮೇಖ್ರಿ ವೃತ್ತದ ವರೆಗೆ ಸೇರಿಸಬೇಕೆಂದು ಹಾಗೂ ಕಾವೇರಿ ಜಂಕ್ಷನ್‌ನಿಂದ ಬಾಷ್ಯಂ ವೃತ್ತದವರೆಗೆ ಸೇರಿಸಬೇಕೆಂದು ಆದೇಶಿಸಿರುತ್ತಾರೆ.

(2) 'ಎ' ವಲಯಗಳಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಮೂಲ ಸೌಲಭ್ಯಗಳನ್ನು ಸೃಷ್ಟಿ ಮಾಡುವ ಯೋಜನೆಗಳನ್ನು ಬಿಟ್ಟು ಯಾವುದೇ ತರಹದ ಜಾಹೀರಾತಿಗೆ ಅವಕಾಶ ನೀಡತಕ್ಕದ್ದಲ್ಲ.

(3) ಕಟ್ಟಡಗಳ ಮೇಲೆ ಯಾವುದೇ ಕಾರಣಕ್ಕೂ ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ರಕ್ಷಣೆ ದೃಷ್ಟಿಯಿಂದ ಹಾಗೂ ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡುವ ದೃಷ್ಠಿಯಿಂದ ಮತ್ತು ಬೆಂಗಳೂರು ನಗರದ ಸೌಂದರ್ಯವನ್ನು ಕಾಪಾಡುವ ದೃಷ್ಠಿಯಿಂದ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡತಕ್ಕದ್ದಲ್ಲ. ಈ ಕೂಡಲೇ ಎಲ್ಲಾ ಕಟ್ಟಡಗಳ ಮೇಲೆ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸತಕ್ಕದ್ದು.

(4) ಬಿ.ಬಿ.ಎಂ.ಪಿ ಸ್ವತ್ತುಗಳ ಜಾಹೀರಾತಿಗೆ ಸಂಬಂಧಿಸಿದಂತೆ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆ ವಿಧಿಸುವ ಪದ್ಧತಿ ಅವೈಜ್ಞಾನಿಕವಾಗಿದ್ದು ಸದರೀ ತೆರಿಗೆಯನ್ನು ವಲಯ ಅಥವಾ ಪ್ಯಾಕೇಜ್ ಅಥವಾ ವಾರ್ಡ್‌ವಾರು ಟೆಂಡರ್ / ಹರಾಜು ಮಾಡಿ ಅದರಂತೆ ಗರಿಷ್ಠ ತೆರಿಗೆಯನ್ನು ನಿಗದಿಪಡಿಸಿ ಕರಾರು ಪತ್ರ ಪಡೆದು, Security Deposit /Bank Guarantee ಪಡೆದು ಪ್ರತಿ ಮೂರು ವರ್ಷಗಳಿಗೊಮ್ಮೆ ವಲಯ ಅಥವಾ ವಾರ್ಡ್‌ವಾರು ಹರಾಜು ಮುಖಾಂತರ ನಿಗದಿಪಡಿಸಿದ ಜಾಹೀರಾತು ತೆರಿಗೆಯನ್ನು ನಿಗದಿಪಡಿಸತಕ್ಕದ್ದು.

(5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ/ಪ್ಯಾಕೇಜ್/ವಾರ್ಡ್‌ವಾರು ಖಾಸಗೀ ಸ್ವತ್ತುಗಳಲ್ಲಿಯೂ ಸಹ ಜಾಹೀರಾತು ಹಕ್ಕುಗಳನ್ನು ಹರಾಜು ಮಾಡಿ ಪಾಲಿಕೆ ಆದಾಯದ ದೃಷ್ಟಿಯಿಂದ ಹೆಚ್ಚು ಆದಾಯವನ್ನು ಪಡೆಯುವಂತೆ ಕ್ರಮ ವಹಿಸುವುದು.

(6) ಹಾಲಿ ಇರುವ ಜಾಹೀರಾತು ನೀತಿಯನ್ನು 31–12–2010 ರವರೆಗೆ ಮಾತ್ರ ಮುಂದುವರೆಸಿ 1–1–2011 ರಿಂದ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರುವುದು.

(7) ಸ್ವಜಾಹೀರಾತುಗಳಿಗೆ ಸಂಬಂಧಿಸಿದಂತೆ ಈ ಜಾಹೀರಾತುಗಳು ಯಾವ ವಲಯ ಅಥವಾ ಪ್ಯಾಕೇಜಿಗೆ ಅನ್ವಯವಾಗುತ್ತವೋ ಅಲ್ಲಿಗೆ ನಿಗಧಿಪಡಿಸಿದ ಜಾಹೀರಾತು ತೆರಿಗೆಯನ್ನು ವಿಧಿಸಲಾಗುವುದು.

(8) ಬಿ.ಬಿ.ಎಂ.ಪಿಗೆ ಸೇರಿದ ಸ್ವತ್ತುಗಳು ಅಂದರೆ Pole Kiosks, Bus-shelters, Glow sign Boxes , Police Umbrallas, Sky walks, Road medians, Toilet Spaces, ಮೊದಲಾದ ಸ್ವತ್ತುಗಳ ಮೇಲೆ

ಪ್ರದರ್ಶಿಸಲಾಗುವ ಜಾಹೀರಾತುಗಳನ್ನು ನೀಡುವಲ್ಲಿ ಸಹ **Tender Cum auction** ಮುಖಾಂತರ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಲಾಗುವುದು. ಪರಂತು ಈಗಾಗಲೇ ಇಂತಹ ಸ್ವತ್ತುಗಳ ಮೇಲೆ ನಿಗಧಿಪಡಿಸಿರುವ ಜಾಹೀರಾತು ತೆರಿಗೆಯನ್ನು ಪ್ರಸಕ್ತ ಹರಾಜಿನಲ್ಲಿ ನಿಗಧಿಪಡಿಸಿದ ತೆರಿಗೆಗೆ ಸರಸಮಾನವಾಗಿ ಪರಿಷ್ಕರಿಸಲಾಗುವುದು. ಈ ರೀತಿ ಪರಿಷ್ಕೃತ ತೆರಿಗೆಗೆ ಒಪ್ಪದಿರುವ ಪ್ರಕರಣಗಳ ಒಪ್ಪಂದಗಳನ್ನು ರದ್ದುಪಡಿಸಿ ಹೊಸದಾಗಿ Tender Cum auction ಮುಖಾಂತರ ವಿಲೇವಾರಿ ಮಾಡಲಾಗುವುದು

(9) ಭೂ ಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆ, ಮುಂತಾದ ಅನಿವಾರ್ಯ ಕಾರಣದಿಂದ ಅಳವಡಿಸಲಾಗಿರುವ ಫಲಕಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಹಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ 10,000–00 ವಿಧಿಸಿ ಅನುಮತಿ ನೀಡಬಹುದಾಗಿದೆ. ಅದೇ ರೀತಿ ರೂ 10,000–00 ವರ್ಗಾವಣೆ ಶುಲ್ಕ

.....4



ವಿಧಿಸಿ ಒಂದು ಸಂಸ್ಥೆಯು ನೊಂದಾಯಿಸಿರುವ ಜಾಹೀರಾತು ಫಲಕಗಳನ್ನು ಮತ್ತೊಂದು ಸಂಸ್ಥೆಗೆ ವರ್ಗಾಹಿಸಿಕೊಳ್ಳಲು ಅನುಮತಿ ನೀಡಬಹುದಾಗಿರುತ್ತದೆ.

(10) ನಿಯಾನ್ ಬೋರ್ಡ್‌ಗಳು ಮತ್ತು ಎಲ್.ಇ.ಡಿ ಬೋರ್ಡ್‌ಗಳಿಗೂ ಸಹ ವಲಯ/ಪ್ಯಾಕೇಜುವಾರು ಹರಾಜು ಮಾಡಿ ಪ್ರತ್ಯೇಕವಾಗಿ ಗರಿಷ್ಠ ಜಾಹೀರಾತು ತೆರಿಗೆಯನ್ನು ವಿಧಿಸಬಹುದಾಗಿದೆ.

(11) 4ಎ(ii) ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000–00 ಮೊತ್ತವನ್ನು ರೂ.20,000–00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ ಹಾಲಿ ಇರುವ ಮೊತ್ತ ರೂ.2,000–00 ಗಳಿಂದ ರೂ.5,000–00 ಗಳಿಗೆ ಹೆಚ್ಚಿಸುವುದು.

**ತಿದ್ದುಪಡಿ**

These Amended Bye-laws shall be called Amended Bye-laws of 2010 and come into effect from 1st Jan 2011 or from the date of approval by the government.

ಈ ತಿದ್ದುಪಡಿ ಉಪವಿಧಿಗಳನ್ನು 2010ರ ತಿದ್ದುಪಡಿ ಉಪವಿಧಿಗಳೆಂದು, ಹಾಗೂ 1ನೇ ಜನವರಿ 2011 ರಿಂದ ಅಥವಾ ಸರ್ಕಾರದಿಂದ ಅನುಮೋದಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

wherever it is mentioned as corporation or Bangalore city corporation in these Bye-laws it should be read as Bruhat Bangalore Mahanagara Palike

ಎಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯೆಂದು ಉಲ್ಲೇಖಿಸಲಾಗಿದೆಯೋ ಅದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ಓದತಕ್ಕದ್ದು.

## Defnition :

**ಸ್ಪಷ್ಟೀಕರಣ:**

**1.A(1)** These Bye-laws shall be called Bruhath Bangalore Mahanagara Palike, Advertisement Bye-laws.

**1.(ಎ)(1)** ಈ ಉಪವಿಧಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳೆಂದು ಪರಿಗಣಿಸತಕ್ಕದ್ದು.

**2.A(2)(a)** The Advertisement Tax leived by the corporation on all advertisements as per section 134 of KMC Act 1976 and such advertisement tax can be fixed by way of tendering or auction- ioning the advertisement rights and the maximum amount got by uch auction shall be fixed as advertisement tax for that term of three years.

**2.ಎ(2)(ಎ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆ.ಎಂ.ಸಿ ಕಾಯ್ದೆ 1976ಕಲಂ 134ರಂತೆ ವಿಧಿಸುವ ಜಾಹೀರಾತು ತೆರಿಗೆಯನ್ನು ಟೆಂಡರ್ ಮತ್ತು ಹರಾಜಿನ ಮುಖಾಂತರ ನಿಗಧಿಪಡಿಸಲಾಗುವುದು. ಹಾಗೂ ಅತಿ ಹೆಚ್ಚಿನ ಮೊತ್ತವನ್ನು ಜಾಹೀರಾತುತೆರಿಗೆಯಾಗಿ ಮುಂದಿನ 3 ವರ್ಷಗಳ ಕಾಲಾವಧಿಗೆ ವಿಧಿಸಲಾಗುವುದು.

**1.A(1)** The Bye laws will come into effect in all the eight zones of BBMP. In these Bye-laws Corporation or Bangalore city corporation should be read as Bruhat Bangalore Mahanagara Palike

.....5



**1.ಎ(1)** ಜಾಹೀರಾತು ಉಪವಿಧಿಗಳು ಎಲ್ಲಾ ಪಾಲಿಕೆಯ 8 ವಲಯಗಳಲ್ಲಿ ಅನ್ವಯವಾಗುವುದು ಈ ಉಪ ವಿಧಿಗಳಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯ ಉಲ್ಲೇಖನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಪರಿಗಣಿಸತಕ್ಕದ್ದು.

2.A(11)Commissioner means commissioner of Bangalore Mahanagara Palike (BBMP)

2.ಎ(11) ಆಯುಕ್ತರು ಎಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು

1) For the words BMP – BBMP shall be incorporated

**12)** ಬೆಂ.ಮ.ಪಾ ಅನ್ನು ಬೃ.ಬೆಂ.ಮ.ಪಾ ಎಂದು ನಮೂದಿಸತಕ್ಕದ್ದು.

**13)** For the words Bangalore Mahanagara Palike shall be Incorporated

**13)** ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ನಮೂದಿಸತಕ್ಕದ್ದು.

**2.A(21)** Shall be deleted.
(as it diverts the attention of drivers & leads to accidents)

**2.ಎ(21)** ಕೈ ಬಿಡತಕ್ಕದ್ದು.
(ವಾಹನ ಚಾಲಕರನ್ನು ದಿಕ್ಕುತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ)

**(22)** the words or "any portion of a roof " shall be deleted

**(22)** ವಾಕ್ಯ ಅಥವಾ ಮೇಲ್ಛಾವಣಿಯ ಎಲ್ಲಾ ವಿಧಗಳ ಭಾಗವನ್ನು ಕೈಬಿಡತಕ್ಕದ್ದು.

## Section II

## ಕಲಂ II

**3.A (2)** " or any portion of a roof " shall be delected

3.ಂ (2) "ಅಥವಾ ಮೇಲ್ಚಾವಣಿಯ ಎಲ್ಲಾ ಭಾಗದಲ್ಲಿ" ಕೈಬಿಡತಕ್ಕದ್ದು.

**3.A (7)** at a Rate not less than one lakh rupees & removal of such hoarding without any further notice & to take action to cancel the Registration of the agency.

3.ಂ (7) ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಆಗದಂತ ದರ ಮತ್ತು ನೋಟೀಸ್ ಅನ್ನು ನೀಡದೆ ಫಲಕವನ್ನು ತೆರವುಗೊಳಿಸುವುದು ಹಾಗೂ ಸಂಸ್ಥೆಯ ನೊಂದಣಿಯನ್ನು ರದ್ದುಗೊಳಿಸಲು ಕ್ರಮವಹಿಸುವುದು.

**3.A (8)** The words "In respect of high rise buildings, NOC should be obtained from Fire force Department" shall be deleted.

3.ಎ (8) ಎತ್ತರದ ಕಟ್ಟಡಗಳಿಗೆ ಅಗ್ನಿ ಶಾಮಕ ದಳ ಇಲಾಖೆಯಿಂದ ನಿರಾಕ್ಷೇಪಣ ಪತ್ರವನ್ನು ಪಡೆಯುವುದು ಕೈಬಿಡುವುದು.

.....6



**3A (14)** "and 30 feet by 15 feet when erected on a roof top provided the hoarding does not project beyond building line or beyond roof edges" shall be deleted.

**3ಂ (14) "ಮತ್ತು 30 ಅಡಿ X 15 ಅಡಿ ಜಾಹೀರಾತು ಫಲಕಗಳನ್ನು ಮೇಲ್ಚಾವಣಿಯಲ್ಲಿ ಅಳವಡಿಸಿದರೆ ಅಂತಹ ಜಾಹೀರಾತು ಫಲಕಗಳು ಕಟ್ಟಡದ ರೇಖೆಗಳನ್ನು ಅಥವಾ ಮೇಲ್ಚಾವಣಿಯ ತುದಿಗಳನ್ನು ಅತಿಕ್ರಮಿಸುವುದು" ಎನ್ನುವುದನ್ನು ಕೈಬಿಡತಕ್ಕದ್ದು.**

**3A (14) (i)** "The minimum distance between the two hoardings shall be 10 Metres" shall be included.

**3ಂ (14) (i) "ಎರಡು ಫಲಕಗಳ ನಡುವಿನ ಅಂತರ ಕನಿಷ್ಠ 10 ಮೀಟರು ನಷ್ಟಿರಬೇಕು" ಎಂದು ಸೇರಿಸತಕ್ಕದ್ದು.**

**(ii)** "The minimum distance to be maintained between two hoardings shall be Ten metres" shall be included.

**(ii) "ಎರಡು ಫಲಕಗಳ ನಡುವಿನ ಅಂತರ ಕನಿಷ್ಠ 10 ಮೀಟರು ನಷ್ಟಿರಬೇಕು" ಎಂದು ಸೇರಿಸತಕ್ಕದ್ದು.**

**(iii)** "Shall Ten Metres" shall be included.
"No hoardings shall be permitted one above the other, when erected on roof of any building" shall be deleted.

"The hoardings one above the other may be permitted on the ground" shall be included

**(iii) "10 ಮೀಟರು"ಗಳೆಂದು ಸೇರಿಸತಕ್ಕದ್ದು**

"ಕಟ್ಟಡಗಳ ಛಾವಣಿಯ ಮೇಲೆ ಯಾವುದೇ ಫಲಕಗಳು ಒಂದರ

ಮೇಲೊಂದು ಅಳವಡಿಸತಕ್ಕದಲ್ಲ." ಎನ್ನುವುದನ್ನು ಕೈಬಿಡತಕ್ಕದ್ದು.

"ನೆಲದ ಮೇಲೆ ಫಲಕಗಳನ್ನು ಒಂದರ ಮೇಲೆ ಮತ್ತೊಂದನ್ನು ಅಳವಡಿಸಲು ಅನುಮತಿ ನೀಡಬಹುದು" ಎಂದು ಸೇರಿಸತಕ್ಕದ್ದು.

**(v) <u>From ground</u>**

| | | |
|---|---|---|
| Zone A | - | No hoardings including neons |
| Zone B | - | 40 feet (From Ground) |
| Zone C | - | 50 feet (From Ground) |
| Zone D | - | 80 feet (From Ground) |

**(v) <u>ನೆಲದಿಂದ</u>**

| | |
|---|---|
| *ಎ ವಲಯ* | – ಜಾಹೀರಾತು ಫಲಕಗಳು ಹಾಗೂ ನಿಯಾನ್ ಸೈನ್ ಒಳಗೊಂಡಂತೆ ಕಡ್ಡಾಯವಾಗಿ ಅನುಮಿತಿ ಇಲ್ಲ. |
| ಬಿ ವಲಯ | – 40 ಅಡಿ (ನೆಲದಿಂದ) |
| ಸಿ ವಲಯ | – 50 ಅಡಿ (ನೆಲದಿಂದ) |
| ಡಿ ವಲಯ | – 80 ಅಡಿ (ನೆಲದಿಂದ) |

.....7



**3.A (22)** "All Advertisement tax shall be paid by the 30th July each year in single installment". The Advertiser shall furnish security deposit of one year advance and furnish a Bank Guarantee for the total amount of the period which may be mentioned in the agreement. All other provisions in this sub rule shall be deleted.

**3.ಎ (22)** "ಏಜೆನ್ಸಿಗಳು ಎಲ್ಲಾ ಜಾಹೀರಾತುಗಳ ವಾರ್ಷಿಕ ತೆರಿಗೆಯನ್ನು ಒಂದೇ ಕಂತಿನಲ್ಲಿ ಪ್ರತಿ ವರ್ಷ ಜುಲೈ 30ನೇ ದಿನಾಂಕದೊಳಗಾಗಿ ಪಾವತಿಸತಕ್ಕದ್ದು." ಜಾಹೀರಾತುದಾರರು ಭದ್ರತಾ ಠೇವಣಿಯಾಗಿ ಮುಂಗಡ ವಾರ್ಷಿಕ ಠೇವಣಿಯನ್ನು ಪಾವತಿಸತಕ್ಕದ್ದು. ಮತ್ತು ಕರಾರಿನಲ್ಲಿ ನಮೂದಿಸಿರುವ ಅವಧಿಗೆ ಬ್ಯಾಂಕ್ ಭರವಸೆ ನೀಡುವುದು. ಇತರೇ ನಿಯಮಗಳನ್ನು ಕೈಬಿಡತಕ್ಕದ್ದು.

ಮೇಲ್ಕಂಡ ತಿದ್ದುಪಡಿಗಳನ್ನು ಅಳವಡಿಸಲು ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

## <u>ದಿನಾಂಕ : 24–01–2011 ರ ಸಭೆಯ ನಡವಳಿಗಳು</u>

**<u>ನಿರ್ಣಯ:– ದಿನಾಂಕ 26–10–2010 ರಂದು ಮಾನ್ಯ ಆಯುಕ್ತರು ತೀರ್ಮಾನಕ್ಕಾಗಿ ಮಂಡಿಸಿದ್ದ ಟಿಪ್ಪಣಿಯನ್ನು ದಿನಾಂಕ 15–11–2010 ರಂದು ನಿರ್ಣಯ ಮಾಡಿ ದಿನಾಂಕ 29–12–2010 ರಂದು ನಡೆದ ಪಾಲಿಕೆ ಸಭೆ ಮುಂದೆ ವಿ.ಸಂ 12(145)/2010–11 ರಂತೆ ಮಂಡಿಸಿದ್ದು, ಜಾಹಿರಾತು ಬೈಲಾಗಳ ತಿದ್ದುಪಡಿ ಕಾಯ್ದಿರಿಸಿ ಘನ ಉಚ್ಚ ನ್ಯಾಯಾಲಯದ</u>**

ರಿಟ್ ಅರ್ಜಿ ಸಂಖ್ಯೆ :34737–34747/2010 ರಂತೆ ತಾತ್ಕಾಲಿಕ ತೀರ್ಮಾನವನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದಂತೆ ಮಾನ್ಯ ಆಯುಕ್ತರು ದಿನಾಂಕ 23–12–2010ರಂದು ಬೈಲಾಗಳ ಸಮಗ್ರ ತಿದ್ದುಪಡಿ ಮತ್ತು ಹಲವು ಬದಲಾವಣೆಗಳನ್ನು ಕೋರಿ ಟಿಪ್ಪಣಿಯನ್ನು ಮಂಡಿಸಿರುತ್ತಾರೆ. ಈ ಮೇಲ್ಕಂಡ ಎರಡು ಟಿಪ್ಪಣಿಗಳನ್ನು ಸಮಗ್ರವಾಗಿ ಪರಿಶೀಲಿಸಿ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಈ ಕೆಳಕಂಡಂತೆ ತೀರ್ಮಾನಿಸಿದೆ.

*ಮೇಲ್ಕಂಡ ಕ್ರಮ ಸಂಖ್ಯೆ 1 ರಿಂದ 10 ರವರೆಗಿನ ಅಂಶಗಳ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.*

ಮಾನ್ಯ ಮುಖ್ಯ ಮಂತ್ರಿಯವರ ದಿನಾಂಕ 25–08–2008ರ ನಡವಳಿಯ ರೀತಿ ಒಂದು ಸಮಗ್ರ ಜಾಹೀರಾತು ನೀತಿಯನ್ನು ತಯಾರಿಸಲು ಸೂಚಿಸಿದ್ದು ಈ ಬಗ್ಗೆ ಕೆಲವು ರಸ್ತೆಗಳನ್ನು 'ಎ' 'ಬಿ' 'ಸಿ' 'ಡಿ' ವಲಯಗಳನ್ನು ಅದಲು ಮಾಡಿ ಈ ಕೆಳಕಂಡಂತೆ ತೀರ್ಮಾನಿಸಿದೆ.

.....8



ಎ, ಬಿ, ಸಿ, ಡಿ ವಲಯಗಳಲ್ಲಿ ಅದಲು ಬದಲು ಮಾಡಿರುವ ಪಟ್ಟಿ

ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಎ' ವಲಯಕ್ಕೆ ಸೇರಿಸುವ ಪ್ರಸ್ತಾವನೆ

| ಕ್ರ. ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಹಳೇ ಹೈಗ್ರೌಂಡ್ಸ್ ಪೋಲಿಸ್ ಸ್ಟೇಷನ್ ವೃತ್ತದಿಂದ ವಿಂಡ್ಸರ್ ಮ್ಯಾನರ್ ವೃತ್ತದವರೆಗೆ ಮಾತ್ರ (ವೃತ್ತವನ್ನು ಹೊರತು ಪಡಿಸಿ) | 'ಸಿ' | 'ಎ' |

*ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಬಿ' ವಲಯಕ್ಕೆ ಸೇರಿಸುವ ಪ್ರಸ್ತಾವನೆಯ ಬಗ್ಗೆ ಕೆಳಕಂಡಂತೆ ತೀರ್ಮಾನಿಸಿದೆ:*

| ಕ್ರ. ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|

| | | | |
|---|---|---|---|
| 1 | ಕನ್ನಿಂಗ್‌ಹ್ಯಾಂ ರಸ್ತೆ–ಸ್ಯಾಂಕಿ ರಸ್ತೆಯಿಂದ ಕ್ವೀನ್ಸ್ ಸರ್ಕಲ್ ಜಂಕ್ಷನ್‌ವರೆಗೆ | ‘ಸಿ’ | ‘ಬಿ’ |
| 2 | ರಾಜಾಜಿನಗರ 60ನೇ ಕ್ರಾಸ್–ಕಾರ್ಡ್ ರಸ್ತೆ ಜಂಕ್ಷನ್‌ನಿಂದ ಭಾಷ್ಯಂ ಸರ್ಕಲ್ ವರೆಗೆ | ‘ಸಿ’ | ‘ಬಿ’ |
| 3 | ರಾಜಾಜಿನಗರ 59ನೇ ಕ್ರಾಸ್‌ರಸ್ತೆ–ಭಾಷ್ಯಂ ಸರ್ಕಲ್ ಮೂಲಕ ಓಕಳಿಪುರಂ ಮುಖ್ಯರಸ್ತೆಯಿಂದ ಫ್ಲಾಟ್‌ಫಾರಂ ಜಂಕ್ಷನ್‌ವರೆಗೆ | ‘ಸಿ’ | ‘ಬಿ’ |
| 4 | ವಿಠಲ್ ಮಲ್ಯ ರಸ್ತೆ–ಸೆಂಟ್ ಮಾರ್ಕ್ಸ್ ರಸ್ತೆಯಿಂದ ಟೀಫಾನೀಸ್ ಸರ್ಕಲ್‌ನಿಂದ ರಾಜಾರಾಂ ಮೋಹನ್ ರಾಯ್ ರಸ್ತೆ ಜಂಕ್ಷನ್‌ವರೆಗೆ | ‘ಸಿ’ | ‘ಬಿ’ |
| 5 | ಬಳ್ಳಾರಿ ರಸ್ತೆಯಲ್ಲಿ ವಿನ್ಸರ್ ಮ್ಯಾನರ್ ವೃತ್ತದಿಂದ ಅಂತರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಮತ್ತು ಕಾವೇರಿ ವೃತ್ತದಿಂದ ಭಾಷ್ಯಂ ಸರ್ಕಲ್‌ವರೆಗೆ | ‘ಡಿ’ | ‘ಬಿ’ |
| 6 | ಪ್ಯಾಲೇಸ್ ರಸ್ತೆ–ಸಿಂಧೂ ಹೋಟೆಲ್‌ನಿಂದ ಅಂಡರ್ ಬ್ರಿಡ್ಜ್‌ವರೆಗೆ | ‘ಡಿ’ | ‘ಬಿ’ |
| 7 | ಜಯಮಹಲ್ ರಸ್ತೆ–ಮೇಖ್ರಿ ವೃತ್ತದಿಂದ ದಂಡು ರೈಲ್ವೆ ನಿಲ್ದಾಣದವರೆಗೆ | ‘ಡಿ’ | ‘ಬಿ’ |
| 8 | ಮಿಲ್ಲರ್ಸ್ ರಸ್ತೆ–ನೇತಾಜಿ ರಸ್ತೆಯಿಂದ ಡಾ॥ಎಂ.ವಿ. ಜಯರಾಮ್ ರಸ್ತೆ ಜಂಕ್ಷನ್‌ವರೆಗೆ | ‘ಡಿ’ | ‘ಬಿ’ |
| 9 | ಸ್ಟೇಷನ್ ರಸ್ತೆ–ನೇತಾಜಿ ರಸ್ತೆ ದಂಡು ರೈಲ್ವೆ ನಿಲ್ಧಾಣದಿಂದ ಟ್ಯಾನ್ರಿ ರಸ್ತೆ ಜಂಕ್ಷನ್‌ವರೆಗೆ | ‘ಡಿ’ | ‘ಬಿ’ |
| 10 | ರಿಚ್‌ಮಂಡ್ ರಸ್ತೆ–ವೆಲ್ಲಾರ್ ಜಂಕ್ಷನ್‌ನಿಂದ ಟ್ರಿನಿಟಿ ಸರ್ಕಲ್‌ವರೆಗೆ | ‘ಡಿ’ | ‘ಬಿ’ |

…..9



| | | | |
|---|---|---|---|
| 11 | ವಿಕ್ಟೋರಿಯಾ ರಸ್ತೆ–ಡಿಸೋಜ ಸರ್ಕಲ್‌ನಿಂದ ಏರ್‌ಪೋರ್ಟ್ ರಸ್ತೆವರೆಗೆ | ‘ಡಿ’ | ‘ಬಿ’ |
| 12 | ಕೇಂಬ್ರಿಡ್ಜ್ ರಸ್ತೆ–ಹಲಸೂರು ಸರ್ಕಲ್‌ನಿಂದ ಏರ್‌ಪೋರ್ಟ್ ಜಂಕ್ಷನ್‌ವರೆಗೆ | ‘ಡಿ’ | ‘ಬಿ’ |
| 13 | ಇಂಟರ್‌ಮಿಡಿಯಟ್ ರಿಂಗ್ ರಸ್ತೆ–ಕೋರಮಂಗಲ ದಿಂದ ಏರ್‌ಪೋರ್ಟ್ ರಸ್ತೆ ಜಂಕ್ಷನ್‌ವರೆಗೆ | ‘ಡಿ’ | ‘ಬಿ’ |
| 14 | 100 ಅಡಿರಸ್ತೆ–ಇನ್ನರ್ ರಿಂಗ್ ರಸ್ತೆ (17ನೇ ಮುಖ್ಯರಸ್ತೆ ಕೋರಮಂಗಲ) ಹೊಸೂರು ರಸ್ತೆ ಜಂಕ್ಷನ್‌ನಿಂದ ಕೇಂದ್ರಿಯ ಸಧನ್‌ನಿಂದ ಸರ್ಜಾಪುರ ರಸ್ತೆ ಜಂಕ್ಷನ್‌ನಿಂದ ಬಿ.ಡಿ.ಎ. ಕಾಂಪ್ಲೆಕ್ಸ್‌ನಿಂದ 80 ಅಡಿ ಪೆರಿಫೆರಿಯಲ್ ರಸ್ತೆ ಜಂಕ್ಷನ್‌ವರೆಗೆ | ‘ಡಿ’ | ‘ಬಿ’ |
| 15 | ಇನ್‌ಫ್ಯಾಂಟ್ರಿ ರಸ್ತೆ | -- | ‘ಬಿ’ |

1. ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ಪರಿಷ್ಕೃತ ಜಾಹೀರಾತು ತೆರಿಗೆ ವಿಧಿಸಿ 2 ವರ್ಷಗಳ ಅವಧಿಗೆ ಅಂದರೆ 2010-11 ಮತ್ತು 2011-12ನೇ ಸಾಲಿಗೆ ನವೀಕರಿಸುವುದು. ಪರಿಷ್ಕೃತ ಜಾಹೀರಾತು ತೆರಿಗೆ ಪೂರ್ವಾನ್ವಯ ದಿನಾಂಕ : 01-07-2010 ರಿಂದ ಜಾರಿಗೆ ಬರುವುದು.
2. 'ಬಿ' ಜಾಹೀರಾತು ವಲಯದಲ್ಲಿ ಶೇಕಡ 15% ರಷ್ಟು ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು ಉಳಿದ ವಲಯಗಳಲ್ಲಿ 'ಸಿ' ಮತ್ತು 'ಡಿ' ವಲಯಗಳಲ್ಲಿ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 25% ರಷ್ಟು ಹೆಚ್ಚು ಮಾಡುವುದು.
3. ಭೂಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆಗಳಿಂದಾಗಿ ನೈಜ ಕಾರಣದಿಂದ ಒಂದು ಸ್ಥಳದಿಂದ ಮೊತ್ತೊಂದು ಸ್ಥಳಕ್ಕೆ ಹಾಗೂ ಒಂದು ಕಂಪನಿ/ಏಜೆನ್ಸಿಯಿಂದ ಮತ್ತೋಂದು ಕಂಪನಿ/ಏಜೆನ್ಸಿ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ವರ್ಗಾಯಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ.5,000-00 ವಿಧಿಸಿ ಅನುಮತಿ ನೀಡುವುದು.
4. ದಿನಾಂಕ:29-11-2008ರ ಸುತ್ತೋಲೆಯನ್ನು ಸೂಕ್ತವಾಗಿ ಮಾರ್ಪಡಿಸಿ, 'ಎ' ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ಹೊಸದಾಗಿ ಖಾಸಗಿ ಸ್ವತ್ತುಗಳ ಮೇಲೆ ವಾಣೀಜ್ಯ ಜಾಹೀರಾತು ಫಲಕಗಳಿಗೆ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ವಿಶೇಷ ಪ್ರಕರಣಗಳಲ್ಲಿ ಅನುಮತಿ ನೀಡಲು ಹೊಸ ದರಗಳನ್ನು ನಿಗಧಿಪಡಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಕಡತ ಮಂಡಿಸುವುದು.
5. ಎಲ್.ಇ.ಡಿ, ಹಾಗೂ ಟ್ರೈವಿಜನ್, ಬೋರ್ಡ್‌ಗಳಿಗೆ ಈಗ ಹಾಲಿ ಇರುವ ದರಗಳ ಮೇಲೆ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು.
6. ಜಾಹೀರಾತು ಬೈಲಾ 3ಎ(7) ನಿಯಮವನ್ನು ತಿದ್ದುಪಡಿ ಮಾಡಿ ಯಾವುದೇ ಅನಧಿಕೃತ ಜಾಹೀರಾತು ಫಲಕಗಳಿಗೆ ಮಾಹಿತಿ ಲಭ್ಯವಿದ್ದಲ್ಲಿ ಜಾಹೀರಾತುದಾರರಿಗೆ, ಇಲ್ಲವಾದಲ್ಲಿ ಕಟ್ಟಡ/ಸ್ವತ್ತಿನ ಮಾಲೀಕರಿಗೆ ಸದರಿ ಅಳತೆಯ ಜಾಹೀರಾತು ಫಲಕದ 2 ವರ್ಷಗಳ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ವಸೂಲಿ ಮಾಡುವುದು.
7. 2009ರಿಂದ ಅನುಮತಿ ಪಡೆದಿರುವ ಫಲಕಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳಲ್ಲಿ ಘನ ನ್ಯಾಯಾಲಯಗಳಲ್ಲಿ ಸದರಿ ಫಲಕಗಳನ್ನು ತೆರವುಗೊಳಿಸದಂತೆ ಡೀಮ್ಡ್ ನವೀಕರಣವನ್ನು ಕೋರಿ ಅರ್ಜಿ

.....10



ಸಲ್ಲಿಸಿ ತಡೆ ಆಜ್ಞೆಗಳನ್ನು ಪಡೆದಿದ್ದು. ಸದರಿ ವಾಣಿಜ್ಯ ಜಾಹೀರಾತು ಪ್ರದರ್ಶಿಸಿರುವ ಅವಧಿಗೆ ಅಂದರೆ 01-07-2010 ರಿಂದಲೇ ಪರಿಷ್ಕರಿಸಿದ ಜಾಹೀರಾತು ಶುಲ್ಕವನ್ನು ಸದರಿ ಜಾಹೀರಾತುದಾರರಿಂದ ಪಾವತಿಸಿಕೊಂಡು ನವೀಕರಿಸುವುದು.

8. ಜಾಹೀರಾತು ಭೈಲಾ-2006 ಬೃ.ಬೆಂ.ಮ.ಪಾ. ವ್ಯಾಪ್ತಿಯ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳ ಜೊತೆಗೆ ಉಳಿಕೆ 5 ವಲಯಗಳಾದ 01) ಬೊಮ್ಮನಹಳ್ಳಿ ವಲಯ, 02) ಯಲಹಂಕ ವಲಯ 03) ರಾಜರಾಜೇಶ್ವರಿ ನಗರ ವಲಯ 04) ದಾಸರಹಳ್ಳಿ ವಲಯ 05) ಮಹದೇವಪುರ ವಲಯಗಳಲ್ಲಯೂ ದಿನಾಂಕ :16-01-2007 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ತರುವುದು.

9. 4ಎ(ii)ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000–00 ಮೊತ್ತವನ್ನು ರೂ. 20,000–00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ ಹಾಲಿ ಇರುವ ಮೊತ್ತ ರೂ.2,000–00 ಗಳಿಂದ ರೂ.5,000–00 ಗಳಿಗೆ ಹೆಚ್ಚಿಸುವುದು.

10. ಅನಧಿಕೃತ ಜಾಹಿರಾತು ಫಲಕಗಳನ್ನು ದಂಡ ವಿಧಿಸಿ ಸಕ್ರಮ ಗೊಳಿಸುವ ಬಗ್ಗೆ ಅಂಕಿಅಂಶಗಳನ್ನು ಕ್ರೂಢಿಕರಿಸಿಕೊಳ್ಳಲು ಒಂದು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವಂತೆ ಎರಡು ವಾರ ಗಡುವು ನೀಡಿ ಪತ್ರಿಕಾ ಪ್ರಕಟಣೆ ಹೊರಡಿಸಿ ತದನಂತರ ಬಂದ ಅರ್ಜಿಗಳನ್ನು ವಲಯವಾರು ವಿಂಗಡಿಸಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸುವುದು.

**ಜಾಹಿರಾತು ಬೈಲಾ–2006ಕ್ಕೆ ಅನುಮೋದಿಸಿರುವ ತಿದ್ದುಪಡಿಗಳು**

These Amended Bye-laws shall be called Amended Bye-laws of 2010 and come into effect from the date of the approval by the government.

ಈ ತಿದ್ದುಪಡಿ ಉಪವಿಧಿಗಳನ್ನು 2010ರ ತಿದ್ದುಪಡಿ ಉಪವಿಧಿಗಳೆಂದು, ಹಾಗೂ ಈ ಉಪವಿಧಿಗಳು ಸರ್ಕಾರವು ಅನುಮೋದಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

wherever it is mentioned as corporation or Bangalore city corporation in these Bye-laws it should be read as Bruhat Bangalore Mahanagara Palike

ಎಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯೆಂದು ಉಲ್ಲೇಖಿಸಲಾಗಿದೆಯೋ ಅದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ಓದತಕ್ಕದ್ದು.

## Defnition :

**ಸ್ಪಷ್ಟೀಕರಣ:**

**1.A(1)** These Bye-laws shall be called Bruhath Bangalore Mahanagara Palike, Advertisement Bye-laws.

**1.(ಎ)(1)** ಈ ಉಪವಿಧಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳೆಂದು ಪರಿಗಣಿಸತಕ್ಕದ್ದು.

.....11



**2.A(2)(a)** The Advertisement Tax leived by the corporation on all advertisements as per section 134 of KMC Act 1976 and such advertisement tax can be fixed by way of tendering or auction- ioning the advertisement rights and the maximum amount got by uch auction shall be fixed as advertisement tax for that term of three years.

**2.ಎ(2)(ಎ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆ.ಎಂ.ಸಿ ಕಾಯ್ದೆ 1976ಕಲಂ 134ರಂತೆ ವಿಧಿಸುವ ಜಾಹೀರಾತು ತೆರಿಗೆಯನ್ನು ಟೆಂಡರ್ ಮತ್ತು ಹರಾಜಿನ ಮುಖಾಂತರ ನಿಗಧಿಪಡಿಸಲಾಗುವುದು. ಹಾಗೂ ಅತಿ ಹೆಚ್ಚಿನ ಮೊತ್ತವನ್ನು ಜಾಹೀರಾತುತೆರಿಗೆಯಾಗಿ ಮುಂದಿನ 3 ವರ್ಷಗಳ ಕಾಲಾವಧಿಗೆ ವಿಧಿಸಲಾಗುವುದು.

ದಿನಾಂಕ 29–12–2010 ರಂದು ಪಾಲಿಕೆ ಸಭೆಯಲ್ಲಿ ನಿರ್ಣಯ ಮಾಡಿರುವಂತೆ, ಈ ವಿಷಯವನ್ನು ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ರಚಿಸಲು ಉದ್ದೇಶಿಸಿರುವ ಸದರಿ ಸಮಿತಿಯ ತಿರ್ಮಾನಕ್ಕೆ ಕಾಯ್ದಿರಿಸಿದೆ.

**1.A(1)** The Bye laws will come into effect in all the eight zones of BBMP. In these Bye-laws Corporation or Bangalore city corporation should be read as Bruhat Bangalore Mahanagara Palike

**1.ಎ(1)** ಜಾಹೀರಾತು ಉಪವಿಧಿಗಳು ಎಲ್ಲಾ ಪಾಲಿಕೆಯ 8 ವಲಯಗಳಲ್ಲಿ ಅನ್ವಯವಾಗುವುದು ಈ ಉಪ ವಿಧಿಗಳಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯ ಉಲ್ಲೇಖನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಪರಿಗಣಿಸತಕ್ಕದ್ದು.

2.A(11) Commissioner means commissioner of Bangalore Mahanagara Palike (BBMP)

2.ಎ(11) ಆಯುಕ್ತರು ಎಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು

12) For the words BMP – BBMP shall be incorporated

**12)** ಬೆಂ.ಮ.ಪಾ ಅನ್ನು ಬೃ.ಬೆಂ.ಮ.ಪಾ ಎಂದು ನಮೂದಿಸತಕ್ಕದ್ದು.

**13)** For the words Bangalore Mahanagara Palike shall be Incorporated

**13)** ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ನಮೂದಿಸತಕ್ಕದ್ದು.

**2.A(21)** Shall be deleted.
(as it diverts the attention of drivers & leads to accidents)

**2.ಎ(21)** ಕೈ ಬಿಡತಕ್ಕದ್ದು.
(ವಾಹನ ಚಾಲಕರನ್ನು ದಿಕ್ಕುತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ)

## Section II

**3.A (7)** at a Rate not less than one lakh rupees & removal of such hoarding without any further notice & to take action to cancel the Registration of the agency.

**3.ಎ (7)** ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಆಗದಂತ ದರ ಮತ್ತು ನೋಟೀಸ್ ಅನ್ನು ನೀಡದೆ ಫಲಕವನ್ನು ತೆರವುಗೊಳಿಸುವುದು ಹಾಗೂ ಸಂಸ್ಥೆಯ ನೊಂದಣಿಯನ್ನು ರದ್ದುಗೊಳಿಸಲು ಕ್ರಮವಹಿಸುವುದು.

.....12



**(v)** Zone D - 80 feet (From Ground)

(V) ಡಿ ವಲಯ – 80 ಅಡಿ (ನೆಲದಿಂದ)

**3.A (22)** "All Advertisement tax shall be paid by the 30th July each year in single installment". The Advertiser shall furnish security deposit of one year advance and furnish a Bank Guarantee for the total amount of the period which may be mentioned in the agreement.

**3.ಎ (22)** "ಏಜೆನ್ಸಿಗಳು ಎಲ್ಲಾ ಜಾಹೀರಾತುಗಳ ವಾರ್ಷಿಕ ತೆರಿಗೆಯನ್ನು ಒಂದೇ ಕಂತಿನಲ್ಲಿ ಪ್ರತಿ ವರ್ಷ ಜುಲೈ 30ನೇ ದಿನಾಂಕದೊಳಗಾಗಿ ಪಾವತಿಸತಕ್ಕದ್ದು." ಜಾಹೀರಾತುದಾರರು ಭದ್ರತಾ ಠೇವಣಿಯಾಗಿ ಮುಂಗಡ ವಾರ್ಷಿಕ ಠೇವಣಿಯನ್ನು ಪಾವತಿಸತಕ್ಕದ್ದು. ಮತ್ತು ಕರಾರಿನಲ್ಲಿ ನಮೂದಿಸಿರುವ ಅವಧಿಗೆ ಬ್ಯಾಂಕ್ ಭರವಸೆ ನೀಡುವುದು.

## 03]. ವಿಷಯದ ಸಂಖ್ಯೆ :–ತೆಲಆಸ್ಥಾಸ/124/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)75/10–11, ದಿನಾಂಕ: 22–12–2010 ರಲ್ಲಿ ವಿವರಿಸಿರುವಂತೆ, ದಿನಾಂಕ: 07/12/2010 ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಮುಖ್ಯ ಅಭಿಯಂತರರು, ಸಂಪರ್ಕ & ಕಟ್ಟಡಗಳು (ದಕ್ಷಿಣ) ರವರುಗಳು ಮೇಯೋಹಾಲ್ ನ್ಯಾಯಾಲಯದ ಕಟ್ಟಡವನ್ನು ಪರಿವೀಕ್ಷಣೆ ಮಾಡಿರುತ್ತಾರೆ. ಅದೇ ಸಮಯದಲ್ಲಿ ಮೇಯೋಹಾಲ್ ಕಟ್ಟಡವನ್ನು ಸಹ ಪರಿವೀಕ್ಷಣೆ ಮಾಡಿರುವುದಾಗಿ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ರವರು ತಿಳಿಸಿರುತ್ತಾರೆ.

ಹಾಲಿ ಮೇಯೋಹಾಲ್ ಕೋರ್ಟ್‌ನಲ್ಲಿ ಸ್ಥಳಾವಕಾಶ ಕಡಿಮೆ ಇರುವುದಾಗಿ ನ್ಯಾಯಾಂಗದ ರಿಜಿಸ್ಟರ್ ರವರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಮೇಯೋಹಾಲ್ ಕಟ್ಟಡ ಸಂಕೀರ್ಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಮೇಯೋಹಾಲ್ ಕಟ್ಟಡವನ್ನು 6 ಸಂಖ್ಯೆ ಹೆಚ್ಚುವರಿ ಕೋರ್ಟ್‌ಹಾಲುಗಳನ್ನಾಗಿ ಪರಿವರ್ತಿಸಲು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಅವಶ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ)ರವರು ದಿನಾಂಕ: 16/12/2010 ರಂದು ಪತ್ರದ ಮುಖೇನ ಕೋರಿರುತ್ತಾರೆ.

ಮೇಯೋಹಾಲ್ ಕಟ್ಟಡವು ನೆಲಮಹಡಿ ಹಾಗೂ ಮೊದಲನೇ ಮಹಡಿವುಳ್ಳದಾಗಿದ್ದು ಪ್ರತಿ ಅಂತಸ್ತಿನ ವಿಸ್ತೀರ್ಣ 498.89 ಚ.ಮೀ. (5368.00 ಚ.ಅಡಿ) ಇದು ಒಟ್ಟು ಕಟ್ಟಡದ ವಿಸ್ತೀರ್ಣ 997.78 ಚ.ಮೀ. (10736.00 ಚ.ಅಡಿ) ಇರುತ್ತದೆ.

ಆದರೆ ಸದರಿ ಮೇಯೋಹಾಲ್ ಕಟ್ಟಡವು 1883 ರಲ್ಲಿ ನಿರ್ಮಾಣವಾಗಿದ್ದು ಇದು ಒಂದು ಪಾರಂಪಾರಿಕ ಕಟ್ಟಡವಾಗಿರುತ್ತದೆ. ಮೇಯೋಹಾಲ್ ಕಟ್ಟಡದಲ್ಲಿ ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವ ಸಲುವಾಗಿ ದಿನಾಂಕ: 30/09/2005 ರಂದು ಪಾಲಿಕೆಯ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವ ಬಗ್ಗೆ ಕೆಂಪೇಗೌಡ ಸ್ಮಾರಕ ಪ್ರತಿಷ್ಠಾಪನ ಸಹಯೋಗದೊಂದಿಗೆ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಕ್ರಮ ವಹಿಸಿದ್ದು ಅನೇಕ ಸಭೆಗಳು ಜರುಗಿರುತ್ತವೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಫೀಲ್ಡ್ ಮಾರ್ಷಲ್, ಕೆ.ಎಂ.ಕರಿಯಪ್ಪ ರಸ್ತೆಯಲ್ಲಿರುವ ಮೇಯೋಹಾಲ್ ಕಟ್ಟಡವನ್ನು ***"ಹೆಚ್ಚುವರಿ ಕೋರ್ಟು ಆಗಿ ಪರಿವರ್ತಿಸಲು ಲೋಕೋಪಯೋಗಿ ಇಲಾಖೆಗೆ ಲೀಸ್ ಆಧಾರದ ಮೇಲೆ ಹಸ್ತಾಂತರಿಸುವ ಬಗ್ಗೆ"*** ಅಥವಾ ***"ಸದರಿ ಕಟ್ಟಡದಲ್ಲಿ ಈಗಾಗಲೇ ದಿನಾಂಕ:30/09/2005 ರಲ್ಲಿ ತೆಗೆದುಕೊಂಡ ನಿರ್ಣಯದಂತೆ ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಕೆಂಪೇಗೌಡ ಸ್ಮಾರಕ ಪ್ರತಿಷ್ಠಾಪನ ಸಹಯೋಗದೊಂದಿಗೆ ಸ್ಥಾಪಿಸಲು ಅಂಗೀಕಾರವಾಗಿರುವ ನಿರ್ಣಯದಂತೆ ಪ್ರಾರಂಭಿಸುವ ಬಗ್ಗೆ"*** ಸೂಕ್ತ ನಿರ್ಣಯ ಕೋರಿ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ 23–12–2010ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ದಿನಾಂಕ 30–09–2010ರ ಪಾಲಿಕೆ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿದೆ.

.....13

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/137/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(1ಎ)ಪಿಆರ್/230/10–11, ದಿನಾಂಕ: 24–12–2010 ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಬೆಂಗಳೂರಿನ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ ತಮ್ಮೇಶ್ ಗೌಡ ರವರು ನೀಡಿರುವ ಮನವಿಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಳೆದ 60 ವರ್ಷಗಳಿಂದ ಶೈಕ್ಷಣಿಕ ಕೇತ್ರದಲ್ಲಿ ಕೆಲಸ ಮಾಡುತ್ತಿರುವ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದ್ದು, ಇವರು ದಿನಾಂಕ: 30 ಮತ್ತು 31 ಡಿಸೆಂಬರ್ 2010ರಂದು ವಿದ್ಯಾರ್ಥಿಗಳ ಅಂತರಾಜ್ಯ ಜೀವನ ದರ್ಶನ (SIEL) ಕಾರ್ಯಕ್ರಮಕ್ಕಾಗಿ ಬೆಂಗಳೂರಿಗೆ ಆಗಮಿಸುವ ಸುಮಾರು 90 ವಿದ್ಯಾರ್ಥಿಗಳಿಗಾಗಿ ಉಚಿತ ಊಟ, ವಸತಿ ಮತ್ತು ಸಭೆಗಳನ್ನು ನಡೆಸಲು ನಗರ ಪಾಲಿಕೆಯ ಐ.ಪಿ.ಪಿ. ಕೇಂದ್ರದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. (ಸಂಬಂಧಪಟ್ಟ ಪ್ರತಿಗಳನ್ನು ಲಗತ್ತಿಸಿದೆ)

ಈ ಸಂಬಂಧ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಬೆಂಗಳೂರು, ರವರು ದಿನಾಂಕ: 30 ಮತ್ತು 31 ಡಿಸೆಂಬರ್ 2010ರಂದು ವಿದ್ಯಾರ್ಥಿಗಳ ಅಂತರಾಜ್ಯ ಜೀವನ ದರ್ಶನ (SIEL) ಕಾರ್ಯಕ್ರಮಕ್ಕಾಗಿ
ಬೆಂಗಳೂರಿಗೆ ಆಗಮಿಸಲಿರುವ ಸುಮಾರು 90 ವಿದ್ಯಾರ್ಥಿಗಳಿಗಾಗಿ ಐ.ಪಿ.ಪಿ. ಕೇಂದ್ರ ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಉಚಿತ ಊಟ, ವಸತಿ ಮತ್ತು ಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 24–12–2010ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರೀ ವ್ಯವಸ್ಥೆ ಮಾಡಲಾಗಿರುವ ವೆಚ್ಚಗಳ ತಖ್ತೆಯನ್ನು ಈ ಸಮಿತಿಯ ಮಾಹಿತಿ ಮತ್ತು ಅನುಮೋದನೆಗೆ ಮಂಡಿಸಲು ಸೂಚಿಸುವಂತೆ ತೀರ್ಮಾನಿಸಿದೆ.**

## ವಿಷಯದ ಸಂಖ್ಯೆ :–ತೆಆಸ್ಥಾಸ/148/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/143/10–11 ದಿನಾಂಕ:11–12–2010ರಲ್ಲಿ ವಿವರಿಸಿರುವಂತೆ, ವಾರ್ಡ್ ನ ಸಂಖ್ಯೆ: 158, ಸ್ವತ್ತಿನ ಸಂಖ್ಯೆ:1/2, 1ನೇ ಮುಖ್ಯ ರಸ್ತೆ, ದೀಪಾಂಜಲಿ ನಗರದಲ್ಲಿನ ಪಾಲಿಕೆಯ ಕಟ್ಟಡವನ್ನು ಗ್ರಂಥಾಲಯಕ್ಕಾಗಿ 1982 ರಿಂದ ಗುತ್ತಿಗೆಗೆ ನೀಡಿರುವುದಾಗಿ ತಿಳಿದುಬಂದಿದ್ದು, ಅವಧಿ ಮುಕ್ತಾಯವಾಗಿರುತ್ತದೆ. ಉಪ ನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ ಪಶ್ಚಿಮರವರು ಈ ಪಾಲಿಕೆ ಕಟ್ಟಡದಲ್ಲಿ 1982 ರಿಂದ ಸಾರ್ವಜನಿಕ ಗ್ರಂಥಾಲಯ ನಡೆಸುತ್ತಿದ್ದು, ಈ ಸುತ್ತಮುತ್ತ ಪ್ರದೇಶದ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸುತ್ತಿದ್ದು, ಗುತ್ತಿಗೆ ಅವಧಿ ಮುಗಿದಿರುವುದರಿಂದ, ಸದರಿ ಬಡಾವಣೆಯಲ್ಲಿ ಯಾವುದೇ ಸರ್ಕಾರಿ ಕಟ್ಟಡ ಹಾಗೂ ಖಾಸಗಿ ಕಟ್ಟಡವಾಗಲೀ ಬಾಡಿಗೆಗೆ ದೊರಕದ ಕಾರಣ, ಮುಂದಿನ 20 ವರ್ಷಗಳ ಅವಧಿಗೆ ನವೀಕರಿಸಬೇಕೆಂದು ಕೋರಿರುತ್ತಾರೆ.

ಸಂಬಂಧಿಸಿದ ವಲಯಾಧಿಕಾರಿಗಳ ವರದಿಯಲ್ಲಿ ಈ ಪಾಲಿಕೆ ಕಟ್ಟಡದ ಅಳತೆ 658 ಚ.ಅಡಿ ಇದ್ದು, ಈ ಹಿಂದೆ ಗುತ್ತಿಗೆ ಹಣ ರೂ.30/– ನಿಗದಿಯಾಗಿದ್ದು, ಇದು ಕರ್ನಾಟಕ ಸರ್ಕಾರದ ಸಂಸ್ಥೆಯಾಗಿರುವುದರಿಂದ, ಈ ಗ್ರಂಥಾಲಯವು ಸಾರ್ವಜನಿಕರಿಗೆ ಬಹಳ ಉಪಯೋಗವಾಗುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ 20 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಇದರಂತೆ, ಈ ಸಾರ್ವಜನಿಕ ಗ್ರಂಥಾಲಯವು ಸಾರ್ವಜನಿಕರ ಜ್ಞಾನಾರ್ಜನೆಗೆ ಉಪಯೋಗವಾಗುವುದರಿಂದ, ಬಾಕಿ ಗುತ್ತಿಗೆ ಹಣ ಪಾವತಿಸಿಕೊಂಡು ಕಾಮಗಾರಿ ಇಲಾಖೆಯವರು ನಿಗದಿಪಡಿಸುವ ಗುತ್ತಿಗೆ ಮೊತ್ತದಂತೆ, ಮುಂದಿನ 20 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆಯೆಂದು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ.(ಕಂ)/ಪಿಆರ್/115/01–02, ದಿನಾಂಕ:01–03–2002ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ.10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಇದು ಕಟ್ಟಡವಾಗಿರುವುದರಿಂದ, ಕಾಮಗಾರಿ ಇಲಾಖೆಯವರ ಮಾರ್ಗಸೂಚಿಯನ್ವಯ ಗುತ್ತಿಗೆ ಹಣವನ್ನು ನಿಗಧಿಪಡಿಸಬೇಕಾಗಿರುತ್ತದೆ.

.....14



ಮೇಲ್ಕಂಡ ಪ್ರಸ್ತಾವನೆಯಂತೆ, ಗುತ್ತಿಗೆ ನವೀಕರಿಸುವ ಈ ಪ್ರಕರಣವನ್ನು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ : 11–12–2010 ಟಿಪ್ಪಣಿಯನ್ನು ಮಾರ್ಪಡಿಸಿ ಪಾಲಿಕೆಯಲ್ಲಿ ನಿರ್ಣಯವಾಗುವ ದಿನಾಂಕದಿಂದ 5ವರ್ಷಗಳಿಗೆ ಗುತ್ತಿಗೆ ಮುಂದುವರೆಸಲು ತೀರ್ಮಾನಿಸಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 28–12–2010ರ ನಿರ್ಣಯ.

**<u>ನಿರ್ಣಯ :– ಆಯುಕ್ತರ ದಿನಾಂಕ 11–12–2010ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 28–12–2010ರ ನಿರ್ಣಯವನ್ನು ಒಪ್ಪಿದೆ.</u>**

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/149/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/133/10–11 ದಿನಾಂಕ:11–12–2010ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:143, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಾವಳ್ಳಿಯಲ್ಲಿರುವ ಪಾಲಿಕೆ ಕಟ್ಟಡದಲ್ಲಿನ 1ನೇ ಅಂತಸ್ತನ್ನು ಸಾರ್ವಜನಿಕರ ಗ್ರಂಥಾಲಯಕ್ಕಾಗಿ 1983 ರಿಂದ 5 ವರ್ಷಗಳ ಅವಧಿಗೆ ಮಾಸಿಕ ಬಾಡಿಗೆ 513/– ರೂ.ಗಳು ಹಣ ನಿಗಧಿಪಡಿಸಿ, ಗುತ್ತಿಗೆಗೆ ನೀಡಲಾಗಿರುತ್ತದೆ. ಈ ಅವಧಿಯು 1988ಕ್ಕೆ ಮುಕ್ತಾಯವಾಗಿರುತ್ತದೆ.

ಸಂಬಂಧಿಸಿದ ವಲಯಾಧಿಕಾರಿಗಳ ವರದಿಯಲ್ಲಿ ಈ ಪಾಲಿಕೆ ಕಟ್ಟಡದ ಅಳತೆ 106 ಚ.ಮೀಟರ್ ಇದ್ದು, ಈ ಹಿಂದೆ ಗುತ್ತಿಗೆ ಹಣ ರೂ.513/– ನಿಗಧಿಯಾಗಿದ್ದು, ಇದು ಕರ್ನಾಟಕ ಸರ್ಕಾರದ ಸಂಸ್ಥೆಯಾಗಿರುವುದರಿಂದ, ಈ ಗ್ರಂಥಾಲಯವು ಸಾರ್ವಜನಿಕರಿಗೆ ಬಹಳ ಉಪಯೋಗವಾಗುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಗುತ್ತಿಗೆ ನವೀಕರಿಸಬಹುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಇದರಂತೆ, ಈ ಸಾರ್ವಜನಿಕ ಗ್ರಂಥಾಲಯವು ಸಾರ್ವಜನಿಕರ ಜ್ಞಾನಾರ್ಜನೆಗೆ ಉಪಯೋಗವಾಗುವುದರಿಂದ, ಬಾಕಿ ಗುತ್ತಿಗೆ ಹಣ ಪಾವತಿಸಿಕೊಂಡು ಕಾಮಗಾರಿ ಇಲಾಖೆಯವರು ನಿಗಧಿಪಡಿಸುವ ಗುತ್ತಿಗೆ ಮೊತ್ತದಂತೆ, ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆಯೆಂದು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ.(ಕಂ)/ಪಿಆರ್/115/01–02, ದಿನಾಂಕ:01–03–2002ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ.10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಇದು ಕಟ್ಟಡವಾಗಿರುವುದರಿಂದ, ಕಾಮಗಾರಿ ಇಲಾಖೆಯವರ ಮಾರ್ಗಸೂಚಿಯನ್ವಯ ಗುತ್ತಿಗೆ ಹಣವನ್ನು ನಿಗಧಿಪಡಿಸಬೇಕಾಗಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯಂತೆ, ಗುತ್ತಿಗೆ ನವೀಕರಿಸುವ ಈ ಪ್ರಕರಣವನ್ನು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ : 11–12–2010ರ ಟಿಪ್ಪಣಿಯನ್ನು ಮಾರ್ಪಡಿಸಿ ಪಾಲಿಕೆಯಲ್ಲಿ ನಿರ್ಣಯವಾಗುವ ದಿನಾಂಕದಿಂದ 5ವರ್ಷಗಳಿಗೆ ಗುತ್ತಿಗೆಯನ್ನು ಮುಂದುವರೆಸಲು ತೀರ್ಮಾನಿಸಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 28–12–2010ರ ನಿರ್ಣಯ

**<u>ನಿರ್ಣಯ :– ಆಯುಕ್ತರ ದಿನಾಂಕ 11–12–2010ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 28–12–2010ರ ನಿರ್ಣಯವನ್ನು ಒಪ್ಪಿದೆ.</u>**

## 07]. ವಿಷಯದ ಸಂಖ್ಯೆ :–ತೆಆಸ್ಥಾಸ/150/2010–11

ಆಯುಕ್ತರ ಟಿಪ್ಪಣಿಯ ದಿನಾಂಕ: 29–10–10ರಲ್ಲಿ ವಿವರಿಸಿರುವಂತೆ ಪಾಲಿಕೆಯ ಜಯನಗರ 9ನೇ ಬಡಾವಣೆಯಲ್ಲಿ ಬರುವ ಮಾರುಕಟ್ಟೆ ಕಟ್ಟಡದ ನೆಲ ಮಹಡಿಯ ಮಳಿಗೆಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ. ತದನಂತರ ಹೊಸದಾಗಿ 1ನೇ ಮಹಡಿಯಲ್ಲಿ ಒಟ್ಟು 11 ಮಳಿಗೆಗಳನ್ನು ನಿರ್ಮಿಸಿದ್ದು, ಈ ಮಳಿಗೆಗಳನ್ನು ಸಹ ಹಂಚಿಕೆ ಮಾಡಬೇಕಾಗಿರುತ್ತದೆ.

.....15



ಆದರೆ ಸದರಿ ಮಳಿಗೆಗಳನ್ನು ಈ ಹಿಂದೆ ಕಟ್ಟಡ ನಿರ್ಮಾಣ ಮಾಡುವಾಗ ಸ್ಥಳದಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ಕಟ್ಟಡ ನಿರ್ಮಿಸಿ ಮಳಿಗೆಯನ್ನು ಕೊಡುವುದಾಗಿ ಭರವಸೆ ನೀಡಿರುವುದಾಗಿ ಪ್ರಸ್ತಾಪಿಸಿ, ಕೆಳಕಂಡ ವ್ಯಾಪಾರಿಗಳಿಗೆ ಮಳಿಗೆಗಳನ್ನು ಹಂಚಿಕೆ ಮಾಡಬೇಕೆಂದು ಸ್ಥಳೀಯ ಶಾಸಕರು ಮತ್ತು ಪಾಲಿಕೆ ಸದಸ್ಯರು ಕೋರಿರುತ್ತಾರೆ.

| | | |
|---|---|---|
| 01. **ಶ್ರೀ: ಮುದ್ದೂರಪ್ಪ** | 02. **ಶ್ರೀಮತಿ. ಲೂದ್ ಮೇರಿ** | 03. **ಶ್ರೀಮತಿ. ಆರ್.ನಂದಿನಿ w/o ರಮೇಶ್** |
| 04. **ಶ್ರೀ: ವಿಶುಕುಮಾರ್ S/o ಕರುಣಾಕರ್** | 05. **ಶ್ರೀ. ಹೆಚ್.ಸಿ. ರಮೇಶ್ S/o ಚಂದ್ರಶೇಖರ್** | 06. **ಶ್ರೀ. ಸುಮಂತ S/o ಕೃಷ್ಣಮೂರ್ತಿ** |
| 07. **ಶ್ರೀಮತಿ.ಶ್ಯಾಮಲw/oಸುದರ್ಶನ್‌ಸಿಂಗ್** | 08. **ಶ್ರೀಮತಿ. ಸುಕನ್ಯಾw/o ಮೋಹನ್ ಕುಮಾರ್** | 09. **ಶ್ರೀಮತಿ. ಲಲಿತ. ಬಿ w/o ವಿಜಯಕುಮಾರ್** |
| 10. **ಶ್ರೀ.ಓಬಲೇಶ್ S/o ಪೆದ್ದನ್ನ** | 11. **ಶ್ರೀಮತಿ.ಕೋಮಲ D/o ಸುಬ್ರಮಣಿ.** | **–––** |

ಆದುದರಿಂದ ಸ್ಥಳೀಯ ಶಾಸಕರು ಮತ್ತು ಪಾಲಿಕೆ ಸದಸ್ಯರವರ ಶಿಫಾರಸ್ಸನ್ನು ಪರಿಗಣಿಸಿ ಮೇಲ್ಕಂಡ 11 ಮಂದಿಗೆ ಜಯನಗರ 9ನೇ ಬಡಾವಣೆ ಮಾರುಕಟ್ಟೆ 1ನೇ ಮಹಡಿಯಲ್ಲಿರುವ ಮಳಿಗೆಗಳನ್ನು ಚದರ ಅಡಿ ಒಂದಕ್ಕೆ ರೂ.15ರಂತೆ ದರ ನಿಗದಿಪಡಿಸಿ ಹಂಚಿಕೆ ಮಾಡುವ ಬಗ್ಗೆ ಮುಂದಿನ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ 29–10–2010 ಟಿಪ್ಪಣಿಯನ್ನು ಒಪ್ಪಿರುವ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ : 07–01–2011ರ ನಿರ್ಣಯ

**ನಿರ್ಣಯ :– ಆಯುಕ್ತರ ದಿನಾಂಕ 29–10–2010ರ ಟಿಪ್ಪಣಿಯನ್ನು ಮಾರ್ಪಡಿಸಿ ಚದರಡಿ ಒಂದಕ್ಕೆ ರೂ: 10–00ರಂತೆ ದರ ನಿಗಧಿಪಡಿಸಿ ಹಾಗೂ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ 07–01–2011ರ ನಿರ್ಣಯವನ್ನು ಒಪ್ಪಿದೆ.**

## 08]. ವಿಷಯದ ಸಂಖ್ಯೆ :–ತೆಆಸ್ಥಾಸ/151/2010–11

ಆಯುಕ್ತರವರ ಟಿಪ್ಪಣಿ ದಿನಾಂಕ: 26–10–2010 ರಲ್ಲಿ ವಿವರಿಸಿರುವಂತೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ರಚಿತವಾಗಿರುವ ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿಯಂತೆ, ಘನತ್ಯಾಜ್ಯ ವಸ್ತುಗಳ ಸುರಕ್ಷಿತ ಮತ್ತು ವೈಜ್ಞಾನಿಕ ವಿಲೇವಾರಿಯು ಆಯಾ ನಗರ ಸಭೆಗಳ/ಪಾಲಿಕೆಗಳ ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಬಿಬಿಎಂಪಿಯು ಘನತ್ಯಾಜ್ಯಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಲು ಯೋಜನೆಗಳನ್ನು ಹಮ್ಮಿಕೊಂಡಿದೆ. ಇದರ ಅಂಗವಾಗಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಛಾ ತೈಲವನ್ನು ತಯಾರಿಸುವ ಪ್ರಸ್ತಾವನೆಯನ್ನು ಪಾಲಿಕೆ ಸಭೆಯ ವಿಷಯ ಸಂಖ್ಯೆ 84/2010–11, ದಿನಾಂಕ : 28–08–2010ರಂದು ಅನುಮೋದನೆ ಗೊಂಡಿರುತ್ತದೆ.

ಸದರಿ ನಿರ್ಣಯದಲ್ಲಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ (ಪ್ಲಾಸ್ಟಿಕ್‌ನ್ನು ತ್ಯಾಜ್ಯದಿಂದ ಬೇರ್ಪಡಿಸಿ) ಕಚ್ಛಾ ತೈಲವನ್ನು ತಯಾರಿಸುವ ತಂತ್ರಜ್ಞಾನವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಒಂದು ಡಿ.ಪಿ.ಆರ್.ನ್ನು ಪಾಲಿಕೆ ಸಭೆಯ ಮುಂದೆ ಮಂಡಿಸಲು ಸೂಚಿಸಿದ್ದು, ಅದರಂತೆ Deltailed Project Report ನ್ನು ಈ ಟಿಪ್ಪಣಿಯೊಂದಿಗೆ ಲಗತ್ತಿಸಿ ಮಂಡಿಸಲಾದ ಆಯುಕ್ತರ ದಿನಾಂಕ 26–10–2010ರ

ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಕಳುಹಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಸಭೆ ದಿನಾಂಕ 07–01–2011ರ ನಿರ್ಣಯ.

ನಿರ್ಣಯ :–ಆಯುಕ್ತರ ದಿನಾಂಕ : 26–10–2010ರ ಟಿಪ್ಪಣಿಯನ್ನು ಒಪ್ಪಿದೆ.

**09]. ವಿಷಯದ ಸಂಖ್ಯೆ :–ತೆಆಸ್ಥಾಸ/152/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಸಿಎಚ್ಒ/ಎಸಿಟಿ/2ಪಿಆರ್/47/2010–11 ದಿನಾಂಕ:15–11–2010ರಲ್ಲಿ ವಿವರಿಸಿರುವಂತೆ, ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳಲ್ಲೊಂದಾದ ಮಹಿಳೆಯರ ಸುಖಕರ ಪ್ರವಸನದ ನಂತರ ಎಲ್ಲಾ ತಾಯಂದರಿಗೆ "ಮಡಿಲು ಕಿಟ್" ನ್ನು ಉಚಿತವಾಗಿ ನೀಡುವ ಕಾರ್ಯಕ್ರಮದಂತೆ 2010–11 ನೇ ಸಾಲಿನಲ್ಲಿ

.....16



ಯೂ ಸಹ 21,000 Post natal ಕಿಟ್‌ಗಳನ್ನು ಖರೀದಿಸಬೇಕೆಂದು ಕೋರಿ ಎಲ್ಲಾ ರೆಫರಲ್ ಆಸ್ಪತ್ರೆಗಳ ಅಧೀಕ್ಷಕ ರುಗಳು ಕೋರಿಕೆ ಪತ್ರ ಸಲ್ಲಿಸಿರುತ್ತಾರೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತರವರ ಬಳಿ ಮತ್ತು ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ರವರ ಬಳಿ ಪೋಸ್ಟ್ ನ್ಯಾಟಲ್ ಕಿಟ್‌ಗಳು ಲಭ್ಯವಿದ್ದು, ಈ ಕೆಳಕಂಡ 12 ಪರಿಕರಗಳುಳ್ಳ ಪೋಸ್ಟ್ ನ್ಯಾಟಲ್ ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.1110/– ದರದಲ್ಲಿ ಮುಂದಿನ 03 ತಿಂಗಳಿಗೆ ಅವಶ್ಯವಿರುವ 7800 Post natal ಕಿಟ್‌ಗಳನ್ನು ರೂ.86,58,000/– ಮೊತ್ತದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತರಿಂದಲೂ, 06 ಸಾಮಗ್ರಿಗಳುಳ್ಳ 7800 ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.140/– ದರದಂತೆ ರೂ.10,92,000/– ಮೊತ್ತದಲ್ಲಿ ಮೆ: ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್‌ರವರಿಂದಲೂ ಖರೀದಿಸಬಹುದಾಗಿರುತ್ತದೆ.

**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಖರೀದಿಸಬೇಕಾದ ಸಾಮಗ್ರಿಗಳ ವಿವರ:**

| Sl.No. | Contents of each Kit | Specification/Size | Qty. in a Kit | Unit Price (Rs.) |
|---|---|---|---|---|
| 01 | Jamkhana | 48'x78" | 01 No. | 206.00 |
| 02 | Checks Bed Sheet | 48'x88" | 01 No. | 82.00 |
| 03 | Woolen Blanket | 60"x90" | 01 No. | 291.00 |
| 04 | Checks Towel | 25"x52" | 02 No. | 55.00 |
| 05 | Printed Bed Sheet for Baby | 24"x24" | 02 No. | 96.00 |
| 06 | Child Juba | -- | 03 No. | 55.00 |
| 07 | Cotton Diaper | -- | 06 No. | 41.00 |
| 08 | Flannel Bed Sheet for Baby | 20"x30" | 01 No. | 55.00 |
| 09 | Abdominal Belt for mother | -- | 01 No. | 55.00 |
| 10 | Rubber Sheet for Baby | 24"x24" | 01 No. | 55.00 |
| 11 | Sweater, Cap & Socks for Baby with Zip | (0-1 Year) | 01 No. | 69.00 |
| 12 | Plastic Bag with zip (ಸುಧಾರಿತ) | 15"x18"x6" | 01 No. | 50.00 |
| | **Total** | | **ಒಟ್ಟು ರೂ.** | **1110.00** |

ಮೇಲಿನ ಸಾಮಗ್ರಿಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಖರೀದಿಸಲು ಕೆ.ಟಿ.ಪಿ.ಪಿ. ಕಾಯ್ದೆ 1999 ಅಧ್ಯಾಯ 1 ಪ್ಯಾರ 4 (೨) ರಿತ್ಯ ವಿನಾಯ್ತಿ ಇರುತ್ತದೆ. (ಪುಟ 11 ಮತ್ತು 12 ರಲ್ಲಿ ಪ್ರತಿ ಲಗತ್ತಿಸಿದೆ.)

ಈ ಕೆಳಕಂಡ 06 ಸಾಮಗ್ರಿಗಳುಳ್ಳ ಪ್ರತಿ ಕಿಟ್‌ಗೆ ರೂ.140/– ಮೊತ್ತದಂತೆ ಒಟ್ಟಾರೆ 7800 ಕಿಟ್‌ಗಳನ್ನು ಒಟ್ಟಾರೆ ರೂ.10,92,000/– ಮೊತ್ತದಲ್ಲಿ ಮೆ: ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಬಹುದಾಗಿರುತ್ತದೆ. ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಇಲಾಖೆ ಕರ್ನಾಟಕ ಸರ್ಕಾರ ರವರು ಆದೇಶ ಸಂಖ್ಯೆ: ಆಆ/ಒಉ/68/2009–10 ದಿನಾಂಕ: 28–07–2010 ರೀತ್ಯ 50,000 ಕಿಟ್‌ಗಳನ್ನು ಖರೀದಿಸಿರುವ ಆದೇಶದ ಪ್ರತಿ ಲಗತ್ತಿಸಿದೆ (ಪುಟ 62)

**ಮೆ: ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಬೇಕಾದ ವಿವರ:**

| Sl. No. | Contents of each Kit | Qty. in a Kit | Unit Price (Rs.) |
|---|---|---|---|
| 01 | Mysore wave Bathing Bar (100 grms.) | 02 | 21.00 |
| 02 | Mysore Detergent Cake (150 grms.) | 04 | 20.00 |
| 03 | Coconut oil (200 ml. with comb) | 01 | 36.00 |
| 04 | Mysore Sandal Baby Soap (75 grms.) | 02 | 40.00 |
| 05 | Mysore Sandal Baby Powder (50 grms.) | 01 | 13.00 |

.....17



| | | | |
|---|---|---|---|
| 06 | Tooth Paste with brush (50 grms.) | 01 | 10.00 |
| | **Total** | | **140.00** |

ಮೇಲ್ಕಂಡ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಮೆ: ಕರ್ನಾಟಕ ಕೈಮಗ್ಗ ನಿಯಮಿತ ರವರಿಂದ 12 ಪರಿಕರಗಳುಳ್ಳ 7800 ಕಿಟ್ ಗಳನ್ನು ರೂ.86,58,000/– (ರೂ.ಎಂಬತ್ತಾರು ಲಕ್ಷ ಐವತೆಂಟು ಸಾವಿರ ಮಾತ್ರ) ಮೊತ್ತದಲ್ಲಿಯೂ 06 ಸಾಮಗ್ರಿಗಳುಳ್ಳ 7800 ಕಿಟ್ ಗಳನ್ನು ಮೆ: ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ರವರಿಂದ ರೂ.10,92,000/– ಮೊತ್ತದಲ್ಲಿಯೂ, ಅಂದರೆ ಒಟ್ಟಾರೆ ರೂ.97,50,000/– ಮೊತ್ತದಲ್ಲಿ ಮೇಲಿನ 02 ಸಂಸ್ಥೆಗಳಿಂದ ಖರೀದಿಸಲಾದ ಸಾಮಗ್ರಿಗಳನ್ನು ಒಟ್ಟುಗೂಡಿಸಿ ಒಂದೇ ಕಿಟ್‌ನಲ್ಲಿ ಸೇರಿಸಿ, ಪ್ರಸವನದ ನಂತರ ಬಾಣಂತಿಯರಿಗೊಂದು ಕಿಟ್‌ನಂತೆ ನೀಡಲಾಗುತ್ತದೆ.

ಮೇಲಿನಂತೆ 7800 ಪೋಸ್ಟ್ ನ್ಯಾಟಲ್ ಕಿಟ್‌ಗಳನ್ನು ಒಟ್ಟಾರೆ ರೂ.97,50,000/– ಮೊತ್ತದಲ್ಲಿ ಪೋಸ್ಟ್ ನ್ಯಾಟಲ್ ಕಿಟ್‌ಗಳ ಖರೀದಿಗಾಗಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ ಖರೀದಿಸುವ ಬಗ್ಗೆ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರ ದಿನಾಂಕ 15–11–2010 ರ ಟಿಪ್ಪಣಿಯನ್ನು ಒಪ್ಪಿರುವ ಆರೋಗ್ಯ ಸ್ಥಾಯಿ ಸಮಿತಿ ಸಭೆ ದಿನಾಂಕ 07–01–2011ರ ನಿರ್ಣಯ

**ನಿರ್ಣಯ :– ಆಯುಕ್ತರ ದಿನಾಂಕ 15–11–2010ರ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ : 07–01–2011ರ ನಿರ್ಣಯವನ್ನು ಒಪ್ಪಿದೆ.**

## 10]. ವಿಷಯದ ಸಂಖ್ಯೆ :–ತೆಆಸ್ಥಾಸ/153/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:21–12–2010ರಲ್ಲಿ ವಿವರಿಸಿರುವಂತೆ, ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಇಂತಹ ಸ್ಥಳಗಳನ್ನು ಗುರುತಿಸಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರ್‌ಗೆ ರೂ.5/– ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ. ಈಗಾಗಲೇ ಸದರಿರವರು ಈ ಘಟಕವನ್ನು ಆಂಧ್ರ ಪ್ರದೇಶದ 290 ಸ್ಥಳಗಳಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಟ 10 ಸಾವಿರ ಮನೆಯುಳ್ಳ 10 ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಟಾನಗೊಳಿಸಿ, 15 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ದ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದ ಮಧ್ಯಭಾಗದಲ್ಲಿ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ವ್ಯವಸ್ಥೆವುಳ್ಳ ಸ್ಥಳವನ್ನು ಮತ್ತು ಸದರಿ ಘಟಕಕ್ಕೆ ವಿದ್ಯುತ್ ಅನ್ನು ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯು ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಪಯುಕ್ತವಾಗಿರುವುದರಿಂದ, ಸದರಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರ ದಿನಾಂಕ 21-12-2010 ರ ಟಿಪ್ಪಣಿಯನ್ನು ಒಪ್ಪಿರುವ ಆರೋಗ್ಯ ಸ್ಥಾಯಿ ಸಮಿತಿ ಸಭೆ ದಿನಾಂಕ 07-01-2011ರ ನಿರ್ಣಯ

**ನಿರ್ಣಯ :- ಆಯುಕ್ತರ ದಿನಾಂಕ 21-12-2010ರ ಟಿಪ್ಪಣಿ ಹಾಗೂ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ : 07-01-2011ರ ನಿರ್ಣಯವನ್ನು ಒಪ್ಪಿದೆ.**

......18



## 11]. ವಿಷಯದ ಸಂಖ್ಯೆ :-ತೆಆಸ್ಥಾಸ/154/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಪಿಎಸ್ಆರ್/ಜಿ/5054/10-11, ದಿನಾಂಕ: 15-11-2010, ವಾರ್ಡ್ ನಂ. 153, ಹೊಂಬೇಗೌಡ ನಗರ, ವಾರ್ಡ್ ನಂ. 50, ವಿ.ವಿ.ಪುರಂ, ವಾರ್ಡ್ ನಂ. 49 ಬಸವನಗುಡಿ, ವಾರ್ಡ್ ನಂ. 154 ಬಸವನಗುಡಿ, ಈ ನಾಲ್ಕು ವಾರ್ಡ್‌ಗಳು ಟ್ಯಾಗೋರ್ ವೃತ್ತಕ್ಕೆ ಹೊಂದಿಕೊಂಡಿದ್ದು, ಟ್ಯಾಗೋರ್ ವೃತ್ತದಲ್ಲಿ ಟ್ಯಾಗೋರ್ ವೃತ್ತದಿಂದ ಎನ್.ಆರ್.ಕಾಲೋನಿ ಕಡೆಗೆ ಮತ್ತು ಟ್ಯಾಗೋರ್ ವೃತ್ತದಿಂದ ನ್ಯಾಷನಲ್ ಕಾಲೇಜ್ ಕಡೆಗೆ ಕೆಳಸೇತುವೆ ಕಾಮಗಾರಿಗೆ ಹೆಚ್ಚುವರಿ ಸ್ಥಳ ಅವಶ್ಯಕತೆ ಇರುವುದು ಕಂಡುಬಂದಿದ್ದು, ಇದಕ್ಕಾಗಿ ರಸ್ತೆಯ ಎರಡೂ ಕಡೆ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ.

ಬಸವನಗುಡಿಯ ಟ್ಯಾಗೋರ್ ವೃತ್ತದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕೆಳಸೇತುವೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಲು ಹೆಚ್ಚುವರಿ ಸ್ಥಳ ಅವಶ್ಯಕತೆ ಇರುವುದು ಕಂಡುಬಂದಿದ್ದು, ಹಾಲಿ ಇರುವ ರಸ್ತೆಯ ಎರಡೂ ಕಡೆ ಅಂದರೆ ಟ್ಯಾಗೋರ್ ವೃತ್ತದಿಂದ ಎನ್.ಆರ್.ಕಾಲೋನಿ ಕಡೆಗೆ ಮತ್ತು ಟ್ಯಾಗೋರ್ ವೃತ್ತದಿಂದ ನ್ಯಾಷನಲ್ ಕಾಲೇಜ್ ಕಡೆಗೆ ಹೋಗುವ ರಸ್ತೆಯ ಎರಡೂ ಕಡೆ ಸರ್ಕಾರಿ/ಖಾಸಗಿ ಸ್ವತ್ತುಗಳನ್ನು ಗುರ್ತಿಸಲಾಗಿರುತ್ತದೆ. ವಾರ್ಡ್ ನಂ. 153, ಹೊಂಬೇಗೌಡ ನಗರ, ವಾರ್ಡ್ ನಂ. 50, ವಿ.ವಿ.ಪುರಂ, ವಾರ್ಡ್ ನಂ. 49 ಬಸವನಗುಡಿ, ವಾರ್ಡ್ ನಂ. 154 ಬಸವನಗುಡಿ, ಈ ನಾಲ್ಕು ವಾರ್ಡ್‌ಗಳು ಟ್ಯಾಗೋರ್ ವೃತ್ತಕ್ಕೆ ಹೊಂದಿಕೊಂಡಿರುತ್ತವೆ. ದಿನಾಂಕ: 04-05-2010ರಂದು ಕಾರ್ಯಪಾಲಕ ಅಭಿಯಂತರರು (ಮೂಲಭೂತ ಸೌಕರ್ಯ) ರವರು ಪ್ರಸ್ತಾವನೆ ಸಲ್ಲಿಸಿ, ಜರೂರಾಗಿ ಸರ್ವೆ ಕಾರ್ಯವನ್ನು ಮುಗಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕೋರಿರುತ್ತಾರೆ. ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ಅಳತೆ ಕಾರ್ಯಗಳನ್ನು ಮುಗಿಸಿ ಸ್ಕೆಚ್‌ಗಳನ್ನು ತಯಾರಿಸಲಾಗಿರುತ್ತದೆ.

ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: ಎಲ್ಎಸಿ/ಸಿಆರ್/22/2008-09, ದಿನಾಂಕ: 14-07-2008ರ ಪ್ರಕಾರ ಒಟ್ಟು 26 ಸ್ವತ್ತುಗಳಲ್ಲಿ 2419.35 ಚ.ಮೀ. ವಿಸ್ತೀರ್ಣ ಅಗತ್ಯವಿದ್ದು, ಇದರಲ್ಲಿ 19 ಖಾಸಗಿ ಸ್ವತ್ತುಗಳು, 7 ಸರ್ಕಾರಿ ಮತ್ತು ಅರೆಸರ್ಕಾರಿ ಸ್ವತ್ತುಗಳು ಸೇರಿರುವುದಾಗಿ ಪ್ರಸ್ತಾಪಿಸಿರುತ್ತಾರೆ.

6 ಸರ್ಕಾರಿ ಸ್ವತ್ತುಗಳಿಗೆ ಭೂಸ್ವಾಧೀನತೆ ಪರಿಹಾರ ನಿಗದಿಪಡಿಸಿರುವುದಿಲ್ಲ. ಈ ಪೈಕಿ 4 ಸ್ವತ್ತುಗಳು ಪಾಲಿಕೆಯ ಪಾರ್ಕ್ ಸ್ವತ್ತುಗಳಾಗಿದ್ದು, ಇನ್ನುಳಿದ 2 ಸ್ವತ್ತುಗಳಲ್ಲಿ ಒಂದು ಕೇಂದ್ರ ಸರ್ಕಾರದ ಅಂಚೆ ಕಛೇರಿಗೆ ನೀಡಿದ್ದು, ಇದನ್ನು ಬಿ.ಡಿ.ಎ.ಯಿಂದ ಗುತ್ತಿಗೆ ನೀಡಿರುವ ಸಾಧ್ಯತೆ ಇದ್ದು, ಬಿ.ಡಿ.ಎ.ಗೆ ಪತ್ರ ಬರೆದು ಖಚಿತಪಡಿಸಿಕೊಂಡ ನಂತರ ಪರಿಶೀಲಿಸಿ, ನಿವೇಶನವನ್ನು ಉಚಿತವಾಗಿ ಹಸ್ತಾಂತರಿಸಲು ಕೋರಬೇಕಾಗುತ್ತದೆ. ಇನ್ನೊಂದು ಸ್ವತ್ತು ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಿದ್ದು, ಇದೂ ಸಹ ಪಾರ್ಕ್ ಜಾಗದಲ್ಲಿದ್ದು, ಪಾಲಿಕೆಗೆ ಸೇರಿದ ಸ್ವತ್ತಾಗಿರುತ್ತದೆ. ಇವುಗಳಿಗೆ ಪರಿಹಾರವನ್ನು ಪ್ರಸ್ತಾಪಿಸಿರುವುದಿಲ್ಲ. ಹಾಗೂ ಸಿ.ಟಿ.ಎಸ್. ನಂ. 719, 720, 722/2, 722/3, 266, 265, 263, 262, 1739, 1740, 264 ಹಾಗೂ ಇತರೇ ಸ್ವತ್ತುಗಳಲ್ಲಿನ ಕಾಂಪೌಂಡ್ ಗೋಡೆಯನ್ನು ಪಾಲಿಕೆಯಿಂದಲೇ ನಿರ್ಮಿಸಲು ಅಂದಾಜಿನಲ್ಲಿ ಅಳವಡಿಸಿಕೊಂಡಿರುವುದರ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಮುಲಭೂತ ಸೌಕರ್ಯ ರವರು ಕಂಡಿಕೆ– 24 ರಲ್ಲಿ ತಿಳಿಸಿರುವಂತೆ ಇವುಗಳ ಮೌಲ್ಯವನ್ನು ಸಹ ಹೊರತುಪಡಿಸಿ, ಭೂಸ್ವಾಧೀನ ಪರಿಹಾರ ಬಾಬ್ತು ಲೆಕ್ಕಾಚಾರ ತಃಖ್ತೆ ತಯಾರಿಸಿದೆ.

ಪುನಃ ದಿನಾಂಕ: 23–08–2010 ರಂದು ಮುಖ್ಯ ಅಭಿಯಂತರರು (ಮೂಲಭೂತ ಸೌಕರ್ಯ), ಬಿ.ಬಿ.ಎಂ.ಪಿ.ರವರು ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಬಗ್ಗೆ ದಿನಾಂಕ: 25–08–2010ರಂದು ವಿಶೇಷ ಭೂಸ್ವಾಧೀನಾಧಿಕಾರಿಯವರು ಹಾಗೂ ದಿನಾಂಕ: 23–08–2010ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಸ್ಥಳ ತನಿಖೆ ಮಾಡಿರುತ್ತಾರೆ.

ಈ ಕೆಳಕಂಡ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ತುಂಬಾ ಅನುಕೂಲವಾಗುತ್ತದೆ ಎಂಬ ಅಂಶವು ಮುಖ್ಯ ಅಭಿಯಂತರರು (ಮೂಲಭೂತ ಸೌಕರ್ಯ), ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಉಪ ಆಯುಕ್ತರು (ಭೂಸ್ವಾಧೀನ) ರವರ ಗಮನಕ್ಕೆ ಬಂದಿದ್ದು, ಭೂಸ್ವಾಧೀನ ಪಡಿಸಿಕೊಳ್ಳಬೇಕಾದ ಸ್ವತ್ತಿನ ವಿವರಗಳು ಹಾಗೂ ವಿಸ್ತೀರ್ಣ ಭೂಮಾಪಕರ ಅಳತೆಯಂತೆ ಈ ಕೆಳಕಂಡಂತೆ ಇರುತ್ತದೆ.

......19



## 1. ಖಾಸಗಿ ಸ್ವತ್ತುಗಳು

| ಕ್ರ. ಸಂ | ವಾರ್ಡ್ ಸಂಖ್ಯೆ, ನಿವೇಶನ ಸಂಖ್ಯೆ ಮತ್ತು ಖಾತೆ ಸಂಖ್ಯೆ | | | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆಯ ಹೆಸರು | ಭೂಸ್ವಾಧೀನಪಡಿಸಿ ಕೊಳ್ಳುವ ವಿಸ್ತೀರ್ಣ (ಚ.ಮೀ.ಗಳಲ್ಲಿ) ಭೂಮಾಪಕರ ಅಳತೆಯಂತೆ | ಷರಾ |
|---|---|---|---|---|---|---|---|
| | *ವಾರ್ಡ್ ಸಂಖ್ಯೆ* | ಸಿ.ಟಿ.ಎಸ್ ನಂ. | ಖಾತಾ ನಂ. | | | | |
| 1 | 154 | 724ರ ಪೈಕಿ | 52/1 | ಮೆ॥ವಿದ್ಯಾ ಎಂಟರ್‌ಪ್ರೈಸಸ್ ಪಾಲುದಾರರಾದ ಪಿ.ಪ್ರಭುರಾಜು ಮತ್ತು ಇತರೆ ಮೂರು ಜನ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 6.63 | ಖಾಸಗಿ ಸ್ವತ್ತು |
| 2 | 154 | 722ರ ಪೈಕಿ | 55 | ಜಿ.ಎನ್.ಪ್ರಭಾಕರ ರಾವ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 19.95 | ಖಾಸಗಿ ಸ್ವತ್ತು |
| 3 | 154 | 722ರ ಪೈಕಿ | 54 | ಡಾ॥ಬಿ.ಎಂ.ಗಿರೀಶ್ ಡಾ॥ಜಿ.ಎಸ್.ಅರ್ಚನ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 14.05 | ಖಾಸಗಿ ಸ್ವತ್ತು |

| | | | | | | | |
|---|---|---|---|---|---|---|---|
| 4 | 154 | 722ರ ಪೈಕಿ | 54/3 | ಜೆ.ಎನ್.ದಯಾಕರರಾವ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 15.45 | ಖಾಸಗಿ ಸ್ವತ್ತು |
| 5 | 154 | 721ರ ಪೈಕಿ | 56 57 58 | ಎನ್.ರಘುನಂದನ್ ಕೋಡೆಕೃಷ್ಣಸ್ವಾಮಿಷಾ ಮೈಥಿಲಿ ರಾಮಸ್ವಾಮಿ ಮತ್ತು ಇತರರು | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 51.75 | ಖಾಸಗಿ ಸ್ವತ್ತು |
| 6 | 154 | 720 | 59 | ಇ.ಗಿರಿಜಾ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 16.60 | ಖಾಸಗಿ ಸ್ವತ್ತು |
| 7 | 154 | 719ರ ಪೈಕಿ | 59/5 | ಆರ್.ಪ್ರವೀಣ್‌ಚಂದ್ರ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 7.78 | ಖಾಸಗಿ ಸ್ವತ್ತು |
| 8 | 154 | 719ರ ಪೈಕಿ | 59/1 | ಆರ್.ವಿಜಯಶಾಲಿನಿ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 16.60 | ಖಾಸಗಿ ಸ್ವತ್ತು |
| 9 | 49/72 | 265 | ಪಿ.ಐ.ಡಿ. ನಂ.49/72/60 | ಬಸವನಗುಡಿ ಯೂನಿಯನ್ ಸರ್ವೀಸ್‌ಕ್ಲಬ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 16.48 | ಖಾಸಗಿ ಸ್ವತ್ತು |
| 10 | 49/72 | 264ರ ಪೈಕಿ | ಪಿ.ಐ.ಡಿ. ನಂ. 49–72–61 | ಡಾ॥ನಿರಂಜನ್.ವಿ.ರಾವ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 5.52 | ಖಾಸಗಿ ಸ್ವತ್ತು |
| 11 | 49/72 | 263 ರ ಪೈಕಿ | ಪಿ.ಐ.ಡಿ. ನಂ. 49–72–64/1 | ನಾಗಲಕ್ಷ್ಮಿಸತ್ಯನ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 2.30 | ಖಾಸಗಿ ಸ್ವತ್ತು |

.....20



| | | | | | | | |
|---|---|---|---|---|---|---|---|
| 12 | 49/72 | 263 ರ ಪೈಕಿ | ಪಿ.ಐ.ಡಿ. ನಂ. 49–72–64 | ಆರ್.ವಾಣಿಜಲ್ಲಾವಲ್ಲಿ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 0.75 | ಖಾಸಗಿ ಸ್ವತ್ತು |
| 13 | 49/72 | 263 ರ ಪೈಕಿ | 49–72–63/1 | ಭೀಮಾವಿಜಯರಾಘವನ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 4.41 | ಖಾಸಗಿ ಸ್ವತ್ತು |
| 14 | 49/72 | 262 ರ ಪೈಕಿ | ಪಿ.ಐ.ಡಿ. ನಂ. 49–72–65/1ರಿಂದ 65/9 | ಆರ್.ಸುಧೀಂದ್ರರಾವ್ ಇತರೆ 8 ಜನ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 5.43 | ಖಾಸಗಿ ಸ್ವತ್ತು |
| 15 | 50 | 1712ರ | 11/1 | ಕೆ.ವಿ.ಸತ್ಯಮೂರ್ತಿ | ವಿ.ವಿ.ಪುರಂ | 20.55 | ಖಾಸಗಿ ಸ್ವತ್ತು |

| | | | | | | | |
|---|---|---|---|---|---|---|---|
| | | ಪೈಕಿ | | | | | |
| 16 | 50 | 1712ರ ಪೈಕಿ | 11/2 | ಕೆ.ವಿ.ಪ್ರಫುಲ್ಲಾ ಚಂದ್ರಗುಪ್ತ ಮತ್ತು ಕೆ.ವಿ.ರಾಧಾಕೃಷ್ಣ | ವಿ.ವಿ.ಪುರಂ | 36.00 | ಖಾಸಗಿ ಸ್ವತ್ತು |
| 17 | 50 | 1739ರ ಪೈಕಿ | 9,9/1 ರಿಂದ 9/11 | ರಮೇಶ್,ಆರ್.ರಮಣಿ, ಆರ್.ವಿಮಲ,ಮತ್ತು ಇತರೆ 11 ಜನ | ವಿ.ವಿ.ಪುರಂ | 79.80 | ಖಾಸಗಿ ಸ್ವತ್ತು |
| 18 | 50 | 1740ರ ಪೈಕಿ | 8 | ಸಿ.ಕೆ.ಲಕ್ಷ್ಮಿ ನರಸಮ್ಮ | ವಿ.ವಿ.ಪುರಂ | 12.00 | ಖಾಸಗಿ ಸ್ವತ್ತು, 2 ಮರಗಳು ಇವೆ. |
| 19 | 153 (50) | 1678ರ ಪೈಕಿ | 1 | ಇ.ಡಬ್ಲ್ಯೂ.ಟೀಸ್‌ಬ್ರೇಕರ | ಹೊಂಬೇಗೌಡ ನಗರ | 101.76 | ಖಾಸಗಿ ಸ್ವತ್ತು, |
| 20 | 153 (50) | 1678ರ ಪೈಕಿ | 1/1 | ಪ್ರಾಂಶುಪಾಲರು, ಈಸ್ಟ್‌ವೆಸ್ಟ್‌ಎಜುಕೇಷನ್ ಟ್ರಸ್ಟ್ | ಹೊಂಬೇಗೌಡ ನಗರ, ಬಿ.ವಿ.ವಾಡಿಯಾರ್ ರಸ್ತೆ | 55.56 | ಖಾಸಗಿ ಸ್ವತ್ತು 6 ಮರಗಳು ಇವೆ. ಶೌಚಾಲಯ ಕಟ್ಟಡ ಇದ್ದು, ಇದರ ವಿಸ್ತೀರ್ಣ 36.72 ಚ.ಮೀ. |
| 21 | 153 (50) | 1678ರ ಪೈಕಿ | 1/1 | ಪ್ರಾಂಶುಪಾಲರು, ಈಸ್ಟ್‌ವೆಸ್ಟ್‌ಎಜುಕೇಷನ್ ಟ್ರಸ್ಟ್ | ಹೊಂಬೇಗೌಡ ನಗರ | 153.00 | ಖಾಸಗಿಸ್ವತ್ತು ಮಂಗಳೂರು ಟೈಲ್ಸ್‌ಬಿಲ್ಡಿಂಗ್ 2 ಮತ್ತು ಆರ್.ಸಿ.ಸಿ.ಮಳಿಗೆಗಳು ಇವೆ.ಇವುಗಳ ವಿಸ್ತೀರ್ಣ 1).81-00 ಚ.ಮೀ. 2).95-94 ಚ.ಮೀ. 3).81-60 ಚ.ಮೀ |

.....21



## 2. ಸರ್ಕಾರಿ ಸ್ವತ್ತುಗಳು

| ಕ್ರ. ಸಂ. | ವಾರ್ಡ್ ಸಂಖ್ಯೆ, ನಿವೇಶನ ಸಂಖ್ಯೆ ಮತ್ತು ಖಾತೆ ಸಂಖ್ಯೆ | | | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆಯ ಹೆಸರು | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ (ಚ.ಮೀ.ಗಳಲ್ಲಿ) | ಷರಾ |
|---|---|---|---|---|---|---|---|
| | ವಾರ್ಡ್ ಸಂಖ್ಯೆ | ಸಿ.ಟಿ.ಎಸ್.ನಂ. | ಖಾತಾ ನಂ. | | | | |
| 1 | 154 | 723 ರ ಪೈಕಿ | - | ಕಾರ್ಪೋರೇಷನ್ ಪಾರ್ಕ್ (ಬಿ.ಬಿ.ಎಂ.ಪಿ) | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 3.90 ಚ.ಮೀ. | ಬಿ.ಬಿ.ಎಂ.ಪಿ. |

| | | | | | | | |
|---|---|---|---|---|---|---|---|
| 2 | 154 | 266 ರ ಪೈಕಿ | – | ಟ್ಯಾಗೋರ್ ಸರ್ಕಲ್ ಪಾರ್ಕ್ (ಬಿ.ಬಿ.ಎಂ.ಪಿ) | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 11.00 | ಬಿ.ಬಿ.ಎಂ.ಪಿ. |
| 3 | 50 | 1693 ರ ಪೈಕಿ | 34–12 | ಹಿರಿಯ ಅಧೀಕ್ಷಕರು ಅಂಚೆ ಕಛೇರಿ (ಕೆ.ಆರ್.ರೋಡ್) | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ, ಕೆಂಪೇಗೌಡ ನಗರ ವಲಯ | 137.85 | ಕೇಂದ್ರ ಸರ್ಕಾರ |
| 4 | 154 | 1677 ರ ಪೈಕಿ | – | ಸರ್ಕಾರಿ ಬಾಲಕಿಯರ ಪ್ರೌಢಶಾಲೆ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 504.92 | ರಾಜ್ಯ ಸರ್ಕಾರ |
| 5 | 154 | 1673 ರ ಪೈಕಿ | | ಎಂ.ಎನ್.ಕೃಷ್ಣರಾವ್‌ಪಾರ್ಕ್ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 829.33 | ಬಿ.ಬಿ.ಎಂ.ಪಿ. |
| 6 | 154 | 1676 ರ ಪೈಕಿ | | ಎಂ.ಎನ್.ಕೃಷ್ಣರಾವ್‌ಪಾರ್ಕ್ ಮತ್ತು ಬಸವನಗುಡಿ ಆರಕ್ಷಕ ಠಾಣೆ | ಬಸವನಗುಡಿ ವಾರ್ಡ್, ಕೆ.ಆರ್.ರಸ್ತೆ | 268.32 | ಬಿ.ಬಿ.ಎಂ.ಪಿ. |

**ಘೋಷ್ವಾರೆ**

| | | **ಸಂಖ್ಯೆ** | **ವಿಸ್ತೀರ್ಣ (ಚ.ಮೀ.ಗಳಲ್ಲಿ)** |
|---|---|---|---|
| 1 | ಖಾಸಗಿ ಸ್ವತ್ತುಗಳು | 21 | 642.37 |
| 2 | ಸರ್ಕಾರಿ ಸ್ವತ್ತುಗಳು | 06 | 1,755.32 |
| **ಒಟ್ಟು** | | **27** | **2,397.69** |

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯಮಾಪನ ಸಮಿತಿ, ಬೆಂಗಳೂರು ನಗರ ಜಿಲ್ಲೆ, ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006–07, ದಿನಾಂಕ: 17–04–2007ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ ಈ ಪ್ರಕರಣದ ಸ್ವತ್ತುಗಳಿಗೆ ಭೂಪರಿಹಾರವನ್ನು ಹಾಗೂ ಕಟ್ಟಡದ ಮೌಲ್ಯವನ್ನು ಸೇರಿಸಿ ಒಟ್ಟು **ರೂ. 4,98,81,209.00**





**(ನಾಲ್ಕು ಕೋಟಿ ತೊಂಭತ್ತೆಂಟು ಲಕ್ಷ ಎಂಭತ್ತೊಂದು ಸಾವಿರದ ಇನ್ನೂರ ಒಂಭತ್ತು ರೂ.ಗಳು ಮಾತ್ರ)** ಪಾವತಿಸುವ ಮೂಲಕ ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

## 'ಅ' ನಿವೇಶನ ಮೌಲ್ಯ

1. ನಿವೇಶನ ದರ ಚ.ಅ.ಒಂದಕ್ಕೆ ಮಾರ್ಗಸೂಚಿ ಬೆಲೆ ರೂ. 4,500/–ಗಳಂತೆ (ಚ.ಮೀ.ಒಂದಕ್ಕೆ ರೂ.4,500X10.76ಚ.ಮೀ= 48420/– ರೂ) ಗಳಂತೆ 642.37 ಚ.ಮೀ.ಗಳ ಮೌಲ್ಯ ರೂ.ಗಳು

| | | |
|---|---|---|
| | (ಖಾಸಗಿ ಸ್ವತ್ತುಗಳಿಗೆ ಮಾತ್ರ) | 3,11,03,555.40 |
| 2. | 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(1)ಎರ ಅನ್ವಯ ಮಾರುಕಟ್ಟೆ ಬೆಲೆಯ ಮೇಲೆ ರೂ. ಶೇ.12ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ ಒಂದು ವರ್ಷಕ್ಕೆ | 37,32,426.64 |
| 3. | 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2)ರ ಅನ್ವಯ ಶಾಸನಬದ್ದ ಭತ್ಯೆ ರೂ. ಶೇ.30ರಂತೆ | 93,31,066.62 |
| | **ನಿವೇಶನದ ಒಟ್ಟು ಮೌಲ್ಯ** | **4,41,67,048.66** |

## 'ಆ' ಕಟ್ಟಡಗಳ ಮೌಲ್ಯ

| | | |
|---|---|---|
| 4(1). | ಸಿ.ಟಿ.ಎಸ್.ನಂ. 1,678 (ಈಸ್ಟ್‌ವೆಸ್ಟ್ ವಿದ್ಯಾಸಂಸ್ಥೆ) ರಲ್ಲಿ ಕಂಡ ಶೌಚಾಲಯ ವಿಸ್ತೀರ್ಣ36.72 ಚ.ಮೀ.ಮೌಲ್ಯ ರೂ. | 1,07,615.00 |
| 4(2). | ಸಿ.ಟಿ.ಎಸ್.ನಂ.1,678(ಈಸ್ಟ್‌ವೆಸ್ಟ್ ವಿದ್ಯಾಸಂಸ್ಥೆ) ರಲ್ಲಿ ಕಂಡ ಎರಡು ಮಂಗಳೂರು ಟೈಲ್ಸ್ ಬಿಲ್ಡಿಂಗ್‌ಗಳು ಹಾಗೂ ಆರ್.ಸಿ.ಸಿ. ಮಳಿಗೆಗಳಿದ್ದು, ಇವುಗಳ ವಿಸ್ತೀರ್ಣ | |
| | I). 81.00 ಚ.ಮೀ. ಮೌಲ್ಯ | 23,145.00 |
| | II). 95.94 ಚ.ಮೀ. ಮೌಲ್ಯ | 2,81,172.00 |
| | III). 81.60 ಚ.ಮೀ. ಮೌಲ್ಯ | 3,75,799.00 |
| | ಒಟ್ಟು 295.26 ಚ.ಮೀ. ಜುಮ್ಲಾ ಮೌಲ್ಯ | **7,87,731.00** |
| 4(3). | ಕಟ್ಟಡದ ಮೌಲ್ಯ ಸವಕಳಿ (Depreciation) ಶೇ. 25 ರಂತೆ | (–) 1,96,932.00 |
| | **ನಿವ್ವಳ ಮೌಲ್ಯ** | **5,90,799.00** |

**(ಅ+ಆ) = ರೂ. 4,47,57,847.00**

## 'ಇ'

| | | |
|---|---|---|
| 1. | ಶೇ. 10 ರಂತೆ ಆಡಳಿತ ವೆಚ್ಚ | 44,75,784.00 |
| 2. | ಶೇ. 1 ರಷ್ಟು ಆಡಿಟ್ ವೆಚ್ಚ | 4,47,578.00 |
| 3. | ಪ್ರಕಟಣಾ ವೆಚ್ಚ | 2,00,000.00 |
| | **ಒಟ್ಟು** | **51,23,362.00** |
| | **ಒಟ್ಟು ಮೌಲ್ಯ (ಅ+ಆ+ಇ)** | **4,98,81,209.00** |

.......23



**(ನಾಲ್ಕು ಕೋಟಿ ತೊಂಭತ್ತೆಂಟು ಲಕ್ಷ ಎಂಭತ್ತೊಂದು ಸಾವಿರದ ಇನ್ನೂರ ಒಂಭತ್ತು ರೂ.ಗಳು ಮಾತ್ರ)**

ಈ ಸ್ವತ್ತುಗಳನ್ನು ಪ್ರಸ್ತಾಪಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಡಲಾಗಿದೆ. ಆದ್ದರಿಂದ ಮೇಲ್ಕಂಡ ವೆಚ್ಚವನ್ನು ಭರಿಸಿ 1894ರ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮತ್ತು ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆ ಕೋರಲು

ಹಾಗೂ ಇದಕ್ಕೆ ತಗಲುವ ವೆಚ್ಚ ಸುಮಾರು **ರೂ. 4,98,81,209.00 (ನಾಲ್ಕು ಕೋಟಿ ತೊಂಭತ್ತೆಂಟು ಲಕ್ಷ ಎಂಭತ್ತೊಂದು ಸಾವಿರದ ಇನ್ನೂರ ಒಂಭತ್ತು ರೂ.ಗಳು ಮಾತ್ರ)** ಗಳನ್ನು ಪಾಲಿಕೆಯ 2010–11ನೇ ಸಾಲಿನ ಆಯವ್ಯಯದಿಂದ ಭರಿಸಲು ಅನುಮೋದನೆಗಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 15–11–2010ರ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011ರ ನಿರ್ಣಯ

**ನಿರ್ಣಯ :– ಆಯುಕ್ತರ ದಿನಾಂಕ 15–11–2010ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃಧ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011ರ ನಿರ್ಣಯವನ್ನು ಒಪ್ಪಿದೆ.**

## 12]. ವಿಷಯದ ಸಂಖ್ಯೆ :–ತೆಲಿಸ್ಥಾಸ/155/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಸ.ಆ/ಟಿ.ಡಿ.ಆರ್/192/10–11, ದಿನಾಂಕ: 15/11/2010 ರಲ್ಲಿ ವಿವರಿಸಿರುವಂತೆ ಬನಶಂಕರಿ 2ನೇ ಹಂತದ ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕೆ ಕರೀಸಂದ್ರ (ಭವಾನಿನಗರ ಸ್ಲಂ) ಕದಿರೇನಹಳ್ಳಿ ಮತ್ತು ಜರಗನಹಳ್ಳಿ ಗ್ರಾಮಗಳ ಹಲವು ಸ್ವತ್ತುಗಳು ಸ್ವತ್ತು/ಆಸ್ತಿಗಳು ಒಳಪಟ್ಟಿದ್ದು, ಕರೀಸಂದ್ರ (ಭವಾನಿನಗರ ಸ್ಲಂ) ಕದಿರೇನಹಳ್ಳಿ ಗ್ರಾಮಗಳ ಕೊಳಚೆ ಪ್ರದೇಶ (ಸ್ಲಂ) ರಲ್ಲಿ ಕಳೆದ ಸುಮಾರು 10–15 ವರ್ಷಗಳಿಂದ ತಾತ್ಕಾಲಿಕ ಶೆಡ್/ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕಡುಬಡವರಿಗೆ, ಹಿಂದುಳಿದ ಪಂಗಡದ, ಪರಿಶಿಷ್ಟ ವರ್ಗದವರಿಗೆ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರಿಗೆ ಸಕ್ರಮಗೊಳಿಸಿ, ಬಿ.ಡಿ.ಎ. ವತಿಯಿಂದ ನಿವೇಶನ ಮಂಜೂರಾದಂತೆ ಹಲವರು ಹಕ್ಕುಪತ್ರಗಳನ್ನು ಪಡೆದು ಹಾಗೂ ಕಂದಾಯ ಇಲಾಖೆಯಿಂದ ಹಕ್ಕುಪತ್ರಗಳನ್ನು ಪಡೆದು ಮತ್ತು ರೆವಿನ್ಯೂ ನಿವೇಶನಗಳನ್ನು ಕ್ರಯಕ್ಕೆ ಪಡೆದು, ಪಾಲಿಕೆಯಲ್ಲಿ ಖಾತಾನೊಂದಾಯಿಸಿಕೊಂಡಿರುತ್ತಾರೆ. ಇನ್ನೂ ಹಲವರು ಬಿ.ಡಿ.ಎ. ಯಿಂದ ಸ್ವಾಧೀನ ಪತ್ರ ಹೊಂದಿದ್ದು, ಕೆಲವರು ಯಾವುದೇ ದಾಖಲೆಗಳನ್ನು ಪಡೆಯದೆ ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾರೆ.

ಕೆಳಸೇತುವೆ ನಿರ್ಮಾಣ ಕಾಮಗಾರಿ ಕಳೆದ ಸುಮಾರು 2 ವರ್ಷಗಳಿಂದ ನಡೆಯುತ್ತಿದ್ದು, ಶೇ. 70 ರಿಂದ 80 ರಷ್ಟು ಕಾಮಗಾರಿಯಾಗಿದ್ದು, ಕೆಲಸ ಪ್ರಗತಿಯಲ್ಲಿದ್ದು, ಜಂಕ್ಷನ್ ಬಳಿ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿ ರಸ್ತೆ ಅಗಲೀಕರಣಕ್ಕಾಗಿ ಒಳಪಡುವ ಸ್ವತ್ತುಗಳನ್ನು ಟಿ.ಡಿ.ಆರ್. ಯೋಜನೆಯಡಿ ಸ್ವಾಧೀನಪಡಿಸಿಕೊಳ್ಳಲು ಕಡತಗಳನ್ನು ತಯಾರಿಸಿ ಕ್ರಮ ವಹಿಸಲಾಗಿರುತ್ತದೆ. ಸ್ವತ್ತುಗಳ ಮಾಲೀಕರಾದ ಶ್ರೀ ವೆಂಕಟಾದ್ರಿ, ಶ್ರೀ ಕೆ.ಗೋವಿಂದನಾಯ್ಡು, ಸಿ.ಎಲ್. ನರಸಿಂಹಮೂರ್ತಿ, ಶ್ರೀಮತಿ ಶಮಾದೇವಿ, ಶ್ರೀ ಅಮೀರ್‌ಜಾನ್ ರವರ ಸ್ವತ್ತುಗಳನ್ನು ಹಕ್ಕುಬಿಡುಗಡೆ ಪತ್ರದ ಮೂಲಕ ಪಾಲಿಕೆಗೆ ನೊಂದಾಯಿಸಿಕೊಂಡು, ಡಿ.ಆರ್.ಸಿ. ನೀಡಿದ್ದು, ಟಿ.ಡಿ.ಆರ್. ಬೈ–ಬ್ಯಾಕ್ ಯೋಜನೆಯಡಿ ಟ್ರಾನ್ಸ್‌ಫರ್ ಡೀಡ್ ಅನ್ನು ಪಾಲಿಕೆಗೆ ನೊಂದಾಯಿಸಿಕೊಂಡು, ಸರ್ಕಾರದ ಮಾರ್ಗಸೂಚಿ ದರದಂತೆ ಪರಿಹಾರ ಪಾವತಿ ನಂತರ ಭೌತಿಕ ಸ್ವಾಧೀನತೆಯನ್ನು ಪಡೆದು ಕಟ್ಟಡ ತೆರವುಗೊಳಿಸಲಾಗಿರುತ್ತದೆ. ಐದು ಜನರ ಪೈಕಿ ಶ್ರೀ ವೆಂಕಟಾದ್ರಿಯವರು ಮಾತ್ರ ತಹಲ್‌ವರೆವಿಗೆ ಆಸ್ತಿ ತೆರಿಗೆ ಪಾವತಿ ಮಡಿದ್ದು, ಶ್ರೀ ಸಿ.ಎಲ್.ನರಸಿಂಹಮೂರ್ತಿ, ಶ್ರೀ ಗೋವಿಂದನಾಯ್ಡು, ಶ್ರೀ. ಅಮೀರ್‌ಜಾನ್, ಶ್ರೀಮತಿ ಶಮಾದೇವಿ ಯವರ ಪ್ರಕರಣಗಳಲ್ಲಿ 3 ವರ್ಷಗಳ ಆಸ್ತಿ ತೆರಿಗೆ ವಿನಾಯ್ತಿ ಬಗ್ಗೆ ಶ್ರೀ ಸಿ.ಎಲ್.ನರಸಿಂಹಮೂರ್ತಿ ಯವರ ಪ್ರಕರಣದ ಕಡತದಲ್ಲಿ ಆದೇಶ ಪಡೆಯಲಾಗಿದೆ.

ಈ ವಿಷಯದ ಬಗ್ಗೆ ಮುಕ್ತ ಚರ್ಚೆಗಾಗಿ ಸ್ವತ್ತುಗಳ ಮಾಲೀಕರನ್ನು ಪಾಲಿಕೆಯ ವಾರ್ಡ್‌ನ ಸದಸ್ಯರುಗಳನ್ನು ಹಾಗೂ ಸಂಬಂಧಪಟ್ಟ ಅಧಿಕಾರಿಗಳವರನ್ನು ದಕ್ಷಿಣ ವಲಯ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 06–05–2010 ರಂದು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಕರೆಯಲಾಗಿದ್ದು, ಎಲ್ಲರು ಹಾಜರಿದ್ದು, ಚರ್ಚೆ ಮಾಡಲಾಗಿ ಸ್ವಾಧೀನತೆಗೆ ಒಳಪಡುವ

.....24

ಸ್ವತ್ತುಗಳ ಮಾಲೀಕರು ನಾವುಗಳು ಬಡವರಾಗಿದ್ದು, ಆರ್ಥಿಕವಾಗಿ ದುರ್ಬಲರಾಗಿದ್ದು, ಜೀವನ ನಡೆಸುವುದೇ ತುಂಬಾ ಕಷ್ಟಕರವಾಗಿದ್ದು, ಸುಮಾರು 3 ರಿಂದ 5 ವರ್ಷಗಳ ಕಾಲದ ಆಸ್ತಿ ತೆರಿಗೆಯನ್ನು ಪಾವತಿ ಮಾಡಲು ಸಹ ಸಾಧ್ಯವಾಗಿರುವುದಿಲ್ಲ. ವಶಪಡಿಸಿಕೊಳ್ಳಲಾಗುವ ಸ್ವತ್ತುಗಳ ಮಾಲೀಕರಿಗೆ ಪರ್ಯಾಯವಾಗಿ ನಿವೇಶನ/ವಸತಿ ಸೌಕರ್ಯ ಕಲ್ಪಿಸಿಕೊಡಬೇಕೆಂಬ ಹಾಗೂ ಈಗ ನೀಡಲಾಗುತ್ತಿರುವ ಸರ್ಕಾರದ ಮಾರ್ಗಸೂಚಿ ದರವು ತುಂಬಾ ಕಡಿಮೆ ಇದ್ದು, ಪರಿಹಾರದ ಮೊತ್ತವನ್ನು ಹೆಚ್ಚುವರಿ ಮಾಡಬೇಕೆಂದು ಕಾಮಗಾರಿಗೆ ಒಳಪಡುವ ಸ್ವತ್ತುಗಳನ್ನು ಪಾಲಿಕೆಗೆ ಬಿಟ್ಟುಕೊಡುವ ಅನಿವಾರ್ಯತೆ ಇರುವುದರಿಂದ ಸ್ವತ್ತುಗಳ ಮೇಲಿನ ಬಾಕಿ ಇರುವ ಕಂದಾಯ ಪಾವತಿಸುವ ವಿನಾಯಿತಿಯನ್ನು ನೀಡಬೇಕೆಂಬ ಬೇಡಿಕೆಯ ಪ್ರಸ್ತಾಪವನ್ನಿಟ್ಟಿದ್ದು, ಪರ್ಯಾಯ ನಿವೇಶನ/ವಸತಿ ಸೌಕರ್ಯ ಕಲ್ಪಿಸುವುದು ಸಾಧ್ಯವಿಲ್ಲವೆಂಬ ಅಭಿಪ್ರಾಯಕ್ಕೆ ಬಂದು ಸ್ವತ್ತುಗಳನ್ನು ಶೀಘ್ರವಾಗಿ ಪಾಲಿಕೆಗೆ ಬಿಟ್ಟುಕೊಡಲು ಮಾಲೀಕರುಗಳಿಗೆ ಮನವೊಲಿಸಲಾಗಿದೆ.

ಕಾಮಗಾರಿಗೆ ಒಳಪಡುವ ಸ್ವತ್ತು/ಆಸ್ತಿಗಳ ಮೇಲೆ ಮಾಲೀಕ/ಹಕ್ಕುದಾರರಿಂದ 3 ರಿಂದ 5 ವರ್ಷಗಳ ಕಾಲದ ಕಂದಾಯ ಪಾವತಿ ಬಾಕಿ ಇದ್ದು, ಕೆದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್‌ಕೆ 1976, ಸೆಕ್ಷನ್ 110 ರನ್ವಯ ನೀಡಲಾಗಿರುವ ಆಸ್ತಿ ತೆರಿಗೆ ವಿನಾಯ್ತಿಯಲ್ಲಿ ಖಾಸಗಿ ಮಾಲೀಕತ್ವಕ್ಕೆ ಸೇರಿದ ನಿವೇಶನ ಹಾಗೂ ಕಟ್ಟಡಗಳು ಒಳಗೊಂಡಿರುವುದಿಲ್ಲ. ಅಲ್ಲದೇ ಕಾಯ್ದೆಯ ಕಲಂ 108ರಲ್ಲಿ ಈ ಕಾಯ್ದೆಯಲ್ಲಿ ನೀಡಿರುವ ವಿನಾಯಿತಿಗಳನ್ನು ಹೊರತುಪಡಿಸಿ ಎಲ್ಲಾ ಸಂಧರ್ಭಗಳಲ್ಲೂ ಕಡ್ಡಾಯವಾಗಿ ಆಸ್ತಿತೆರಿಗೆಯನ್ನು ವಿಧಿಸಬೇಕೆಂದು ನಿರ್ದಿಷ್ಟಪಡಿಸಲಾಗಿದೆ. ಕೆ.ಎಂ.ಸಿ. ಕಾಯ್ದೆ ಸೆಕ್ಷನ್–107ರಲ್ಲಿ ಪಾಲಿಕೆಗೆ ಯಾವುದೇ ತೆರಿಗೆಯನ್ನು ಅಮಾನತ್ತು, ಕಡಿತ ಅಥವಾ ರದ್ದುಗೊಳಿಸಲು ಅವಕಾಶ ನೀಡಲಾಗಿದೆ.

ಆಸ್ತಿ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಕೆ.ಎಂ.ಸಿ. ಕಾಯ್ದೆಯಲ್ಲಿ ಪ್ರಾರ್ಥನಾ ಮಂದಿರವನ್ನು ಹೊರಡುಪಡಿಸಿ, ಯಾವುದೇ ನಿವೇಶನ/ಕಟ್ಟಡಗಳಿಗೆ ಆಸ್ತಿ ತೆರಿಗೆ ವಿನಾಯಿತಿಗೆ ಅವಕಾಶವಿರುವುದಿಲ್ಲ ಎಂಬುದಾಗಿ ಹಾಗೂ ಇವರಿಗೆ ಸ್ವತ್ತಿನ ಪರಿಹಾರ ಪಾವತಿಸುವ ವೇಳೆಯಲ್ಲಿ ಬಾಕಿ ಇರುವ ಆಸ್ತಿ ತೆರಿಗೆಯನ್ನು ಪರಿಹಾರ ಮೊತ್ತದಲ್ಲಿ ಕಡಿತಗೊಳಿಸಿ, ಉಳಿಕೆ ಪರಿಹಾರವನ್ನು ಪಾವತಿಸುವುದು ಸೂಕ್ತವೆಂದು ಉಪ ಆಯುಕ್ತರು (ಕಂದಾಯ) ರವರು ಕಂಡಿಕೆ–19 ರಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಕಾಮಗಾರಿಗೆ ಒಳಪಡುವ ಸ್ವತ್ತುಗಳ ಸ್ವಾಧೀನತೆಯನ್ನು ಶೀಘ್ರವಾಗಿ ಪಡೆಯಲು ಸ್ವತ್ತುಗಳ ಮಾಲೀಕ/ಹಕ್ಕುದಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸಲು ಒತ್ತಾಯ ಮಾಡದೇ ವಿನಾಯಿತಿ ನೀಡಿರುವುದು ಸೂಕ್ತವೆಂದು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಚರ್ಚೆ ವೇಳೆ ಅಭಿಪ್ರಾಯ ಪಟ್ಟಿರುತ್ತಾರೆ.

ಕೆಳಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿಗೆ ಒಳಪಡುವ ಸ್ವತ್ತುಗಳು ರಸ್ತೆ ಅಗಲೀಕರಣಕ್ಕಾಗಿ ಶೀಘ್ರವಾಗಿ ಅತ್ಯಾವಶ್ಯಕತೆ ಇದ್ದು, ಆಸ್ತಿ ಮಾಲೀಕರು/ಹಕ್ಕುದಾರರು ಆರ್ಥಿಕವಾಗಿ ದುರ್ಬಲರು, ಕಡುಬಡವರಾಗಿದ್ದು, ಟಿ.ಡಿ.ಆರ್. ಯೋಜನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಹಾಗೂ 1894ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಪ್ರಕ್ರಿಯೆ ಹೆಚ್ಚಿನ ಅವಧಿಯ ಕೆಲಸವಾಗಿರುವುದರಿಂದ ಹಾಗೂ ಆರ್ಥಿಕವಾಗಿ ಹೆಚ್ಚಿನ ಹೊರೆಯಾಗುವುದರ ಹಿನ್ನೆಲೆಯಲ್ಲಿ ಆಸ್ತಿಗಳ ಮೇಲೆ ಬಾಕಿ ಇರುವ ತೆರಿಗೆಯನ್ನು ಪಾವತಿಸುವ ವಿನಾಯಿತಿ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ಕದಿರೇನಹಳ್ಳಿ ಕೆಳಸೇತುವೆ ಮತ್ತು ಸರ್ವಿಸ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಕೊಳಪಡುವ ಖಾಸಗಿ ಸ್ವತ್ತುಗಳ ವಿವರ.**

**ಕನಕಪುರ ರಸ್ತೆಯಿಂದ –ಕದಿರೇನಹಳ್ಳಿ ವೃತ್ತದ ಕಡೆ ರಿಂಗ್ ರಸ್ತೆಯ ಎಡಭಾಗದ ಸ್ವತ್ತುಗಳು**

| ಕ್ರಮ ಸಂಖ್ಯೆ | ಸ್ವತ್ತಿನ ಮಾಲೀಕರ ಹೆಸರು | ಗ್ರಾಮ | ಸರ್ವೆ ನಂ. | ಸ್ವತ್ತಿನ ನಂ. | ಷರಾ |
|---|---|---|---|---|---|
| 1 | ಎ.ಎನ್.ಶಿವಕುಮಾರ್ | ಕದಿರೇನಹಳ್ಳಿ | 6/2 | 6/2 | ಎಡಭಾಗ |

| | | | | | |
|---|---|---|---|---|---|
| 2 | ಕೌಶಲ್ಯ w/o ದೇವರಾಜು | ಕದಿರೇನಹಳ್ಳಿ | 6/2 | 2 | ಎಡಭಾಗ |

.....25



| | | | | | |
|---|---|---|---|---|---|
| 3 | ಚೆನ್ನವೀರಸ್ವಾಮಿ s/o ಲಕ್ಷ್ಮಯ್ಯ | ಕರೀಸಂದ್ರ 1/2<br>ಕದಿರೇನಹಳ್ಳಿ 1/2 | 24/2<br>6/2 | 3 | ಎಡಭಾಗ |
| 4 | ರಮಾದೇವಿ | ಕದಿರೇನಹಳ್ಳಿ | 24/2,<br>6/2 | 3 | ಎಡಭಾಗ |
| 5 | ಚಂದ್ರಮ್ಮ | ಕದಿರೇನಹಳ್ಳಿ | 6/2 | 3 | ಎಡಭಾಗ |
| 6 | ಶ್ಂಷುದ್ದೀನ್ ಅನ್ಸಾರಿ (ಅಫಸರ್ ಅಹಮದ್) | ಕದಿರೇನಹಳ್ಳಿ 1/2<br>ಕದಿರೇನಹಳ್ಳಿ 1/2 | 24/2<br>6/2 | 1 | ಎಡಭಾಗ |
| 7 | ಜೀನತ್ ಬೇಗಂ w/o ಅಬ್ದುಲ್ ಕಲೀಂ | ಕದಿರೇನಹಳ್ಳಿ | 24/2 | 9 | ಎಡಭಾಗ |
| 8 | ಅಮೀರ್‌ಜಾನ್ | ಕದಿರೇನಹಳ್ಳಿ | 24/2 | 28 | ಎಡಭಾಗ |
| 9 | ಗೋವಿಂದನಾಯ್ಡು | ಕದಿರೇನಹಳ್ಳಿ | 24/2 | 30 | ಎಡಭಾಗ |
| 10 | ಮುನಿಸ್ವಾಮಿ s/o ಕಂಟಸ್ವಾಮಿ | ಕದಿರೇನಹಳ್ಳಿ | 24/2 | 52 | ಎಡಭಾಗ |
| 11 | ಬಿ.ಎಸ್.ಪರಮೇಶ್ | ಕದಿರೇನಹಳ್ಳಿ | 24/2 | 53 | ಎಡಭಾಗ |
| 12 | ಸುಬ್ರಮಣ್ಯಂ s/o ನಲ್ಲಯ್ಯಚಾರಿ | ಕದಿರೇನಹಳ್ಳಿ | 24/2 | 66 | ಎಡಭಾಗ |
| 13 | ಸಯ್ಯದ್ ರೇಪತ್ ಅಹಮದ್ | ಜರಗನಹಳ್ಳಿ | 6 | | ಎಡಭಾಗ |
| 14 | ಕಾರ್ಯಸಿದ್ಧ ಗಣಪತಿ | ಜರಗನಹಳ್ಳಿ | | | ಎಡಭಾಗ |
| 15 | ಡೇಫ್ರೆಷ್ (ಗೋವಿಂದರಾಜು) | ಕದಿರೇನಹಳ್ಳಿ | | | ಎಡಭಾಗ |
| 16 | ರಾಮು ಬಿನ್ ಲೇ.ತಿಮ್ಮಯ್ಯ | ಕದಿರೇನಹಳ್ಳಿ | 24/2 | 370 | ಎಡಭಾಗ |
| 17 | ಶಶಿಕಲಾ ಕೋಂ ಬಿ.ಎನ್.ಜಯಕುಮಾರ್ | ಕದಿರೇನಹಳ್ಳಿ | 7/1ಎ | 7/1ಎ | ಎಡಭಾಗ |
| 18 | ಮುನಿರತ್ನ ಕೋಂ ಪಿ.ಸುಧಾಕರ | ಕದಿರೇನಹಳ್ಳಿ | 24/2 | 6/2ಬಿ | ಎಡಭಾಗ |
| 19 | ಶಾಂತಮ್ಮ ಕೋಂ ಮುನಿಯಪ್ಪ | ಕದಿರೇನಹಳ್ಳಿ | 24 | 9 | |
| 20 | ರವಿಂದ್ರನಾಥ (ಸೌಪರ್ಣಿಕ ಹೋಟೆಲ್) | ಕದಿರೇನಹಳ್ಳಿ | | | ಎಡಭಾಗ |
| 21 | ಕೃಷ್ಣನಾಯ್ಡ್, ಸುಬ್ರಮಣ್ಯಪುರ ಮುಖ್ಯರಸ್ತೆ | ಕದಿರೇನಹಳ್ಳಿ | | 18/2 | ಎಡಭಾಗ |
| 22 | ಷಂಷುದ್ದೀನ್ ಅನ್ಸಾರಿ ಮತ್ತು ಚಂದ್ರಮ್ಮ | ಕದಿರೇನಹಳ್ಳಿ | | | ಎಡಭಾಗ |
| 23 | ಜಿನಿತ್ ಬೇಗಂ ಕೋಂ ಅಬ್ದುಲ್ ರಹೀಂ | ಕದಿರೇನಹಳ್ಳಿ | | 9 | ಎಡಭಾಗ |
| 24 | ಮುನಿಸ್ವಾಮಿ ಬಿನ್ ಕಂದಸ್ವಾಮಿ | ಕದಿರೇನಹಳ್ಳಿ | 24/2 | 52 | ಎಡಭಾಗ |
| 25 | ಸುಬ್ರಮಣ್ಯಂ s/o ಸುಬ್ರಮಣ್ಯಚಾರಿ | ಕದಿರೇನಹಳ್ಳಿ | 24/2 | 66 | ಎಡಭಾಗ |
| 26 | ಪಿ.ಲಕ್ಷ್ಮಿನಾರಾಯಣ, ಎಂ.ಪಿ.ಪ್ರಹ್ಲಾದ್ | ಕದಿರೇನಹಳ್ಳಿ | 24 | 8 | ಎಡಭಾಗ |
| 27 | ವಾಸು | ಕದಿರೇನಹಳ್ಳಿ | 24 | | ಎಡಭಾಗ |
| 28 | ಮಹಮದ್ ಫಯಾಜ್ | ಕದಿರೇನಹಳ್ಳಿ | 6/2ಸಿ, 7,<br>10 | 7/1 | ಎಡಭಾಗ |
| 29 | ಚೆನ್ನವೀರಸ್ವಾಮಿ ಮತ್ತು ಕೌಶಲ್ಯ | ಕದಿರೇನಹಳ್ಳಿ | 24/2 | | ಎಡಭಾಗ |
| 30 | ನಾಗಲಕ್ಷ್ಮಿ, ಹೆಚ್.ಎಸ್.ಎಂ.ಪ್ರಕಾಶ್, 1ನೇಕ್ರಾಸ್, 1ನೇ ಸ್ಟೇಜ್, ಉಪಾಧ್ಯಾಯ | ಜರಗನಹಳ್ಳಿ | | | ಎಡಭಾಗ |

| | | | | | |
|---|---|---|---|---|---|
| | ಕಾಲೋನಿ, ದಯನಾಂದ ಕಾಲೇಜು ರಸ್ತೆ, | | | | |

.....26



1. ಖಾಸಗಿ ದೇವಸ್ಥಾನ 1
2. ಮಾಲೀಕರುಗಳ ಸ್ವತ್ತು 29

**ಜುಮ್ಲಾ 30**

**ಕದಿರೇನಹಳ್ಳಿ ಕೆಳಸೇತುವೆ ಮತ್ತು ಸರ್ವಿಸ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಕ್ಕೊಳಪಡುವ ಖಾಸಗಿ ಸ್ವತ್ತುಗಳ ವಿವರ.**

**ಕನಕಪುರ ರಸ್ತೆಯಿಂದ –ಕದಿರೇನಹಳ್ಳಿ ವೃತ್ತದ ಕಡೆ ರಿಂಗ್ ರಸ್ತೆಯ ಬಲಭಾಗದ ಸ್ವತ್ತುಗಳು**

| ಕ್ರಮ ಸಂಖ್ಯೆ | ಸ್ವತ್ತಿನ ಮಾಲೀಕರ ಹೆಸರು | ಗ್ರಾಮ | ಸರ್ವೆ ನಂ. | ಸ್ವತ್ತಿನ ನಂ. | ಷರಾ |
|---|---|---|---|---|---|
| 1 | ತುಳಸಮ್ಮ w/o ರಾಮಚಂದ್ರ | ಕರೀಸಂದ್ರ | 24/1 | 13 | ಬಲಭಾಗ |
| 2 | ಮುನಿರತ್ನಮ್ಮ w/o ಚೆನ್ನಪ್ಪ | ಕರೀಸಂದ್ರ | 24 | 12 | ಬಲಭಾಗ |
| 3 | ಶಾಂತಮ್ಮ w/o ಮುನಿಯಪ್ಪ | ಕರೀಸಂದ್ರ | 24 | 09 | ಬಲಭಾಗ |
| 4 | ಚಿಕ್ಕಹೊನ್ನಯ್ಯ s/o ಹೊನ್ನೇಗೌಡ | ಕರೀಸಂದ್ರ | 24 | 389(4) | ಬಲಭಾಗ |
| 5 | ತುಳಸಮ್ಮ w/o ರಾಜುನಾಯ್ಕ್ | ಕರೀಸಂದ್ರ | 24 | 1 | ಬಲಭಾಗ |
| 6 | ಸಿ.ಎಲ್.ನರಸಿಂಹಮೂರ್ತಿ, ಎನ್. ಕೃಷ್ಣಮೂರ್ತಿ | ಕರೀಸಂದ್ರ | 24 | 373 | ಬಲಭಾಗ |
| 7 | ಚೆನ್ನಮ್ಮ ಕೋಂ ವೆಂಕಟಸ್ವಾಮಿ | ಕರೀಸಂದ್ರ | 24/2 | 371 | ಬಲಭಾಗ |
| 8 | ಶಮಾದೇವಿ w/o ಭಿಕ್ಕಾರಾಂ | ಕರೀಸಂದ್ರ | 24/2 | 374 | ಬಲಭಾಗ |
| 9 | ಗೌರಮ್ಮ, ನಾಗರಾಜು | ಕರೀಸಂದ್ರ | 24/2 | 472 | ಬಲಭಾಗ |
| 10 | ಗಂಗಾಧರ, ನಾರಾಯಣಸ್ವಾಮಿ (ಜಿಪಿಎ) | ಕರೀಸಂದ್ರ | 24 | 471 | ಬಲಭಾಗ |
| 11 | ಭಾಗ್ಯ | ಕರೀಸಂದ್ರ | 24 | | |
| 12 | ವೆಂಕಟಾದಿæ s/o ಮುನಿವೆಂಕಟಪ್ಪ | ಕರೀಸಂದ್ರ | 24/2 | 447 | ಬಲಭಾಗ |
| 13 | ಚೆನ್ನಮ್ಮ w/o ವೆಂಕಟಸ್ವಾಮಿ (ಕ್ರಯದಾರ) | ಕರೀಸಂದ್ರ | 24/2 | 372 | ಬಲಭಾಗ |
| 14 | ಪಾರ್ವತಿ ಕೋಂ ಮಾಣಿಕ್ಯಂ | ಕರೀಸಂದ್ರ | 24/2 | 375 | ಬಲಭಾಗ |
| 15 | ವಸಂತ ಕೋಂ ಚಲ್ಲರ್ | ಕರೀಸಂದ್ರ | 24/2 | 421 | ಬಲಭಾಗ |
| 16 | ಬ್ಯಾಟರಾಯಪ್ಪ ಬಿನ್ ವೆಂಕಟಪ್ಪ (ಕ್ರಯದಾರ) | ಕರೀಸಂದ್ರ | 24/2 | 423 | ಬಲಭಾಗ |
| 17 | ಅಂಗನವಾಡಿ ಕೇಂದ್ರ | ಕರೀಸಂದ್ರ | 24/2 | | ಬಲಭಾಗ |
| 18 | ವೆಂಕಟಸ್ವಾಮಿ ಬಿನ್ ಚಿಕ್ಕವೆಂಕಟಪ್ಪ | ಕರೀಸಂದ್ರ | 24/2 | 390 | ಬಲಭಾಗ |

| | | | | | |
|---|---|---|---|---|---|
| 19 | ನಾಗರಾಜು ಬಿನ್ ವೆಂಕಟಸ್ವಾಮಿ | ಕರೀಸಂದ್ರ | 24 | 472 | ಬಲಭಾಗ |
| 20 | ಬಿ.ಎನ್.ಶಿವಣ್ಣ ಬಿನ್ ನಂಜಪ್ಪ | ಕರೀಸಂದ್ರ 1/2<br>ಕದಿರೇನಹಳ್ಳಿ 1/2 | 24 | 14 | ಬಲಭಾಗ |
| 21 | ಶಾಂತಮ್ಮ ಕೋಂ ಮುನಿಯಪ್ಪ | ಕರೀಸಂದ್ರ | 24 | 9 | ಬಲಭಾಗ |
| 22 | ಗಂಗಾಧರ (ಕ್ರಯದಾರ) | ಕರೀಸಂದ್ರ | 24 | 471 | ಬಲಭಾಗ |

.....27



| | | | | | |
|---|---|---|---|---|---|
| 23 | ಸಿ.ವೆಂಕಟೇಶ್ ಬಿನ್ ವೆಂಕಟಸ್ವಾಮಿ | ಕರೀಸಂದ್ರ | 24 | 473 | ಬಲಭಾಗ |
| 24 | ಗಂಗಮ್ಮ ಕೋಂ ಮುನಿಸ್ವಾಮಿ | ಕರೀಸಂದ್ರ | 24/2 | 388 | ಬಲಭಾಗ |
| 25 | ನಾಗಲಿಂಗೇಶ್ವರಸ್ವಾಮಿ | ಕರೀಸಂದ್ರ | 24 | | ಬಲಭಾಗ |
| 26 | ಶ್ರೀ ಮೋಕ್ಷ ಶನೇಶ್ವರಸ್ವಾಮಿ ದೇವಸ್ಥಾನ | ಕದಿರೇನಹಳ್ಳಿ | 24 | | ಬಲಭಾಗ |
| 27 | ಶ್ರೀ ಆಂಜನೇಯಸ್ವಾಮಿ ದೇವಸ್ಥಾನ | ಕದಿರೇನಹಳ್ಳಿ | 24 | | ಬಲಭಾಗ |
| 28 | ಸುಜಾತ w/o ಮಲ್ಲಪ್ಪ | ಕರೀಸಂದ್ರ | 24 | 11 | ಬಲಭಾಗ |

1. ಅಂಗನವಾಡಿ ಕೇಂದ್ರ 1
2. ಖಾಸಗಿ ದೇವಸ್ಥಾನ 3
3. ಖಾಸಗಿ ಮಾಲೀಕರ ಸ್ವತ್ತುಗಳು 24

---

**ಒಟ್ಟು 28**

ಬನಶಂಕರಿ 2ನೇ ಹಂತದ ಕದಿರೇನಹಳ್ಳಿ ಜಂಕ್ಷನ್ ಬಳಿ ಕೆಳ ಸೇತುವೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕಾಗಿ ಒಳಪಡುವ ಕರೀಸಂದ್ರ (ಭವಾನಿನಗರ ಸ್ಲಂ), ಕದಿರೇನಹಳ್ಳಿ ಮತ್ತು ಜರಗನಹಳ್ಳಿ (ಪದ್ಮನಾಭನಗರ ಮತ್ತು ಬನಶಂಕರಿ ವಾರ್ಡ್‌ಗಳ) ಗ್ರಾಮಗಳ ಮೇಲ್ಕಂಡ ಸ್ವತ್ತುಗಳನ್ನು ಒಂದು ವಿಶೇಷ ಪ್ರಕರಣವೆಂದು ಟಿ.ಡಿ.ಆರ್. ಯೋಜನೆಯಡಿ ಹಕ್ಕುಬಿಡುಗಡೆ ಪತ್ರವನ್ನು ಪಾಲಿಕೆಗೆ ನೊಂದಾವಣೆ ಮಾಡುವ ಸ್ವತ್ತುಗಳ ಆಸ್ತಿ ತೆರಿಗೆಯ ಹಿಂದಿನ ವರ್ಷಗಳ ಬಾಕಿ ಪಾವತಿಸಲು ವಿನಾಯಿತಿ ನೀಡುವ ಬಗ್ಗೆ ಹಾಗೂ ವಶಪಡಿಸಿಕೊಳ್ಳಲಾಗುವ ಸ್ವತ್ತುಗಳ ಭಾಗಶಃ/ಪೂರಾ ವಿಸ್ತೀರ್ಣದ ಮೇಲಿನ ಆಸ್ತಿತೆರಿಗೆಯನ್ನು ಪಾಲಿಕೆಗೆ ಹಕ್ಕುಬಿಡುಗಡೆ

ಪತ್ರದನೊಂದಣಿಯಾದ ದಿನಾಂಕದಿಂದ ಮನ್ನಾ (Abate) ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 15–11–2010ರ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011ರ ನಿರ್ಣಯ

**ನಿರ್ಣಯ :– ಆಯುಕ್ತರ ದಿನಾಂಕ 15–11–2010ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011ರ ನಿರ್ಣಯವನ್ನು ಒಪ್ಪಿದೆ.**

## 13]. ವಿಷಯದ ಸಂಖ್ಯೆ :–ತೆಆಸ್ಥಾಸ/156/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/131/10–11, ದಿನಾಂಕ:09–12–2010ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ 178 ರ ಸಿ–2, 9ನೇ ಅಡ್ಡರಸ್ತೆ, ಜೆ.ಪಿ.ನಗರ, 2ನೇ ಹಂತದಲ್ಲಿನ ಶ್ರೀ ತಿರುಮಲಗಿರಿ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರವರಿಗೆ 1996 ರಿಂದ 2001 ರ ವರೆಗೆ ವಾರ್ಷಿಕ 24000/– ರೂ ನಿಗಧಿಪಡಿಸಿ ದೇವಸ್ಥಾನ

ನಿರ್ಮಿಸಲು 2900 ಚ.ಮಿ. ಅಳತೆ ನಿವೇಶನ ಗುತ್ತಿಗೆ ನೀಡಲಾಗಿರುತ್ತದೆ. ಸದರಿ ದೇವಸ್ಥಾನದ ಧರ್ಮದರ್ಶಿಗಳು ಸದರಿ ಸ್ಥಳದಲ್ಲಿ ದೇವಸ್ಥಾನ ನಿರ್ಮಾಣಗೊಂಡಿದ್ದು ಸಾರ್ವಜನಿಕರಿಗೆ ದೇವಸ್ಥಾನ ಇರುವಿಕೆಯು ಅತ್ಯಾವಶ್ಯಕವಾಗಿರುವುದರಿಂದ ಮುಂದಿನ 30 ವರ್ಷಗಳಿಗೆ ಗುತ್ತಿಗೆ ಅವಧಿ ನವೀಕರಿಸುವಂತೆ ಕೋರಿರುತ್ತಾರೆ.

ವಲಯಾಧಿಕಾರಿಗಳು ವರದಿ ಸಲ್ಲಿಸಿ ವಿದ್ಯುತ್ ಹೈಟೆನ್ಷನ್ ಲೈನಿನ ಕೆಳಗೆ ಇರುವ ಪ್ರದೇಶದ ಈ ಜಾಗವನ್ನು ಗುತ್ತಿಗೆ ನೀಡಿದ್ದು ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆಯಾಗಿರುವುದಿಲ್ಲ ಹಾಗೂ ಈ ಸ್ಥಳದಲ್ಲಿ ದೇವಾಲಯವಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ದೇವಸ್ಥಾನದ ಉಪಯೋಗಕ್ಕಾಗಿ ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ 2900 ಚ.ಮೀ.ಪ್ರದೇಶವನ್ನು ದೇವಸ್ಥಾನದ ಉಪಯೋಗಕ್ಕಾಗಿ ವಾರ್ಷಿಕ 24000/- ರಂತೆ ನಿಗಧಿಪಡಿಸಿ ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಲು ಕೋರಿರುತ್ತಾರೆ.

.....28



ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ-1976 ಕಲಂ-176ರ (6) ಹಾಗೂ (ಬಿ)॥ ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಇನ್ನೂ ಮುಂದಿನ ಅವಧಿಗೆ ಸರ್ಕಾರದ ಅನುಮೋದನೆಗೆ ಮಂಡಿಸಬೇಕಾಗಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ : ಉ.ಆ(ಕಂ)/ಪಿಆರ್/115/01-02, ದಿನಾಂಕ : 01-03-2002ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇ : 10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ : 17-04-2007 ರ ಸರ್ಕಾರದ ಮಾರ್ಗಸೂಚಿಯಂತೆ ಮಾರುಕಟ್ಟೆ ಬೆಲೆ ಚ.ಅಡಿಗೆ 2700/- ರೂ.ಗಳಾಗಿದ್ದು 31,215*2700=8,42,80,500/- ಶೇ.10ರಷ್ಟು ವಾರ್ಷಿಕ ಗುತ್ತಿಗೆ ಹಣ 84,28,050/- ರೂಗಳಾಗಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯಂತೆ ಗುತ್ತಿಗೆ ಅವಧಿ ನವೀಕರಿಸಲು ಮೇಲೆ ವಿವರಿಸಿದ ಸುತ್ತೋಲೆಯಂತೆ ಸರ್ಕಾರದ ಅನುಮೋದನೆ ಪಡೆಯಲು ಈ ಪ್ರಕರಣವನ್ನು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 09-12-2010ರ ಟಿಪ್ಪಣಿಯನ್ನು ಮಾರ್ಪಡಿಸಿ 5ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ :11-01-2011ರ ನಿರ್ಣಯ

**ನಿರ್ಣಯ :- ಆಯುಕ್ತರ ದಿನಾಂಕ 09-12-2010ರ ಟಿಪ್ಪಣಿಯನ್ನು ಮಾರ್ಪಡಿಸಿ 5ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11-01-2011 ರ ನಿರ್ಣಯವನ್ನು ಒಪ್ಪುತ್ತಾ ವಾರ್ಷಿಕ ರೂ: 24,000-00 ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿದೆ.**

## 14]. ವಿಷಯದ ಸಂಖ್ಯೆ :-ತೆಆಸ್ಥಾಸ/157/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(1)ಪಿಆರ್/37/10-11, ದಿನಾಂಕ: 12-11-2010ರಲ್ಲಿ ವಿವರಿಸಿರುವಂತೆ ಬಾಲ ಮನೋವಿಕಾಸ ಕೇಂದ್ರ ಗಾಂಧಿ ಸಾಹಿತಿ ಕೇಂದ್ರರವರಿಗೆ ಮಲ್ಲೇಶ್ವರಂ ಪಶ್ಚಿಮ ಉದ್ಯಾನವನದ ರಸ್ತೆ ಮಾರುಕಟ್ಟೆ ಹಿಂಭಾಗದಲ್ಲಿರುವ ನಗರ ಪಾಲಿಕೆಯ 72 X 75 ಅಡಿಗಳ ಜಾಗವನ್ನು ಮನೋವಿಕಲತೆಯುಳ್ಳ ಮಕ್ಕಳಿಗಾಗಿ ಶಾಲೆ ನಡೆಸುವ ಸಲುವಾಗಿ ದಿನಾಂಕ: 13/02/1999 ರಿಂದ 10 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಹಣ 2500/- ರೂ ಗಳಂತೆ ನಿಗಧಿಪಡಿಸಿ ವರ್ಷಕ್ಕೊಮ್ಮೆ ಸೇ.10 ರಷ್ಟು ಗುತ್ತಿಗೆ ಹಣವನ್ನು ಹೆಚ್ಚಿಸುವ ಷರತ್ತಿಗೊಳಪಡಿಸಿ ಸರ್ಕಾರದ ಆದೇಶದ ಮೇರೆಗೆ ಗುತ್ತಿಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು 12/02/2010 ರಂದು ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯು ದಿನಾಂಕ: 21/07/2010 ರಂದು ಮನವಿ ಸಲ್ಲಿಸಿ ಸದರಿ ಜಾಗದ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ. ಈ ಬಗ್ಗೆ ಸ್ಥಳ ತನಿಖೆ ಮಾಡಲಾಗಿದ್ದು, ಸದರಿ ಸಂಸ್ಥೆಯವರು ಬುದ್ದಿಮಾಂದ್ಯ ಮಕ್ಕಳ ಶ್ರೇಯೋಭಿವೃದ್ದಿಗಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು

ಬಂದಿರುತ್ತದೆ. ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ. ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ಬೆಲೆಯು ಸರ್ಕಾರದ ಮಾರ್ಗಸೂಚಿ ದಿನಾಂಕ:17/07/2 007 ರಂತೆ ಚದರ ಅಡಿ ಒಂದಕ್ಕೆ 4200/– ರೂ. ಗಳಾಗಿದ್ದು, ಅರ್ಜಿದಾರರಿಗೆ ನೀಡಿರುವ ವಿಸ್ತೀರ್ಣವು 72 X 75=5400 ಚದರ ಅಡಿಗಳಾಗಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿದ್ದು, ಒಟ್ಟು 1,62,00,000/– ರೂ. ಗಳಾಗಿರುತ್ತದೆ. ಸೇ.10ರಷ್ಟು ಗುತ್ತಿಗೆ ಎಂಬುದಾಗಿ ಪರಿಗಣಿಸಲಾಗಿ ಇದರಂತೆ ವಾರ್ಷಿಕ ರೂ. 16,20,000/– ಆಗುತ್ತದೆ. ಮಾಸಿಕ ಗುತ್ತಿಗೆ ಹಣ 1,35,000/– ಗಳಾಗಿರುತ್ತದೆ. ಆದರೆ ಈ ಮೊತ್ತವನ್ನು ಸದರಿ ಸಂಸ್ಥೆಯು ಭರಿಸಲು ಅಶಕ್ತವಾಗಿರುತ್ತದೆ. ಬುದ್ಧಿಮಾಂದ್ಯ ಮಕ್ಕಳಿಗಾಗಿ ಈ ಸಂಸ್ಥೆಯು ಸೇವೆ ಸಲ್ಲಿಸುತ್ತಿರುವುದರಿಂದ ಮತ್ತು ಸದರಿ ಸಂಸ್ಥೆಗೆ ತಮ್ಮದೇ ಆದ ಯಾವುದೇ ವರಮಾನ ಇರುವುದಿಲ್ಲ. ಕಂದಾಯ ಅಧಿಕಾರಿ ಮಲ್ಲೇಶ್ವರಂ ರವರು ತಿಳಿಸಿರುವಂತೆ ಈಗಾಗಲೇ ಸದರಿ ಸಂಸ್ಥೆಯು 2009–10ನೇ ಸಾಲಿನ ವರ್ಷಾಂತ್ಯ ಗುತ್ತಿಗೆ ಮೊತ್ತ 3025/– ರೂಗಳನ್ನು ಪಾವತಿಸಿರುತ್ತದೆ. ಈ ಸಂಸ್ಥೆಯ ಉದ್ದೇಶ ಮತ್ತು ನಿಸ್ವಾರ್ಥ ಸೇವೆಯನ್ನು

......29



ಪರಿಗಣಿಸಿ ಮಾನವೀಯ ದೃಷ್ಟಿಯಿಂದ ವಾರ್ಷಿಕ ಗುತ್ತಿಗೆ ರೂ.3500/– ಗಳಿಗೆ ನಿಗಧಿಗೊಳಿಸಿ ದಿನಾಂಕ: 13/02/2009 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿರುತ್ತದೆ.

ಕರ್ನಾಟಕ ಮುನಿಸಿಫಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಲಿಕೆಯ ಸಭೆಯ ಅನುಮೋಧನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಸವಿರುತ್ತದೆ. ಗುತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಇ 129 ಟಿ.ಡಂ.ಡಿ. 2002 ದಿನಾಂಕ:02/06/2003ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ: ಅ ಕಂ ಪಿಆರ್ 115/01–02 ದಿನಾಂಕ: 01/03/2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸ್ತುತ ಮಾರುಕಟ್ಟೆ ಬೆಲೆಗೆ ಕನಿಷ್ಟ ಶೇ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ.

ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ದರ್ಮಾದಾಯಿ ಸಂಸ್ಥೆಗಳೀಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೈಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಯುಕ್ತರು ನಿರ್ಧರಿಸುವರು.

ಈ ವಿಷಯವನ್ನು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 12–11–2010ರ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011ರ ನಿರ್ಣಯ

**<u>ನಿರ್ಣಯ :– ಆಯುಕ್ತರ ದಿನಾಂಕ 12–11–2010ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011ರ ನಿರ್ಣಯವನ್ನು ಒಪ್ಪಿದೆ. ಹಾಗೂ 5ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಹಣ ರೂ.3500/–ಗಳಂತೆ ನಿಗಧಿಪಡಿಸುವುದು.</u>**

## <u>15]. ವಿಷಯದ ಸಂಖ್ಯೆ :–ತೆಆಸ್ಥಾಸ/158/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)84/10–11ದಿನಾಂಕ : 06–01–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ವಿಶ್ವ ಮಾನ್ಯ ಸ್ವಾಮಿ ವಿವೇಕಾನಂದ ಪ್ರತಿಮಾ ಪ್ರತಿಷ್ಠಾಪನ ಸಮಿತಿ ಟ್ರಸ್ಟ್ ರವರು ಮನವಿಯೊಂದನ್ನು ಸಲ್ಲಿಸಿ ರಾಮಕೃಷ್ಣ ಮಠದ ಮುಂಭಾಗದಲ್ಲಿರುವ ವೃತದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದ್ದು, ಸದರಿ ಪ್ರತಿಮೆಯ ನಿರ್ವಹಣೆ ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುವುದಾಗಿ ತಿಳಿಸಿ, ಸದರಿ ಅಭಿವೃದ್ಧಿ ಕಾರ್ಯಗಳಿಗಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.





ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (61) ರಲ್ಲಿ ವಿಶ್ವ ಮಾನ್ಯ ಸ್ವಾಮಿ ವಿವೇಕಾನಂದ ಪ್ರತಿಮಾ ಪ್ರತಿಷ್ಠಾಪನ ಸಮಿತಿ ಟ್ರಸ್ಟ್ ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ :– ಆಯುಕ್ತರ ದಿನಾಂಕ 06–01–2011ರ ಟಿಪ್ಪಣಿಯನ್ನು ಒಪ್ಪಿದೆ.</u>**

## <u>16]. ವಿಷಯದ ಸಂಖ್ಯೆ :–ತೆಆಸ್ಥಾಸ/159/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್ಆರ್(4)43/10–11, ದಿನಾಂಕ: 10–01–2011ರಲ್ಲಿ ವಿವರಿಸಿರುವಂತೆ, ಶ್ರೀ ಜೆ. ಹುಚ್ಚಪ್ಪ, ಮಾಜಿ ಮಹಾಪೌರರು, ಅಧ್ಯಕ್ಷರ, ರಂಗೋತ್ರಿ (ರಿ), ಮಕ್ಕಳ ರಂಗಶಾಲೆ, ಶ್ರೀ ರಾಮ ಮಂದಿರ ಆಟದ ಮೈದಾನ, ರಂಗ ಮಂದಿರ, 4ನೇ ವಿಭಾಗ, ರಾಜಾಜಿನಗರ, ಬೆಂಗಳೂರು – 10. ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ತಮ್ಮ ಸಂಸ್ಥೆ ಕಳೆದ 18 ವರ್ಷಗಳಿಂದ ರಾಜಾಜಿನಗರದ ಶ್ರೀರಾಮ ಮಂದಿರ ವಾರ್ಡ್‌ನಲ್ಲಿ ಮಕ್ಕಳಿಗಾಗಿ ರಂಗ ತರಬೇತಿ ಶಾಲೆಯನ್ನು ತೆರೆದು ಸತತವಾಗಿ ಕಾರ್ಯನಿರ್ವಹಿಸಿಕೊಂಡು ಬಂದಿರುವುದಾಗಿ, ಅಂತೆಯೇ ಮಕ್ಕಳ ದಿನಾಚರಣೆ, ಚಿತ್ರಕಲೆ ಶಿಬಿರ, ಸ್ಪರ್ಧೆಗಳನ್ನು, ರಂಗಭೂಮಿಯ ವಿಚಾರಗಳ ತರಬೇತಿ, ಕುವೆಂಪುರವರ ಹೆಸರಿನಲ್ಲಿ ಕಾಲೇಜು ರಂಗೋತ್ಸವ, ಬುದ್ಧ ಪೌರ್ಣಿಮೆಯ ಅಂಗವಾಗಿ ಬುದ್ಧನ ಬೆಳದಿಂಗಳ ಸಂಗೀತೋತ್ಸವ, ಜನಪದ ಆಟಗಳಾದ

ಕುಸ್ತಿ, ಕಬ್ಬಡಿ, ಕೋಕೋ, ಕತ್ತಿವರಸೆ, ದೊಣ್ಣೆವರಸೆ, ಮಲ್ಲಕಂಬದಂತಹ ಕಾರ್ಯಕ್ರಮಗಳು, ನಾಟಕೋತ್ಸವಗಳು, ಸುಗಮ ಸಂಗೀತ ತರಬೇತಿ, ಕವಿಗೋಷ್ಠಿಗಳು, ಜನಪದ ಕಲಾಮೇಳ, ಜನಪದ ಸಂಗೀತೋತ್ಸವಗಳು ಹಾಗೂ ಇನ್ನೂ ಇತರೆ ಕಾರ್ಯಕ್ರಮಗಳನ್ನು ಹಲವಾರು ವರ್ಷಗಳಿಂದ ಸತತವಾಗಿ ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸುತ್ತಾ, ಸದರಿ ಸಂಸ್ಥೆಯು ಮೇಲ್ಕಂಡ ಕಾರ್ಯಕ್ರಮಗಳನ್ನು ನಡೆಸಲು ಹೆಚ್ಚಿನ ಆರ್ಥಿಕ ಸಹಕಾರ ಬೇಕಾಗಿದ್ದು, ಈ ಕಾರ್ಯಗಳಿಗೆ ಅಂದಾಜು ಹತ್ತರಿಂದ ಹನ್ನೆರಡು ಲಕ್ಷಗಳು ಬೇಕಾಗಿರುವುದರಿಂದ ಪಾಲಿಕೆ ವತಿಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ವರ್ಷಪ್ರತಿ ಕಾರ್ಯಕ್ರಮಗಳನ್ನು ನಡೆಸಲು ಕನಿಷ್ಠ ರೂ. 10,000,00/- ಗಳನ್ನು ಮಂಜೂರು ಮಾಡಿಸಿ ಕೊಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/- (ಹತ್ತು ಸಾವಿರಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 10-01-2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.ಒಂದು ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.**

.....31



## 17]. ವಿಷಯದ ಸಂಖ್ಯೆ :-ತೆಆಸ್ಥಾಸ/160/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್ಆರ್(4)37/10-11, ದಿನಾಂಕ: 10-01-2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಸುಜಾತ ಜಿ.ಟಿ. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಮಗಳಾದ ಕು॥ ಕಾವ್ಯ ಜಿ. ರಾವ್ (15 ವರ್ಷ) ರವರು ನೃತ್ಯ ಕಲಾವಿದೆ ಹಾಗೂ ಬಹುಮುಖ ಪ್ರತಿಭೆ ಎಂದು, ಇವರು ದೇಶದಾದ್ಯಂತ ಸಾವಿರಾರು ಕಾರ್ಯಕ್ರಮಗಳನ್ನು ನೀಡಿ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಸಹ ಪಡೆದಿರುವ ಇವರಿಗೆ ದಿನಾಂಕ 3, 4 ಮತ್ತು 5 ನೇ ಸೆಪ್ಟೆಂಬರ್ 2010 ರಂದು ಅಮೇರಿಕಾದ "ನ್ಯೂಜರ್ಸಿ" ಯಲ್ಲಿ ನಡೆಯಲಿರುವ "ಅಕ್ಕ" ಸಮ್ಮೇಳನದಲ್ಲಿ ಭಾಗವಹಿಸಲು ಮತ್ತು ನೃತ್ಯ ಪ್ರದರ್ಶನ ನೀಡಲು ಅವಕಾಶ ಬಂದಿರುವುದಾಗಿ ತಿಳಿಸಿ, ಆರ್ಥಿಕವಾಗಿ ಹಿಂದುಳಿದಿರುವ ತಮಗೆ ಅಮೇರಿಕಾಕ್ಕೆ ಹೋಗಿ ಬರಲು ಸಾಧ್ಯವಾಗದಿರುವ ಕಾರಣ ಪಾಲಿಕೆ ವತಿಯಿಂದ ಧನ ಸಹಾಯ ನೀಡಬೇಕೆಂದು ಕೋರಿರುತ್ತಾರೆ.

ಆದರೆ, ಅಕ್ಕ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಈ ಹಿಂದೆ ಯಾರಿಗೂ/ಸಂಘ-ಸಂಸ್ಥೆಗಳಿಗೂ ಅನುದಾನ/ ಸಹಾಯಧನ ಮಂಜೂರು ಮಾಡಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ

ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕಲಾವಿದರಿಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 10–01–2011ರ ಟಿಪ್ಪಣಿಯನ್ನು ಒಪ್ಪುತ್ತಾ ರೂ.10,000.00 ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿ ತೀರ್ಮಾನಿಸಿತು.**

## 18]. ವಿಷಯದ ಸಂಖ್ಯೆ :–ತೆಆಸ್ಥಾಸ/161/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಅ)ಪಿಎಸ್ಆರ್(4)56/10–11, ದಿನಾಂಕ:10–01–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನರಸಿಂಹ, ಸಂಸ್ಥಾಪಕ ಗೌರವ ಕಾರ್ಯದರ್ಶಿ, ಉದಯಭಾನು ಕಲಾ ಸಂಘ (ನೊಂ.), ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘವು 1965 ರಲ್ಲಿ ಸ್ಥಾಪನೆಯಾಗಿ, ನಿರಂತರವಾಗಿ ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಜನೋಪಕಾರಿ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು, ಸುವರ್ಣ ಮಹೋತ್ಸವದೆಡೆಗೆ ಭದ್ರ ಹೆಜ್ಜೆಯನ್ನಿಡುತ್ತಿದೆಯೆಂದು ತಿಳಿಸಿ, ಸಂಘವು ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ – ನಗರ ಕಲ್ಯಾಣ, ಶಿಕ್ಷಣ, ವೈದ್ಯಕೀಯ ಹಾಗೂ ಕ್ರೀಡಾ ಯುವಜನ ಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಅಬ್ಬರ ಆಡಂಬರಗಳಿಲ್ಲದೆ ಸಕಾಲಿಕವೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವೂ ಆದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ, ಕರ್ನಾಟಕ ರಾಜ್ಯ ಸಂಘ–ಸಂಸ್ಥೆಗಳ ನೋಂದಣಿ ಕಾಯ್ದೆಯಡಿ ಸಂಘವು ನೋಂದಾವಣೆಯಾಗಿರುವುದಾಗಿ ತಿಳಿಸಿ, ತಮ್ಮ ಸಂಘದ ಕಾರ್ಯ ಚಟುವಟಿಕೆಗಳಾದ ಕಾರ್ಯಸಾಧನೆ, ಸಂಘಟನೆಯೇ ಶಕ್ತಿ, ಹಾಗೂ ನಗರ ಪಾಲಿಕೆಯ ಪೌರಸೇವಾ ಕಾರ್ಯಕ್ರಮಗಳಿಗೆ ಪೂರಕ ಚಟುವಟಿಕೆಗಳಾದ : ನಗರ ಪಾಲಿಕೆಯ ಆಟದ ಮೈದಾನ ರಕ್ಷಣೆ – ಅಭಿವೃದ್ಧಿ, ಪೌರಸೌಲಭ್ಯಗಳ ಅಭಿವೃದ್ಧಿ, ಬೆಂಗಳೂರು ದರ್ಶನ, ಕರ್ನಾಟಕ ಇತಿಹಾಸದಲ್ಲಿ ಮಹತ್ವಪೂರ್ಣ ಕೃತಿ, ಉಚಿತ ವೈದ್ಯಕೀಯ ಸೌಲಭ್ಯ, ಆರೋಗ್ಯ ಪಾಲನೆಗೆ ದತ್ತಿನಿಧಿ ಸ್ಥಾಪನೆ, ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಗ್ರಾಮಾಂತರ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಅರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು/ಪ್ರತಿಭಾ ಪುರಸ್ಕಾರ, ಪುಸ್ತಕ ದಾನ, ಸಾಕ್ಷರತಾ ಪ್ರಚಾರ, ಸಾರ್ವಜನಿಕ ವಾಚನಾಲಯ – ಪುಸ್ತಕ ಭಂಡಾರಗಳು, ವಿದ್ಯಾರ್ಥಿ ಆಕರ ಗ್ರಂಥಾಲಯ, ಹಾಗೂ ಗ್ರಂಥ ಪ್ರಕಟಣೆ ಬೆಂಗಳೂರು ದರ್ಶನ (1975, 2005), ಕೆಂಪೇಗೌಡನಗರ ದರ್ಶನ, ಆಸ್ವಾದ ಅಭಿನಂದನ ಗ್ರಂಥ, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಸಾಂಸ್ಕೃತಿಕ ನಾಟಕ ಕಾರ್ಯಕ್ರಮ ವಿವರಗಳನ್ನು ನೀಡಿ, ಸಂಘದ ಕಟ್ಟಡ ನಿರ್ಮಾಣವಾದ ವಿವಿರಗಳನ್ನು ಒದಗಿಸಿರುತ್ತಾರೆ.

.....32



ಪ್ರಸ್ತುತ, ಸಂಘದ ಚಟುವಟಿಕೆಗಳಿಗೆ ಪಾಲಿಕೆಯು 2010–11 ನೆಯ ಸಾಲಿನ ಮುಂಗಡ ಪತ್ರದಲ್ಲಿ ವಾರ್ಷಿಕ ರೂ. 5.00 ಲಕ್ಷಗಳ ಅನುದಾನ ಮೀಸಲಿಟ್ಟಿರುವುದಾಗಿಯೂ, ಈ ವಾರ್ಷಿಕ ಅನುದಾನವನ್ನು ರೂ. 25 ಲಕ್ಷಗಳಿಗೆ ಹೆಚ್ಚಿಸಿ, ಮಂಜೂರು ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (14) ರಲ್ಲಿ ಉದಯಭಾನು ಕಲಾ ಸಂಘ ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 10–01–2011ರ ಟಿಪ್ಪಣಿಯನ್ನು ಒಪ್ಪಿದೆ.**

## 19]. ವಿಷಯದ ಸಂಖ್ಯೆ :–ತೆಆಸ್ಥಾಸ/162/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)107/10-11, ದಿನಾಂಕ:10-01-2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ದಯಾನಂದನಗರ ವಾರ್ಡ್ ಸಂಖ್ಯೆ-97 ರ ನಗರ ಪಾಲಿಕೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ. ಶಕೀಲ ಮುನಿರಾಜು ರವರು ತಮ್ಮ ಪತ್ರದಲ್ಲಿ ತಿಳಿಸಿರುವಂತೆ ತಮ್ಮದೇ ವಾರ್ಡ್‌ನಲ್ಲಿ ಏಪ್ರಿಲ್ ಮಾಹೆಯ 14 ರ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯಂದು ಹಮ್ಮಿಕೊಂಡಿರುವ ಅಂಬೇಡ್ಕರ್ ಮೆಮೋರಿಯಲ್ ಮೇಯರ್ ಫುಟ್ ಬಾಲ್ ಟೂರ್ನಮೆಂಟ್ ಅನ್ನು ಗೌತಮ ನಗರ ಕ್ರೀಡಾ ಸಂಘ ರವರ ಸಾರಥ್ಯದಲ್ಲಿ ನಡೆಸುತ್ತಿದ್ದು, ಸದರಿ ಸಂಸ್ಥೆಯವರು ಸಹಾಯಧನ ಕೋರಿ ಸಲ್ಲಿಸಿರುವ ಮನವಿಯನ್ನು ಪುರಸ್ಕರಿಸಿ ಈ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/- (ಹತ್ತು ಸಾವಿರಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 10-01-2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.4.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

## 20]. ವಿಷಯದ ಸಂಖ್ಯೆ :-ತೆಆಸ್ಥಾಸ/163/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)116/10-11ದಿನಾಂಕ:10-01-2011ರಲ್ಲಿ ವಿವರಿಸಿರುವಂತೆ, ಮ್ಯಾನೇಜಿಂಗ್ ಟ್ರಸ್ಟೀ, ಬಿ. ಡಬ್ಲ್ಯು. ಪಶ್ಚಿಮ ಲಯನ್ಸ್ ಸೂಪರ್ ಸ್ಪೆಶಾಲಿಟಿ ಕಣ್ಣಿನ ಆಸ್ಪತ್ರೆ, ನಂ. 5, ಲಯನ್ಸ್ ಕಣ್ಣಿನ

......33



ಆಸ್ಪತ್ರೆ ರಸ್ತೆ, ಬೆಂಗಳೂರು – 560 002. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಮನ್ನಿಸಿ, ತಮ್ಮ ಸಂಸ್ಥೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2010-11 ನೇ ಸಾಲಿನಲ್ಲಿ ರೂ. 3.00 ಲಕ್ಷಗಳನ್ನು ಅನುದಾನವನ್ನು ಮಂಜೂರು ಮಾಡಿರುವುದಾಗಿ ತಿಳಿಸಿ, ಬಡ ಜನರಿಗೆ/ಸಾರ್ವಜನಿಕರಿಗೆ ಉಚಿತವಾಗಿ ಕಣ್ಣಿನ ಶಸ್ತ್ರ ಚಿಕಿತ್ಸೆ, ನೇತ್ರದಾನ ಕಣ್ಣಿನ ತೊಂದರೆಗಳ ಶುಶ್ರೂಷಾ ಶಿಬಿರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿರುವುದಾಗಿ ತಿಳಿಸಿ, ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ನೊಂದಣಿ ಮಾಹಿತಿ, ಕಳೆದ ಸಾಲಿನ ಲೆಕ್ಕ ಪತ್ರಗಳ ವರದಿ, ವಾರ್ಷಿಕ ಕಾರ್ಯಕ್ರಮಗಳ ವರದಿಗಳನ್ನು ಒದಗಿಸಿರುವುದಾಗಿ ತಿಳಿಸಿ, ಪಾಲಿಕೆ ವತಿಯಿಂದ ರೂ. 3.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (40) ರಲ್ಲಿ ಪ್ರಸ್ತಾವಿತ ಸಂಸ್ಥೆಯವರಿಗೆ ನಿಗಧಿ ಪಡಿಸಲಾಗಿರುವ ರೂ. 3.00 ಲಕ್ಷಗಳ (ಮೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 10–01–2011ರ ಟಿಪ್ಪಣಿಯನ್ನು ಒಪ್ಪಿದೆ.**

## 21]. ವಿಷಯದ ಸಂಖ್ಯೆ :–ತೆಆಸ್ಥಾಸ/164/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)76/10–11ದಿನಾಂಕ:10–01–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಅಖಿಲ ಕರ್ನಾಟಕ ವಾದ್ಯಗೋಷ್ಠಿ ಕಲಾವಿದರ ಮಹಾಸಂಘ (ರಿ), ನಂ. 114, ಹಯವದನರಾವ್ ರಸ್ತೆ, (ರಾಮಕೃಷ್ಣ ಆಶ್ರಮ ಹಿಂಬಾಗ) ಗವಿಪುರಂ, ಬೆಂಗಳೂರು ರವರು ಪೂಜ್ಯ ಮಹಾಪೌರರಿಗೆ ಸಲ್ಲಿಸಿರುವ ಮನವಿಯಲ್ಲಿ ಕರ್ನಾಟಕದಲ್ಲಿ ಸುಮಾರು 200 ಕ್ಕೂ ಹೆಚ್ಚು ವಾದ್ಯ ಗೋಷ್ಠಿಗಳಿದ್ದು, ವಾದ್ಯ ಗೋಷ್ಠಿಗಳಿಗಾಗಿ ಹೆಚ್ಚಿನ ಬೇಡಿಕೆಗಳು ಇಲ್ಲದೇ ಇರುವುದರಿಂದ ಇದೇ ಪ್ರವೃತ್ತಿಯನ್ನೇ ಅವಲಂಬಿಸಿರುವ 1500 ಕ್ಕೂ ಹೆಚ್ಚು ಕಲಾವಿದರನ್ನು ಒಳಗೊಂಡ ಕುಟುಂಬ ವರ್ಗದವರು ಸೇರಿ ಸಂಕಷ್ಠದಲ್ಲಿ ಇರುವುದಾಗಿ, ಸಂಘದ ವಿವಿದೋದ್ದೇಶ ಕಾರ್ಯಕ್ರಮಗಳಿಗಾಗಿ ಪಾಲಿಕೆ ವತಿಯಿಂದ ರೂ. 10,00,000/– ಗಳ ಅನುದಾನವನ್ನು ಮಂಜೂರು ಮಾಡಲು ಕೋರಿ, ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಪೂಜ್ಯ ಮಹಾಪೌರು ರೂ. 5.00 ಲಕ್ಷಗಳ ಹಣ ಬಿಡುಗಡೆ ಮಾಡುವಂತೆ ಸಮಿತಿಗೆ ಒಕ್ಕಣೆಯನ್ನು ಬರೆದು ಕಳುಹಿಸಿರುತ್ತಾರೆಂದು ತಿಳಿಸಿ, ಪೂಜ್ಯ ಮಹಾಪೌರರ ಸೂಚನೆಯ ಮೇರೆಗೆ ಸದರಿ ಸಂಸ್ಥೆಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸ್ತಾವಿತ ಸಂಘದವರು ಸುಮಾರು 10 ವರ್ಷಗಳಿಂದ 1500 ಕ್ಕೂ ಹೆಚ್ಚು ಕಲಾವಿದರಿಗೆ ಮತ್ತು ಅವರ ಕುಟುಂಬ ವರ್ಗದವರ ಜೀವನೋಪಾಯಕ್ಕೆ ಓರಿಯಂಟಲ್ ಇನ್ಶೂರೆನ್ಸ್ ಸಂಸ್ಥೆಯ ಅಪಘಾತ ಪರಿಹಾರ ವಿಮೆಯನ್ನು ಮಾಡಿಸಲಾಗಿದ್ದು, ಸಂಘದ ಯಾವುದೇ ಸದಸ್ಯ ಅಪಘಾತಕ್ಕೀಡಾಗಿ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ವಿಮಾ ಸಂಸ್ಥೆ ವತಿಯಿಂದ ರೂ.40,000/– ಮೃತ ಪಟ್ಟಲ್ಲಿ ರೂ. 2,00,000/– ದೊರಕಿಸಿಕೊಡುವ ವ್ಯವಸ್ಥೆ ಮಾಡಲಾಗಿದ್ದು, 60 ವರ್ಷ ಮೀರಿದ ಸದಸ್ಯರಿಗೆ ರೂ. 500/– ಗಳ ಮಾಸಿಕ ಪಿಂಚಣಿ ನೀಡಲು ನಿರ್ಧರಿಸಿದ್ದು, ಈ ಎಲ್ಲಾ ಯೋಜನೆಗಳ ಅನುಷ್ಠಾನಕ್ಕೆ ಅಪಾರ ಹಣದ ಅವಶ್ಯಕತೆ ಇದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನ

.....34



ವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಘಕ್ಕೆ ರೂ. 5.00 ಲಕ್ಷ (ಐದು ಲಕ್ಷಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## 22]. ವಿಷಯದ ಸಂಖ್ಯೆ :–ತೆಆಸ್ಥಾಸ/165/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:10–01–2011ರಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರ ಶೇಷಾದ್ರಿ ರಸ್ತೆಯಲ್ಲಿರುವ ಹಳೆಯ ಕೇಂದ್ರ ಕಾರಗೃಹವನ್ನು ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರಿಸಿದ ನಂತರ ಈ ಪ್ರದೇಶವನ್ನು ಸ್ವಾತಂತ್ರ್ಯ ಉದ್ಯಾನವನವನ್ನಾಗಿ ಮಾರ್ಪಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 2005–06ರಲ್ಲಿ 751 ಲಕ್ಷಗಳಿಗೆ ಟೆಂಡರ್ ಪ್ರಕಟಿಸಿ 2006–07 ರಲ್ಲಿ ಸರ್ಕಾರದಲ್ಲಿ 1027.00 ಲಕ್ಷಗಳಿಗೆ ಅನುಮೋದನೆಯಾಗಿ ಕಾಮಗಾರಿಗಳನ್ನು ಮಾಡಿರುತ್ತಾರೆ. ಅವುಗಳಲ್ಲಿ ಮುಖ್ಯವಾದವು

1. ಪ್ರವೇಶ ದ್ವಾರ,
2. ಮಾಹಿತಿ ಪ್ರವೇಶ ಭಾಗ,
3. ದೃಷ್ಟಿಪಥ ಪ್ರದೇಶ,
4. ರಂಗಭೂಮಿ ಅಥವಾ ಚಿತ್ರಮಂದಿರ,
5. ಶಿಲ್ಪಕಲೆಯ ಅಂಗಳ,
6. ಮಕ್ಕಳ ಆಟದ ಪ್ರದೇಶ ಮತ್ತು ಉದ್ಯಾನವನವನ್ನು ಮಾಡಲಾಗಿತ್ತು.

ಈ ಕಾಮಗಾರಿಗಳು ಪೂರ್ಣಗೊಂಡರು ಸಾರ್ವಜನಿಕರ ಉಪಯೋಗಕ್ಕಾಗಿ ಅವಶ್ಯವಾದ ಎರಡನೇ ಹಂತದಲ್ಲಿ ಉಳಿದ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ.

1. ಕಾರಗೃಹದಗೋಡೆ ಮತ್ತು ಮುಂಭಾಗದ ಅಂಗಳ,
2. ಮಕ್ಕಳ ಆಟಕ ಪ್ರದೇಶ, ಭಾವರೂಪದ ಗೋಡೆ ಮತ್ತು ನೀರಿನ ಚಿಲುಮೆ ಮತ್ತು ಇತರೆ ಕಾಮಗಾರಿಗಳು,
3. ಜನಗಳ ಅಂಗಳ, ಟವರ್ ಫ್ಲೋರಿಂಗ್ ಮತ್ತು ಬೆಂಚುಗಳು,
4. ಜನಗಳಿಗೆ ಜಾಗಿಂಗ್ ಪಾತ್,
5. ಶಿಲ್ಪ ಕಲೆಯ ಅಂಗಳ ಮತ್ತು,
6. ಕ್ಲಾಡಿಂಗ್, ನೇಣುಗಂಬ ಮತ್ತು ಕುಡಿಯುವ ನೀರಿನ ಚಿಲುಮೆ ಮತ್ತು ಸೆಲ್‌ಯಾರ್ಡಿನ ಛಾವಣಿ,
7. ಚಿತ್ರ ಮಂದಿರ ಒಳಭಾಗದ ಕೆಲಸಗಳು (ಆಡಿಯೋ, ವಿಡಿಯೋ, ಆಸನಗಳು ಮತ್ತು,
8. ವಿದ್ಯುಚ್ಛಕ್ತಿ ಕೆಲಸಗಳು,
9. ಆಸ್ಪತ್ರೆಯನ್ನು ರೆಸ್ಟೋರೆಂಟ್, ಪುಸ್ತಕ ಮಂದಿರ, ಟ್ರಪಿಜೊಡಿಯಲ್ ಫ್ಲೇಟ್, ಟ್ರಪಿಜೊಡಿಯಲ್ ಕೋರ್ಟ್ ಆಗಿ ಪರಿವರ್ತಿಸುವ ಕಾಮಗಾರಿ ಹಾಗೂ ಇನ್ನೂ ಅನೇಕ ಕಾಮಗಾರಿಗಳನ್ನು ವಿನ್ಯಾಸಗಾರರ ಸಲಹೆಯಂತೆ ಅಂದಾಜು ಪಟ್ಟಿಗಳನ್ನು ತಯಾರಿಸಿ ಅನುಮೋದನೆಯಾದ ನಂತರ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಒಟ್ಟು ವೆಚ್ಚ 2231.00 ಲಕ್ಷಗಳಾಗಿರುತ್ತವೆ.

ಎರಡನೇ ಹಂತದ ಕಾಮಗಾರಿಯ ಡಿಪಿಆರ್‌ನಲ್ಲಿ ಯೋಜನಾ ವೆಚ್ಚ ಒಟ್ಟು 101.00 ಕೋಟಿಗಳಿಗೆ ತಯಾರಿಸಿ ಅನುಮೋದನೆಗೆ ಸಲ್ಲಿಸಿರುತ್ತಾರೆ, ಆದರೆ ಎರಡನೇ ಹಂತದ ಕಾಮಗಾರಿಗೆ ಸಮಯ ಬೇಕಾಗಿರುವುದರಿಂದ ಅವಶ್ಯವಿರುವ ಕಾಮಗಾರಿಗಳನ್ನು ಮಾತ್ರ ಮಾಡಲಾಯಿತು.

ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಾರ್ವಜನಿಕರಿಗೆ ಇದುವರೆಗೂ ಉಚಿತ ಪ್ರವೇಶ ಕಲ್ಪಿಸಲಾಗಿದ್ದು ಈಗ ಸಾರ್ವಜನಿಕರಿಗೆ ಪ್ರವೇಶ ಧನ ನಿಗಧಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಹಾಗೆಯೇ ಉದ್ಯಾನವನದಲ್ಲಿರುವ ವಿವಿಧ ಸ್ಥಳಗಳನ್ನು ಸಹಾ ಬಾಡಿಗೆಯ ಆಧಾರದ ಮೇಲೆ ನೀಡಲು ಸಹ ನಿರ್ಧರಿಸಲಾಗಿದ್ದು ಮಾನ್ಯ ಆಯುಕ್ತರ ನಿರ್ದೇಶನದ ಮೇರೆಗೆ ಮತ್ತು ಲೋಕೋಪಯೋಗಿ ಇಲಾಖೆ ಮತ್ತು ಗಾಂಧಿನಗರದ ಕಾಳಿದಾಸ ರಸ್ತೆ ಮತ್ತು ಶೇಷಾದ್ರಿ ರಸ್ತೆಯ ಪ್ರದೇಶಕ್ಕೆ ಸರ್ಕಾರವು ನಿಗಧಿಗೊಳಿಸಿರುವ

......35



ದರಗಳಂತೆ ಮತ್ತು ನೀರು, ವಿದ್ಯುಚ್ಛಕ್ತಿ ದರಗಳ ಸೆಸ್ ಆಧರಿಸಿ ದಿನಂಪ್ರತಿ ದರಗಳನ್ನು ತಯಾರಿಸಿ ನಿಗಧಿಪಡಿಸಲಾಗಿದೆ ಹಾಗೂ ಅವುಗಳ ವಿವರಗಳನ್ನು ತಯಾರಿಸಿ ಲಗತ್ತಿಸಲಾಗಿದೆ.

1. ಜನಗಳ ಅಂಗಳ ಪ್ರದೇಶ ರೂ. 85522/–
2. ಶಿಲ್ಪಕಲೆಯ ಅಂಗಳ ರೂ. 21046/–
3. ಬುಕ್ ಮ್ಯೂಸಿಯಂ ಮತ್ತು ರೆಸ್ಟೋರೆಂಟ್ ರೂ. 20918/–
4. ಚಿತ್ರಮಂದಿರ (65 ಆಸನಗಳು) ರೂ.11000/–
5. ಬಯಲು ರಂಗ ಮಂದಿರ (250 ಆಸನಗಳು) ರೂ. 15222/–
6. ರ್‍ಯಾಲಿ ಪ್ರದೇಶ (5ಎಕರೆ ಪ್ರದೇಶ) ರೂ. 10380/–
1. ಉದ್ಯಾನವನಕ್ಕೆ ಪ್ರವೇಶ ಶುಲ್ಕ ರೂ. 10/–
2. ಚಿತ್ರಮಂದಿರಕ್ಕೆ ಪ್ರವೇಶ ಶುಲ್ಕ ರೂ. 20/– ತಯಾರಿಸಿ ನಿಗದಿ ಪಡಿಸಲಾಗಿದ್ದು ಅಂತಿಮವಾಗಿ ದಿನಾಂಕ 16–11–2010ರಂದು ವಿಶೇಷ ಆಯುಕ್ತರು ಚಿತ್ರಮಂದಿರವನ್ನು ವೀಕ್ಷಿಸಿ ಬಾಡಿಗೆ ಆಧಾರದ ಮೇಲೆ ನೀಡಲು ಒಪ್ಪಿದ್ದು ಚಿತ್ರಮಂದಿರದಲ್ಲಿ ಸಾಕ್ಷ್ಯಚಿತ್ರ ಮತ್ತು ಕಿರುಚಿತ್ರಗಳನ್ನು ಪ್ರದರ್ಶಿಸಲು ಅನುಮತಿ ನೀಡಲು ಒಪ್ಪಿದ್ದಾರೆ. ಅದರಂತೆ 20/– ರೂಗಳನ್ನು ನಿಗದಿಪಡಿಸಲು ಸೂಚಿಸಿದ್ದಾರೆ

**ಅಂತಿಮವಾಗಿ ಈ ಕೆಳಕಂಡ ದರಗಳನ್ನು ನಿಗಧಿಗೊಳಿಸಿದೆ.**

1. ಉದ್ಯಾನವನಕ್ಕೆ ಪ್ರವೇಶ ಶುಲ್ಕ ರೂ. 10/–
2. ಚಿತ್ರಮಂದಿರಕ್ಕೆ ಪ್ರವೇಶ ಶುಲ್ಕ ರೂ. 20/–
3. ಬಯಲು ರಂಗ ಮಂದಿರದ ಒಂದು ದಿನದ ಬಾಡಿಗೆ ರೂ. 15000/–
4. ರ್‍ಯಾಲಿ ಪ್ರದೇಶ (5ಎಕರೆ ಪ್ರದೇಶ) ರೂ. 10500/–
5. ಶಿಲ್ಪಕಲೆಯ ಅಂಗಳ ರೂ. 21000/–
6. ಮಾಹಿತಿ ಮೊಗಸಾಲೆ ರೂ. 5000/–

ಆಯುಕ್ತರವರಿಂದ ದಿನಾಂಕ 29–11–2010ರಂದು ಅನುಮೋದಿಸಲ್ಪಟ್ಟಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 10–01–2011ರ ಟಿಪ್ಪಣಿಯನ್ನು ಒಪ್ಪಿದೆ.**

## 23]. ವಿಷಯದ ಸಂಖ್ಯೆ :–ತೆಆಸ್ಥಾಸ/166/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)85/10–11, ದಿನಾಂಕ: 06–01–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ವುಮನ್ ಫಾರ್ ವುಮೆನ್ ಫೋರಂ, ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ದಿ: 29–11–2010 ರಂದು ನಗರದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ತಮ್ಮ ಸಂಸ್ಥೆಯಿಂದ ನಡೆಸುತ್ತಿರುವುದಾಗಿ ತಿಳಿಸಿ, ಸಮಾರಂಭ ನಡೆಸುವ ಸ್ಥಳಕ್ಕೆ "ಶ್ರೀಮತಿ ಜಯದೇವತಾಯಿ ಲಿಗಾಡೆ" ರವರ ಹೆಸರನ್ನು ಇಡಲಾಗುವುದೆಂದು ರಾಜ್ಯದ ವಿವಿಧ ಕಡೆಯಿಂದ ಬರುವ ಗಣ್ಯರು ರಾಜ್ಯದಲ್ಲಿ ಅದರಲ್ಲೂ ಮಹಿಳೆಯರ ಸರ್ವಾಂಗೀಣ ಅಭ್ಯುದಯ ಹಾಗೂ ಪ್ರಸ್ತುತ ಪರಿಸ್ಥಿತಿಯಲ್ಲಿ ಮಹಿಳೆಯರ ಪಾತ್ರದ ಕುರಿತು ಚರ್ಚಾಗೋಷ್ಠಿ ಹಾಗೂ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿ, ಈಗಾಗಲೇ ರಾಜರಾಮ್ ಮೋಹನ್ ರಾಯ್ ಜಯಂತಿ, ಕಸ್ತೂರಬಾ ಜಯಂತಿ, ಯಶೋದರಾ ದಾಸಪ್ಪ ಜಯಂತಿ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ನಡೆಸಿ ಮಹಿಳಿಯರಿಗೆ ಸನ್ಮಾನ ಮಾಡಿರುವುದಾಗಿ ತಿಳಿಸಿ, ಇಂತಹ ಕಾರ್ಯಕ್ರಮಕ್ಕೆ ಅಪಾರ ವೆಚ್ಚ ಆಗುವುದರಿಂದ ಪಾಲಿಕೆ ವತಿಯಿಂದ ಕೊನೆಯಪಕ್ಷ ರೂ. 2,00,000/– (ಎರಡು ಲಕ್ಷ ರೂಪಾಯಿಗಳು) ಸಹಾಯ ಧನ ನೀಡಬೇಕೆಂದು ವಿನಂತಿಸುತ್ತೇವೆ. ತಮ್ಮ ಸಂಸ್ಥೆಯ ಕಾರ್ಯಕ್ರಮ ಒಂದಕ್ಕೆ ಮಹಾತ್ಮ ಗಾಂಧೀಜಿಯವರ ಮೊಮ್ಮಗಳು ಶ್ರೀಮತಿ ಸುಮಿತ್ರಾ ಗಾಂಧೀಜಿ ಕುಲಕರ್ಣಿಯವರು ಭಾಗವಹಿಸಿದ್ದರೆಂದು, ಯಶೋಧರ ದಾಸಪ್ಪನವರ ಸೊಸೆಯಾದ ಸರೋಜಮ್ಮ ತುಳಸಿದಾಸ್ ಮತ್ತು ಸುಮಂಗಲ ಸೇವಾಶ್ರಮದ ರುವಾರಿಗಳಾದ ಅಮ್ಮ ಸುಶೀಲಮ್ಮನವರು ತಮ್ಮ ಸಂಸ್ಥೆಗೆ ಸಲಹೆಗಾರರೆಂದು ತಿಳಿಸಿರುತ್ತಾರೆ.

......36

ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಸದರಿ ಸಂಸ್ಥೆಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– (ಹತ್ತು ಸಾವಿರಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 06–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.40,000–00ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

## 24]. ವಿಷಯದ ಸಂಖ್ಯೆ :–ತೆಆಸ್ಥಾಸ/167/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)73/10–11 ದಿನಾಂಕ:06–01–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಜಿ. ಸುಬ್ರಮಣ್ಯನ್, ಅಧ್ಯಕ್ಷರು, ನಟಸಂಗಮ ವೈದ್ಯಕೀಯ ಶಿಬಿರ ಮತ್ತು ಸಮಾಜ ಸೇವಾ ಟ್ರಸ್ಟ್ (ರಿ), ನಂ. 20/1, ಮೊದಲನೇ ಮಹಡಿ, ವಿ.ಆರ್. ಡಿಜಿಟಲ್ ಸ್ಟುಡಿಯೋ, ಮಂಜುನಾಥ ನಗರ, ಮಾಗಡಿ ರಸ್ತೆ, ಬೆಂಗಳೂರು – 23. ಇವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಬೆಂಗಳೂರಿನ ನಟ ಸಂಗಮ ವೈದ್ಯಕೀಯ ಶಿಬಿರ ಮತ್ತು ಸಮಾಜ ಸೇವಾ ಟ್ರಸ್ಟ್ ವತಿಯಿಂದ 2009–10ನೇ ಸಾಲಿನಲ್ಲಿ ಸಾರ್ವಜನಿಕರಿಗಾಗಿ ಏರ್ಪಡಿಸಲಾಗಿದ್ದ ನೇತ್ರ ಶಸ್ತ್ರ ಚಿಕಿತ್ಸೆಗಾಗಿ ಅನುದಾನ ಬಿಡುಗಡೆ ಮಾಡುವಂತೆ ಕೋರಲಾಗಿದ್ದ ಮೇರೆಗೆ, ಅಪರ ಆಯುಕ್ತರು (ಕಲ್ಯಾಣ) ರವರ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ದಿನಾಂಕ 08–04–2010 ರಲ್ಲಿ ರೂ. 10,000/– ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಸಂಬಂಧದಲ್ಲಿ ಉಳಿದ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಶ್ರೀ ಹೆಚ್. ರವೀಂದ್ರ, ಅಧ್ಯಕ್ಷರು, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ನಟಸಂಗಮ ವೈದ್ಯಕೀಯ ಶಿಬಿರ ಮತ್ತು ಸಮಾಜ ಸೇವಾ ಟ್ರಸ್ಟ್ (ರಿ) ವತಿಯಿಂದ 2009–10 ನೇ ಸಾಲಿನಲ್ಲಿ 100 ವಾರ್ಡ್‌ಗಳ ನಾನಾ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಹಾಗೂ ಆರೋಗ್ಯ ತಪಾಸಣೆ ಶಿಬಿರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದು, ಈ ಸಂಬಂಧವಾಗಿ ಬಹಳಷ್ಟು ಹಣ ವ್ಯಯಿಸಲಾಗಿದ್ದು, ತತ್ಸಂಬಂಧ ಪಾಲಿಕೆಯ ಪೂಜ್ಯ ಮಹಾಪೌರರ ನಿಧಿಯಿಂದ ರೂ. 1,00,000/– ಗಳ ಅನುದಾನವನ್ನು ಬಿಡುಗಡೆ ಮಾಡಿಸಿಕೊಡುವಂತೆ ಮನವಿಯಲ್ಲಿ ಕೋರಿ ಕೊಂಡಿರುತ್ತಾರೆಂದು, ಸದರಿ ಸಂಸ್ಥೆಯವರು ಸಲ್ಲಿಸಿರುವ ಹಲವಾರು ಜನಪರ ಕಾರ್ಯಕ್ರಮಗಳನ್ನು ಪರಿಗಣಿಸಿ ಸಂಸ್ಥೆಗೆ ಉತ್ತೇಜನ ನೀಡುವ ಸಲುವಾಗಿ ಪೂಜ್ಯ ಮಹಾಪೌರರ ವೈದ್ಯಕೀಯ ನಿಧಿಯಿಂದ ರೂ. 1,00,000/– ಗಳನ್ನು ಮಂಜೂರು ಮಾಡಿ ಮೇಲ್ಕಂಡ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವಂತೆ ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– (ಹತ್ತು ಸಾವಿರಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 06–01–2011ರ ಟಿಪ್ಪಣಿಯನ್ನು ಒಪ್ಪಿದೆ.**

## 25]. ವಿಷಯದ ಸಂಖ್ಯೆ :–ತೆಆಸ್ಥಾಸ/168/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)106/10–11, ದಿನಾಂಕ: 13–01–2011ರಲ್ಲಿ ವಿವರಿಸಿರುವಂತೆ, ಡಾ॥ ಅಶ್ವಥ ನಾರಾಯಣನ್ ಸಿ. ಎನ್. ಶಾಸಕರು ಮಲ್ಲೇಶ್ವರಂ ಕ್ಷೇತ್ರ, ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಶ್ರೀ ಟಿ. ಕಲ್ಲಪ್ಪ ರವರು ಟೆನಿಸ್ ಕ್ರೀಡೆಯ ಅತ್ಯುತ್ತಮ ವಿಕಲಚೇತನ ಕ್ರೀಡಾ ಪ್ರತಿಭೆಯಾಗಿದ್ದು, ಡಿಸೆಂಬರ್ 2010 ರ 3ನೇ ದಿನಾಂಕದಿಂದ 8ನೇ ದಿನಾಂಕದವರೆಗೆ ಬೀಜಿಂಗ್ ನಲ್ಲಿ ನಡೆಯಲಿರುವ "ITTF Para Table Tennis China Open Championship 2010" ಗೆ ಆಯ್ಕೆಯಾಗಿರುದ್ದು, ಸದರಿಯವರು ಆರ್ಥಿಕವಾಗಿ ದುರ್ಬಲರಾಗಿದ್ದು, ಸದರಿ ಪ್ರಯಾಣದ ಖರ್ಚು ವೆಚ್ಚಗಳನ್ನು ಭರಿಸಲು ಅಶಕ್ತರಾಗಿರುವುದರಿಂದ, ಪಾಲಿಕೆ ವತಿಯಿಂದ ದಯಮಾಡಿ ಅಂದಾಜಿಸಲಾಗಿರುವ ಅಂದಾಜು ವೆಚ್ಚ ರೂ. 71,500 ರಲ್ಲಿ ಹೆಚ್ಚಿನ ಮೊತ್ತದ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆ,

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕ್ರೀಡಾಪಟುವಿಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 13–01–2011ರ ಟಿಪ್ಪಣಿಯನ್ನು ಒಪ್ಪುತ್ತಾ ರೂ.10,000–00 ಅನುದಾನ ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/169/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)100/10–11, ದಿನಾಂಕ: 11–01–2011ರಲ್ಲಿ ವಿವರಿಸಿರುವಂತೆ, ಶ್ರೀ ಹಾ.ಮೂ. ರಾಮಕೃಷ್ಣ, ಕಾರ್ಯದರ್ಶಿ, ಕನ್ನಡ ಯುವಕ ಸಂಘ (ರಿ), ಆಡುಗೋಡಿ, ಬೆಂಗಳೂರು – 560 030. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘವು 1967 ರಲ್ಲಿ ಪ್ರಾರಂಭಗೊಂಡು ಅಂದಿನಿಂದ ಇಂದಿನವರೆವಿಗೂ ಸ್ವಂತ ಕಟ್ಟಡದಲ್ಲಿ (ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಡೆದ ನಿವೇಶನದಲ್ಲಿ) ಉಚಿತ ವಾಚನಾಲಯ, ಪುಸ್ತಕ ಭಂಡಾರ, ಸಾಂಸ್ಕೃತಿಕ ಕಾರ್ಯಕ್ರಮಗಳು, ಬಡ ವಿದ್ಯಾರ್ಥಿಗಳಿಗಾಗಿ ಉಚಿತ ಪಠ್ಯ ಪುಸ್ತಕ ಯೋಜನೆ ಹಾಗೂ ಹೆಚ್ಚಿನ ತರಬೇತಿ ಶಿಬಿರ, ರಾಜ್ಯ ಮಟ್ಟದ ಕ್ರೀಡಾ ಚಟುವಟಿಕೆಗಳು, ನಾಡನುಡಿ ಪ್ರಗತಿಗಾಗಿ ಶ್ರಮಿಸಿದ ಸಾಹಿತಿಗಳು, ಕಲಾವಿದರು, ಸಮಾಜ ಸೇವೆ ಮಾಡಿದ ಗಣ್ಯರನ್ನು ಸನ್ಮಾನಿಸುತ್ತಾ ಜನರ ಮೆಚ್ಚಿಗೆ ಗಳಿಸಿ ಮುನ್ನಡೆಯುತ್ತಿರುವುದಾಗಿ ತಿಳಿಸಿ, ಪ್ರಸಕ್ತ ಸಾಲಿನಲ್ಲಿ ಸಂಘವು ಹಲವಾರು ಜನಪರ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಉತ್ಸಾಹಕವಾಗಿದ್ದು, ವಾಚನಾಲಯ ಮತ್ತು ಗ್ರಂಥಾಲಯದ ಅಭಿವೃದ್ಧಿ ಜೊತೆಗೆ ಉಚಿತ ಸಂಗೀತ ತರಗತಿಗಳು, ಭರತನಾಟ್ಯ ತರಗತಿಗಳು, ಕನ್ನಡ ಕಲಿಕೆಯ ತರಗತಿಗಳು, ಧ್ಯಾನ (ಮೆಡಿಟೇಷನ್) ನಡೆಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದ್ದು, ಈ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಸಾರ್ವಜನಿಕರ ಶ್ರೇಯೋಭಿವೃದ್ಧಿಗಾಗಿ

ಶ್ರಮಿಸಲು ಹೆಚ್ಚಿನ ಹಣದ ಅವಶ್ಯಕತೆ ಇರುವುದರಿಂದ ಪಾಲಿಕೆ ವತಿಯಿಂದ ದಯಮಾಡಿ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿ ಪ್ರೋತ್ಸಾಹಿಸಿ, ಸಂಘವು ಇನ್ನಷ್ಟು ಪ್ರಗತಿ ಹೊಂದಲು ಸಹಕರಿಸಬೇಕೆಂದು ಕೋರಿರುತ್ತಾರೆ.

.....38



ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– (ಹತ್ತು ಸಾವಿರಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 11–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.25,000–00 ಅನುದಾನ ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.**

## 27]. ವಿಷಯದ ಸಂಖ್ಯೆ :–ತೆಆಸ್ಥಾಸ/170/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)87/10–11 ದಿನಾಂಕ : 13–01–2011ರಲ್ಲಿ ವಿವರಿಸಿರುವಂತೆ, ಡಾ॥ ಸಿ. ಎನ್. ಅಶ್ವತ್ ನಾರಾಯಣ್, ಶಾಸಕರು, ಮಲ್ಲೇಶ್ವರಂ ಕ್ಷೇತ್ರ, ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ "ಸಂಗೀತ ಸಂಭ್ರಮ" ವು ಕಳೆದ 36 ವರ್ಷಗಳಿಂದ ಬೆಂಗಳೂರಿನಲ್ಲಿ ಭಾರತೀಯ ಕಲೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಗಾಯಕಿ ಶ್ರೀಮತಿ ಪಿ. ರಮಾ ರವರಿಂದ ನಿರ್ದೇಶಿಸಲ್ಪಡುತ್ತಿದ್ದು, ಕಲಾ ಉತ್ಸವವು ಇಂದಿನ ಯುವ ಪೀಳಿಗೆಯ ಕಲಾ ಪ್ರೌಢಿಮೆಯನ್ನು ಉತ್ತೇಜಿಸಲು ಬದ್ಧವಾಗಿದ್ದು, ಕಲಾರಸಿಕರಿಗೆ ಸಂಗೀತದ ರಸದೌತಣವನ್ನು ಉಣಬಡಿಸುತ್ತಿದೆಯೆಂದು, ಸಂಗೀತ ಸಂಭ್ರಮವು ತನ್ನ 11ನೇ ವರ್ಷದ ವಾರ್ಷಿಕೋತ್ಸವವನ್ನು "ನರಂತರಮ್" – ಫೆಬ್ರವರಿ 2011 ರ ದಿನಾಂಕ 6 ರಿಂದ 11 ರವರೆಗೆ ನಡೆಸಲು ಉದ್ದೇಶಿಸಲಾಗಿದ್ದು, ದೇಶದ ಶ್ರೇಷ್ಠ ಕಲಾವಿದರುಗಳು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿ, ಈ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ರೂ. 20,90,000/– ರಷ್ಟು ವೆಚ್ಚವಾಗುವುದಾಗಿ ಅಂದಾಜಿಸಿರುತ್ತಾರೆ. ಆದುದರಿಂದ, ಪಾಲಿಕೆ ವತಿಯಿಂದ ಗರಿಷ್ಠ ಮೊತ್ತದ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆ.

ಮಾನ್ಯ ಶಾಸಕರು ತಮ್ಮ ಪತ್ರದೊಂದಿಗೆ ಜಿ. ಮಂಜುನಾಥ್ ರಾಜು ಸದಸ್ಯರು, ವಾರ್ಡ್ –65 ರವರು ಸಹ ಸದರಿ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಧನ ಸಹಾಯ ಮಂಜೂರು ಮಾಡಲು ಕೋರಿರುವ ಪತ್ರದ ಪ್ರತಿಯನ್ನು ಲಗತ್ತಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ

ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ನಿಯಮಾನುಸಾರ ರೂ. 10,000/-(ಹತ್ತು ಸಾವಿರಗಳು) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 13-01-2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.2.00ಲಕ್ಷ ಅನುದಾನ ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

.....39



## 28]. ವಿಷಯದ ಸಂಖ್ಯೆ :-ತೆಆಸ್ಥಾಸ/171/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್‌ಆರ್(4)113/10-11ದಿನಾಂಕ : 13-01-2011ರಲ್ಲಿ ವಿವರಿಸಿರುವಂತೆ, ಶ್ರೀ ಪುಟ್ಟ ರಾಮರಾಧ್ಯ, ಕಾರ್ಯದರ್ಶಿ ಶ್ರೀ ಶಾರದಾ ಮಾತಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ದತ್ತಿ (ರಿ), ನಂ. 1 4ನೇ ಅಡ್ಡರಸ್ತೆ, ರಾಮಕ್ಕ ಬ್ಲಾಕ್, ಮುದ್ದಮ್ಮ ಗಾರ್ಡನ್ ಬಡಾವಣೆ, ಬೆನ್ ಸನ್ ಟೌನ್ ಅಂಚೆ, ಬೆಂಗಳೂರು – 46. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯು ಕಳೆದ ಸುಮಾರು 10 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ಬುದ್ಧಿ ಮಾಂದ್ಯ ಮಕ್ಕಳ ಶಾಲೆಯನ್ನು ನಿರ್ದೇಶಕರು ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಿಂದ ಅನುಮತಿ ಪಡೆದು ನಡೆಸುತ್ತಿರುವ್ಯದಾಗಿ ತಿಳಿಸಿರುತ್ತಾರೆ. ತಮ್ಮ ಶಾಲೆಗೆ ಕೇಂದ್ರ ಸರ್ಕಾರದಿಂದಾಗಲೀ ಅಥವಾ ರಾಜ್ಯ ಸರ್ಕಾರದಿಂದಾಗಲೀ ಅನುದಾನ ಸಿಕ್ಕಿರುವುದಿಲ್ಲವೆಂದು, 2008-09 ನೇ ಸಾಲಿನಲ್ಲಿ 25 ಸಾವಿರ ರುಪಾಯಿಗಳನ್ನು ಪಾಲಿಕೆ ವತಿಯಿಂದ ಪಡೆದಿರುವುದಾಗಿ ತಿಳಿಸಿರುತ್ತಾರೆ. 2009-10 ನೇ ಸಾಲಿನಲ್ಲಿ ಯಾವುದೇ ಸಹಾಯ ಧನ ದೊರಕಿರುವುದಿಲ್ಲವೆಂದು, ಹಾಗೂ ತಮ್ಮ ಶಾಲೆಗೆ ಪ್ರತಿನಿತ್ಯ ಇಂತಹ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದು, ಬಡವರು ಮತ್ತು ಹಿಂದುಳಿದ ವರ್ಗದ ಮಕ್ಕಳೇ ಹೆಚ್ಚಾಗಿರುವುದರಿಂದ ಇಂತಹ ಮಕ್ಕಳಿಂದ ಯಾವುದೇ ರೀತಿಯ ವಂತಿಕೆಯನ್ನು ಪಡೆಯುವುದಿಲ್ಲವೆಂದು ಮಕ್ಕಳಿಗೆ ಅವಶ್ಯಕವಾಗಿ ಬೇಕಾಗಿರುವ ಯೂನಿಫಾರಂ, ಪುಸ್ತಕ ನೋಟ್ ಬುಕ್‌ಗಳನ್ನು ಸಂಸ್ಥೆಯೇ ಭರಿಸುತ್ತಿರುವುದರಿಂದ ಇಂತಹ ಮಕ್ಕಳ ಶಾಲೆಯನ್ನು ನಡೆಸುವುದು ತುಂಬಾ ಕಷ್ಟಕರವಾಗಿರುವುದರಿಂದ ಪಾಲಿಕೆ ವತಿಯಿಂದ ಪೂರ್ಣಪ್ರಮಾಣದ ಅನುದಾನ ಅಥವಾ ಸಹಾಯಧನ ಕೊಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 13-01-2011ರ ಟಿಪ್ಪಣಿಯನ್ನು ಒಪ್ಪುತ್ತಾ ರೂ.ಒಂದು ಲಕ್ಷ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.**

## 29]. ವಿಷಯದ ಸಂಖ್ಯೆ :-ತೆಆಸ್ಥಾಸ/172/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)112/10-11, ದಿನಾಂಕ:13-01-2011ರಲ್ಲಿ ವಿವರಿಸಿರುವಂತೆ, ಡಾ॥ ಜಯಕೀರ್ತಿ, ಅಧ್ಯಕ್ಷರು. ಕರ್ನಾಟಕ ಕ್ಯಾನ್ಸರ್ ಸೊಸೈಟಿ (ರಿ), ನಂ. 1308, 11ನೇ 'ಬಿ' ಕ್ರಾಸ್ ವಯ್ಯಾಲಿ ಕಾವಲ್, ಮಲ್ಲೇಶ್ವರಂ, ಬೆಂಗಳೂರು – 560003. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕರ್ನಾಟಕ ಕ್ಯಾನ್ಸರ್ ಸೊಸೈಟಿಯು ಪಾಲಿಕೆಯು 51 ವರ್ಷಗಳು ಭೋಗ್ಯಕ್ಕೆ ಕೊಟ್ಟಿರುವ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಭೋಗ್ಯದ ಅವಧಿಯು 1977 ರಿಂದ 2026ರ ವರೆಗೆ ಇದೆ. ಈ ಜಾಗದಲ್ಲಿ ಒಂದು ಕಟ್ಟಡವನ್ನು ತಾವು ನಿರ್ಮಿಸಿದ್ದು, ಈ ಕಟ್ಟಡದ ನಿರ್ಮಾಣಕ್ಕೆ 50 ಸಾವಿರ ರೂ.ಗಳ ಅನುದಾನವನ್ನು ಕೂಡ ಬೆಂಗಳೂರು ಮಹಾನಗರ ಪಾಲಿಕೆಯು ನೀಡಿದ್ದು, ತದನಂತರ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಯಾವ ಸಹಾಯಧನವನ್ನು ಪಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಸಮಸ್ಯೆಗಳು, ಕ್ಯಾನ್ಸರ್ ರೋಗದ ಪತ್ತೆ, ಹೆಚ್ಚುವಿಕೆ, ನಿಯಂತ್ರಣಕ್ಕೆ ಮತ್ತು ಸಾರ್ವಜನಿಕರಿಗೆ ಈ ರೋಗವು ಬಾರದಂತೆ ಎಚ್ಚರ ವಹಿಸಬೇಕಾದ ಬಗ್ಗೆ ತಿಳುವಳಿಕೆ ಮತ್ತು ಕ್ಯಾನ್ಸರ್ ರೋಗವು ಬರುವಾಗ ಕಾಣಿಸುವ ಪ್ರಾರಂಭಿಕ

.....40



ಲಕ್ಷಣಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಕಾರ್ಯಕ್ರಮಗಳನ್ನು ತಮ್ಮ ಸೊಸೈಟಿಯಿಂದ ಹಮ್ಮಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಹೆಚ್ಚಿನ ರೀತಿಯಲ್ಲಿ ಕಾರ್ಯನಿರ್ವಹಿಸಲು ಹಣಕಾಸಿನ ಕೊರತೆ ಇರುತ್ತದೆಂದು, ಆದುದರಿಂದ ಪ್ರತಿ ವರ್ಷವೂ ಕರ್ನಾಟಕ ಕ್ಯಾನ್ಸರ್ ಸೊಸೈಟಿಗೆ 25 ಲಕ್ಷ ರೂ.ಗಳ ಅನುದಾನವನ್ನು ಗ್ರಾಂಟ್ ಇನ್ ಏಡ್ ರೂಪದಲ್ಲಿ ಕೊಡಬೇಕೆಂದು ಹಾಗೂ ಕ್ಯಾನ್ಸರ್ ರೋಗದ ಪತ್ತೆ ಹಚ್ಚುವಿಕೆ ಮತ್ತು ನಿಯಂತ್ರಣಕ್ಕೆ ನೆರವಾಗಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗದಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (25) ರಲ್ಲಿ ಕರ್ನಾಟಕ ಕ್ಯಾನ್ಸರ್ ಸೊಸೈಟಿ ರವರಿಗೆ ನಿಗದಿ ಪಡಿಸಲಾಗಿರುವ ರೂ. 10.00 ಲಕ್ಷಗಳ (ಹತ್ತು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 13-01-2011ರ ಟಿಪ್ಪಣಿಯನ್ನು ಒಪ್ಪಿದೆ.**

## 30]. ವಿಷಯದ ಸಂಖ್ಯೆ :-ತೆಆಸ್ಥಾಸ/173/2010-11

ಆಯುಕ್ತರವರ ಟಿಪ್ಪಣಿ ದಿನಾಂಕ : 11-01-2011ರಲ್ಲಿ ವಿವರಿಸಿರುವಂತೆ, ಜಯ ಪ್ರಕಾಶ್ ನಾರಾಯಣ್ ಉದ್ಯಾನವನದಲ್ಲಿ (ಜೆ.ಪಿ.ಉದ್ಯಾನವನ) ಇತ್ತೀಚಿಗೆ ದಕ್ಷಿಣ ಭಾರತದಲ್ಲಿಯೇ ಅತಿದೊಡ್ಡ ಆತ್ಯಾಧುನಿಕ ಸಂಗೀತ ನೃತ್ಯ ಕಾರಂಜಿಯ ಕಾಮಗಾರಿಯು ಕೆಲ ದಿನಗಳಲ್ಲಿ ಮುಕ್ತಾಯಗೊಳ್ಳುವುದರಿಂದ, ಉದ್ಘಾಟನೆಯ ನಂತರ ಸಂಗೀತ ನೃತ್ಯ ಕಾರಂಜಿಯ ವೀಕ್ಷಣೆಗಾಗಿ ಹೆಚ್ಚು ಸಾರ್ವಜನಿಕರು ಆಗಮಿಸುವ ನಿರೀಕ್ಷೆ ಇರುವುದರಿಂದ ಪ್ರವೇಶ ಶುಲ್ಕ ನಿಗಧಿ ಪಡಿಸಿದಲ್ಲಿ ಪಾಲಿಕೆಗೆ ಸ್ವಲ್ಪ ಮಟ್ಟಿಗೆ ಆದಾಯ ತರುವಲ್ಲಿ ಸಹಾಕಾರಿಯಾಗುವುದರಿಂದ ಜಯಪ್ರಕಾಶ್ ನಾರಾಯಣ್ ಉದ್ಯಾನವನದ (ಜೆ.ಪಿ.ಉದ್ಯಾನವನ) ಸಂಗೀತ ಕಾರಂಜಿ ವೀಕ್ಷಣೆಯ ಪ್ರವೇಶ ಶುಲ್ಕವನ್ನು ಈ ಕೆಳಗಿನಂತೆ ನಿಗಧಿ ಪಡಿಸಬಹುದಾಗಿದೆ ಎಂದು ಅಭಿಪ್ರಾಯಿಸಿದೆ.

| ಕ್ರಮ | ವಿವರಗಳು | ಟಿಕೇಟ್ ಶುಲ್ಕ |
|---|---|---|

| ಸಂಖ್ಯೆ | | (ರೂ.ಗಳಲ್ಲಿ) |
|---|---|---|
| 01 | ಜಯಪ್ರಕಾಶ್ ನಾರಾಯಣ್ ಉದ್ಯಾನವನದ (ಜೆ.ಪಿ.ಉದ್ಯಾನವನ) ಸಂಗೀತ ಕಾರಂಜಿ ವೀಕ್ಷಣೆಯ ಪ್ರವೇಶ ಶುಲ್ಕ ಸಂಜೆ 5.00ಗಂಟೆಯ ನಂತರ (ಪ್ರತಿ ವ್ಯಕ್ತಿಗೆ) 12 ವರ್ಷ ಮೇಲ್ಪಟ್ಟವರಿಗೆ | 10.00 |
| 02 | ಮಕ್ಕಳಿಗೆ (12 ವರ್ಷ ವಯಸ್ಸಿನ ಕೆಳಗಿನ ಮಕ್ಕಳಿಗೆ) | ಉಚಿತ |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್–17ರ ಜೆ.ಪಿ ಉದ್ಯಾನವನದ ವೀಕ್ಷಣೆಗೆ ಪ್ರತಿ ದಿನ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಹಾಗೂ ಸಾರ್ವಜನಿಕರು ಆಗಮಿಸುತ್ತಿದ್ದಾರೆ. ಜಯಪ್ರಕಾಶ್ ನಾರಾಯಣ್ ಉದ್ಯಾನವನದಲ್ಲಿ (ಜೆ.ಪಿ. ಉದ್ಯಾವನ) ಇತ್ತೀಚಿಗೆ ವಿಶಾಲವಾದ ವಾಹನ ನಿಲುಗಡೆ ಸ್ಥಳವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಸ್ಥಳದಲ್ಲಿ ಹೆಚ್ಚು ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ, ಹಾಗೂ ಅವುಗಳನ್ನು ನೋಡಿಕೊಳ್ಳಲು ಯಾರು ಇಲ್ಲದಿರುವುದರಿಂದ ವಾಹನಗಳ ಕಳವು ಆಗುವ ಸಂಭವವಿರುವುದರಿಂದ. ವಾಹನ ಮಾಲೀಕರ ಹಿತದೃಷ್ಟಿಯಿಂದ ಹಾಗೂ ವಾಹನಗಳನ್ನು ಸುರಕ್ಷಿತವಾಗಿ ನೋಡಿಕೊಳ್ಳಬೇಕಾಗಿರುವುದರಿಂದ, ಸದರಿ ನಿಲ್ದಾಣದಲ್ಲಿ ನಿಲ್ಲಿಸುವ ವಾಹನಗಳಿಗೆ ವಾಹನ ನಿಲುಗಡೆ ಶುಲ್ಕವನ್ನು ವಿಧಿಸುವುದು ಸೂಕ್ತವಾಗಿದೆ ಎಂದು ಅಭಿಪ್ರಾಯಿಸಿ ಮಾನ್ಯ ಆಯುಕ್ತರನ್ನು ಕೋರಿರುತ್ತಾರೆ. ಆದ್ದರಿಂದ ವಾಹನ ನಿಲುಗಡೆ ಶುಲ್ಕವನ್ನು ಈ ಕೆಳಗಿನಂತೆ ನಿಗಧಿಪಡಿಸಬಹುದಾಗಿದೆ ಎಂದು ಅಭಿಪ್ರಾಯಿಸಿದೆ.

.....41



| ಕ್ರಮ ಸಂಖ್ಯೆ | ವಿವರಗಳು | ಟಿಕೇಟ್ ಶುಲ್ಕ (ರೂ.ಗಳಲ್ಲಿ) |
|---|---|---|
| 01 | ದ್ವಿಚಕ್ರ ವಾಹನ | 2.00 |
| 02 | ಕಾರು | 5.00 |
| 03 | ಟೆಂಪೋ | 10.00 |
| 04 | ಮಿನಿ ಬಸ್ಸು | 15.00 |
| 05 | ಬಸ್ಸು | 25.00 |

**ನಿರ್ಣಯ :– ಆಯುಕ್ತರ ದಿನಾಂಕ 11–01–2011ರ ಟಿಪ್ಪಣಿಯನ್ನು ಒಪ್ಪಿದೆ.**

## 31]. ವಿಷಯದ ಸಂಖ್ಯೆ :–ತೆಆಸ್ಥಾಸ/174/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)115/10–11, ದಿನಾಂಕ:13–01–2011ರಲ್ಲಿ ವಿವರಿಸಿರುವಂತೆ, ಶ್ರೀ ಅಶ್ವಥ ನಾರಾಯಣ ಗೌಡ, ಮಾನ್ಯ ಸದಸ್ಯರು, ವಾರ್ಡ್–8 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತಮ್ಮ ವಾರ್ಡ್ ಸಂಖ್ಯೆ: 8 ರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸವಾಗಿರುವ ಶ್ರೀಮತಿ ವಾಣಿಶ್ರೀ ನಂ. 20, ಬಸವೇಶ್ವರ ನಿಲಯ, ಹೊಸಟ್ಟಿ ಬಡಾವಣೆ, ಕೊಡಿಗೇ ಹಳ್ಳಿ, ಪರಿಕ್ರಮ ಶಾಲೆಯ ಹತ್ತಿರ, ಸಹಕಾರನಗರ ಅಂಚೆ, ಬೆಂಗಳೂರು – 92 ರವರ ಮಕ್ಕಳಾದ ಕು॥ ರಮ್ಯಶ್ರೀ ಮತ್ತು ಕು॥ ನವ್ಯಶ್ರೀ ಇವರುಗಳು ಮಾರ್ಶಿಯಲ್ ಆರ್ಟ್ಸ್‌ನಲ್ಲಿ ಪರಿಣಿತರಾಗಿದ್ದು, ಇಲ್ಲಿಯವರಿಗೆ ಬಹಳಷ್ಟು ರಾಜ್ಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹಳಷ್ಟು ಚಿನ್ನದ, ಬೆಳ್ಳಿಯ ಮತ್ತು ಕಂಚಿನ ಪದಕಗಳನ್ನು ಪಡೆದಿರುತ್ತಾರೆಂದು, ಈಗ ಇಬ್ಬರು ಮಕ್ಕಳು ದಿನಾಂಕ 20–12–2010 ರಿಂದ 29–12–2010 ರವರೆಗೆ ನವದೆಹಲಿಯಲ್ಲಿ ನಡೆಯಲಿರುವ 25ನೇ ರಾಷ್ಟ್ರೀಯ ಮತ್ತು 4ನೇ ಅಂತರ ರಾಷ್ಟ್ರೀಯ ಟೇಕಾನ್–ಡೋ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದು, ಇವರುಗಳಿಗೆ ರೈಲು ಪ್ರಯಾಣ ವೆಚ್ಚ, ಪ್ರವೇಶ

ದರ, ಊಟ ಮತ್ತು ವಸತಿ ವೈದ್ಯಕೀಯ ವೆಚ್ಚ ಮತ್ತು ಸಲಕರಣೆಗಳ ವೆಚ್ಚಕ್ಕಾಗಿ ಒಬ್ಬರಿಗೆ ರೂ. 5,750/- (ಐದು ಸಾವಿರದ ಏಳು ನೂರ ಐವತ್ತು ರೂಪಾಯಿ) ಗಳು ಇಬ್ಬರಿಗೆ ಒಟ್ಟು ರೂ. 11,500/- (ಹನ್ನೊಂದು ಸಾವಿರದ ಐದು ನೂರು ರೂಪಾಯಿ) ಗಳು ಅವಶ್ಯವಿರುವುದರಿಂದ ಇದನ್ನು ಭರಿಸಲು ಬಡವರಾದ ಇವರಿಂದ ಸಾಧ್ಯವಾಗದಿರುವುದರಿಂದ ಪಾಲಿಕೆಯ ಕ್ರೀಡಾ ಅಭಿವೃದ್ಧಿ ಚಟುವಟಿಕೆಯ ಅಡಿಯಲ್ಲಿ ಹಣವನ್ನು ಮಂಜೂರು ಮಾಡಿ ಈ ವಿದ್ಯಾರ್ಥಿಗಳಿಗೆ ಕ್ರೀಡಾಭಿಮಾನಕ್ಕೆ ಪ್ರೋತ್ಸಾಹ ನೀಡಲು ಸಹಕರಿಸಬೇಕಾಗಿ ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕ್ರೀಡಾಪಟುಗಳಿಗೆ ರೂ. 10,000 (ತಲಾ ರೂ. 5,000/-) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ 13-01-2011ರ ಟಿಪ್ಪಣಿಯನ್ನು ಒಪ್ಪಿದೆ.**

.....42



## 32]. ವಿಷಯದ ಸಂಖ್ಯೆ :-ತೆಆಸ್ಥಾಸ/175/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)103/10-11ದಿನಾಂಕ : 13-01-2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ದಯಾನಂದನಗರ ವಾರ್ಡ್ ಸಂಖ್ಯೆ-97ರ ನಗರ ಪಾಲಿಕೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ಶಕೀಲ ಮುನಿರಾಜು ರವರು ತಮ್ಮ ಪತ್ರದಲ್ಲಿ ತಿಳಿಸಿರುವಂತೆ ತಮ್ಮದೇ ವಾರ್ಡ್‌ನಲ್ಲಿ ಫೆಬ್ರವರಿ ಮಾಹೆಯಲ್ಲಿ ಹಮ್ಮಿಕೊಂಡಿರುವ **ಅಂಬೇಡ್ಕರ್ ಮೆಮೋರಿಯಲ್ ಮೇಯರ್ ಕಪ್ ಕಬ್ಬಡಿ ಟೂರ್ನಮೆಂಟ್**ನ್ನು **ಕೆನಡಿ ಸ್ಪೋರ್ಟ್ಸ್ ಕ್ಲಬ್** ರವರ ಸಾರಥ್ಯದಲ್ಲಿ ನಡೆಸುತ್ತಿದ್ದು, ಸದರಿ ಸಂಸ್ಥೆಯವರು ಸಹಾಯಧನ ಕೋರಿ ಸಲ್ಲಿಸಿರುವ ಮನವಿಯನ್ನು ಪುರಸ್ಕರಿಸಿ ಈ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿಯವರಿಗೆ ನಿಯಮಾನುಸಾರ ರೂ. 10,000/- ಸಹಾಯ ಧನವನ್ನು ಮಂಜೂರು

ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 13–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.5.00ಲಕ್ಷ ಅನುದಾನವನ್ನು ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

## 33]. ವಿಷಯದ ಸಂಖ್ಯೆ :–ತೆಆಸ್ಥಾಸ/176/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)120/10–11ದಿನಾಂಕ : 18–01–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎಂ. ಕಾಶಿ, ಅಧ್ಯಕ್ಷರು ಡಾ॥ ಬಿ.ಆರ್. ಅಂಬೇಡ್ಕರ್ ಉಚಿತ ರಾತ್ರಿ ಪಾಠಶಾಲೆ (ರಿ), ನಂ. 30, 5ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಅಂಬೇಡ್ಕರ್ ನಗರ, ಶ್ರೀರಾಮ ಪುರಂ, ಬೆಂಗಳೂರು – 560021. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯ ಸಾರ್ವಜನಿಕ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿ ಸಲ್ಲಿಸಿರುವ ಸದರಿ ಸಂಘದ ಮನವಿಯನ್ನು ಪರಿಗಣಿಸಿ ರೂ. 1,20,000/– ಗಳನ್ನು ಬಿಡುಗಡೆ ಮಾಡಲು ಕೋರಿ ಶ್ರೀಮತಿ ಶಕೀಲ ಮುನಿರಾಜು, ದಯಾನಂದ ನಗರ ವಾರ್ಡ್ 97ರ ನಗರ ಪಾಲಿಕೆ ಸದಸ್ಯರು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು ಆದ ಇವರು ಪತ್ರದ ಮುಖೇನಾ ಕೋರಿರುತ್ತಾರೆಂದು ತಿಳಿಸಿ, ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76

.....43



ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000 ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 18–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.ಒಂದು ಲಕ್ಷ ಅನುದಾನ ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.**

## 34]. ವಿಷಯದ ಸಂಖ್ಯೆ :–ತೆಆಸ್ಥಾಸ/177/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)121/10–11, ದಿನಾಂಕ:18–01–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಕುವೆಂಪು ಲಲಿತ ಕಲಾ ಸಂಘ (ನೋಂ) ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನ ಸಹಾಯ ಕೋರಿ, ಪೂಜ್ಯ ಮಹಾಪೌರರಿಗೆ ಮನವಿಯನ್ನು ಸಲ್ಲಿಸಿರುವ

ಮೇರೆಗೆ ಪೂಜ್ಯ ಮಹಾಪೌರರು ಸೂಕ್ತ ಕ್ರಮ ತೆಗೆದುಕೊಳ್ಳಲು ಸಮಿತಿಗೆ ಒಕ್ಕಣೆಯನ್ನು ಬರೆದು ಕಳುಹಿಸಿರುತ್ತಾರೆಂದು ತಿಳಿಸಿ, ಕುವೆಂಪು ಲಲಿತ ಕಲಾ ಸಂಘ (ನೋಂ) ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅರ್ಹ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸ್ತಾವಿತ ಸಂಘದವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘವು ಸುಮಾರು 15 ವರ್ಷಗಳಿಂದ ಜನಪರ ಕೆಲಸಗಳನ್ನು ಮಾಡಿದ್ದು, ಶ್ರೀ ಕೃಷ್ಣ ಜನ್ಮಾಷ್ಟಮಿ, ಕುವೆಂಪು ದಿನಾಚರಣೆ, ಕನ್ನಡ ರಾಜ್ಯೋತ್ಸವವನ್ನು ಏರ್ಪಡಿಸಿ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಮಹನೀಯರವನ್ನು ಸನ್ಮಾನಿಸುವುದು, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಕ್ರೀಡಾಪಟುಗಳಿಗೆ ಬಹುಮಾನ ಹಾಗೂ ಅನೇಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿದ್ದು, ಇನ್ನ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸಂಘದ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಾಲಿಕೆ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000 ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 18–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.50,000–00 ಅನುದಾನ ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.**

## 35]. ವಿಷಯದ ಸಂಖ್ಯೆ :–ತೆಆಸ್ಥಾಸ/178/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)118/10–11 ದಿನಾಂಕ: 17–01–2011ರಲ್ಲಿ ವಿವರಿಸಿರುವಂತೆ, ಶ್ರೀ ಸಿ. ಎನ್. ಮಂಜುನಾಥ್, ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, 9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ಚಿಕಿತ್ಸೆಗಾಗಿ ಬರುವ ಬಡ ಹೃದ್ರೋಗಿಗಳ ಪ್ರಮಾಣ ದಿನೇ ದಿನೇ ಏರುತ್ತಲೇ ಇದ್ದು, ಈ ಹೃದ್ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ಕೈಗೆಟುಕುವ ದರದಲ್ಲಿ ನೀಡುವುದು ತುಂಬಾ ಕಷ್ಟಕರವಾಗಿದ್ದು, ತಮ್ಮ ಸಂಸ್ಥೆಗೆ ಬರುವ ಬಡ ಹೃದ್ರೋಗಿಗಳಲ್ಲಿ

.....44



ಬಹುಸಂಖ್ಯೆಯ ರೋಗಿಗಳು ನಗರ ಪಾಲಿಕೆಯ ವ್ಯಾಪ್ತಿಗೆ ಸೇರಿರುತ್ತಾರೆಂದು, ಇಂತಹ ರೋಗಿಗಳ ಚಿಕಿತ್ಸೆಗಾಗಿ ಪಾಲಿಕೆಯ ಆಯವ್ಯಯದಲ್ಲಿ ಪ್ರತಿ ವರ್ಷವು ತಮ್ಮ ಸಂಸ್ಥೆಗೆ ಅನುದಾನವನ್ನು ನಿಗಧಿಗೊಳಿಸುತ್ತಿದ್ದು, ಆ ಅನುದಾನವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡುತ್ತಾ ಬಂದಿರುವುದಕ್ಕೆ ಆಭಾರಿಯಾಗಿರುವುದಾಗಿ ತಿಳಿಸಿ, 2009–10ನೇ ಸಾಲಿನಲ್ಲಿ ತಮ್ಮ ಸಂಸ್ಥೆಗೆ ಮಂಜೂರಾದ ಒಟ್ಟು ಮೊತ್ತ 1.50 ಕೋಟಿಗಳಲ್ಲಿ ಒಂದು ಮತ್ತು ಎರಡನೇ ಕಂಡಿನಲ್ಲಿ ರೂ. 75.00 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಆ ಮೊತ್ತವನ್ನು ಪಾಲಿಕೆಯಲ್ಲಿ ಬರುವ ಬಡ ಹೃದ್ರೋಗಿಗಳ ಚಿಕಿತ್ಸೆಗಾಗಿ ಪೂರ್ತಿಯಾಗಿ ವೆಚ್ಚ ಮಾಡಲಾಗಿರುವುದಾಗಿ ತಿಳಿಸಿ, 2010–11ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನದ ಅಡಿಯಲ್ಲಿ ತಮ್ಮ ಸಂಸ್ಥೆಗೆ ರೂ. 75.00 ಲಕ್ಷಗಳನ್ನು ಮಂಜೂರು ಮಾಡಬೇಕೆಂದು ಹಾಗೂ ಈ ಮೊತ್ತವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (30) ರಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ರವರಿಗೆ ನಿಗಧಿ ಪಡಿಸಲಾಗಿರುವ ರೂ. 75.00 ಲಕ್ಷಗಳ (ಎಪ್ಪತ್ತೈದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ. (ದಿನಾಂಕ 17–01–2011ರ ಟಿಪ್ಪಣಿ)**

## 36]. ವಿಷಯದ ಸಂಖ್ಯೆ :–ತೆಆಸ್ಥಾಸ/179/2010–11

ಮಾನ್ಯ ಆಯುಕ್ತರವರ ಟಿಪ್ಪಣಿ ಸಂಖ್ಯೆ:ಎ3(2)/ಪಿ.ಆರ್/212/10–11 ದಿನಾಂಕ:31–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:15, ರಾಜಾಜಿನಗರ 2ನೇ ಬ್ಲಾಕ್, 19ನೇ ಮೈನ್, ನಂ.21 ಮತ್ತು 22 ನೇ ಕ್ರಾಸ್ ಮಧ್ಯದಲ್ಲಿರುವ ಸಿ.ಎ. ನಿವೇಶನದ ಉತ್ತರ ಭಾಗದಲ್ಲಿ 10X10 ಚದರ ಅಡಿಯಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಳ್ಳಲು ಶ್ರೀ. ವಿ.ಆರ್.ಕುಮಾರ್, ಗಾಯತ್ರಿ ನಗರ, ಬೆಂಗಳೂರು ಇವರಿಗೆ ಪಾಲಿಕೆಯು ದಿನಾಂಕ:17–11–1998 ರಲ್ಲಿ ಅನುಮೋದನೆ ನೀಡಿ 3 ವರ್ಷದ ಅವಧಿಗೆ ಮಾಹೇಯಾನ ರೂ.200/– ಕ್ಕೆ ಲೈಸನ್ಸ್ ಫೀ ಎಂಬುದಾಗಿ ಷರತ್ತಿನ ಅನ್ವಯ ನೀಡಲಾಗಿರುತ್ತದೆ. ಆ ಭಾಗದಲ್ಲಿ ಉದ್ಯಾನವನ ಅಭಿವೃದ್ಧಿಪಡಿಸುತ್ತಿರುವುದರಿಂದ ಬದಲಿ ಜಾಗವನ್ನು ನೀಡಲಾಗುವುದೆಂದು ದಿನಾಂಕ: 25–10–2002 ರಲ್ಲಿ ಭರವಸೆ ನೀಡಿದ್ದರೂ ಈವರೆವಿಗೂ ನನಗೆ ಬದಲಿ ಜಾಗವನ್ನು ನೀಡಿರುವುದಿಲ್ಲವೆಂದು ಅರ್ಜಿ ಸಲ್ಲಿಸಿರುತ್ತಾರೆ.

ಕಡತದಲ್ಲಿ ಲಗತ್ತಿಸಿರುವ ಪುಟ ಸಂಖ್ಯೆ 13 ರಲ್ಲಿನ ಹಿಂಬರಹದ ಅನುಸಾರ ಗುತ್ತಿಗೆ ಅವಧಿಯು 2001 ಕ್ಕೆ ಮುಕ್ತಾಯಗೊಂಡು ಮಹಾನಗರ ಪಾಲಿಕೆಯ ಇವರ ನವೀಕರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿದೆ ಎಂಬುದಾಗಿರುತ್ತದೆ.

ತದನಂತರ ಅರ್ಜಿದಾರರು ಅರ್ಜಿ ಸಲ್ಲಿಸಿ ರೇಸ್‌ಕೋರ್ಸ್ ರಸ್ತೆಯಲ್ಲಿ ಜೆ.ಡಿ.ಎಸ್. ಪಕ್ಷದ ಕಛೇರಿ ಹತ್ತಿರವಿರುವ ಭಾಗದಲ್ಲಿ 10X10 ಅಡಿ ಗುತ್ತಿಗೆಗೆ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ.

ಉಪ ಆಯುಕ್ತರು (ಆಸ್ತಿಗಳು) ರವರು ದಿನಾಂಕ:5–10–2010 ರಂದು ಸ್ಥಳ ಪರಿಶೀಲನೆ ಮಾಡಿ ಪ್ರಸ್ತುತ ಜಾಗವು ನಗರದ ಹೃದಯ ಭಾಗದಲ್ಲಿದ್ದು, ಬೆಲೆಬಾಳುವಂತಹ ಹಾಗೂ ಜನನಿಬಿಡ ಪ್ರದೇಶದಲ್ಲಿರುತ್ತದೆ.

.....45



ಕೋರಿರುವ ಸ್ಥಳದ ಅಕ್ಕಪಕ್ಕದಲ್ಲಿ ಹಾಪ್‌ಕಾಮ್ಸ್ ಮಳಿಗೆ, ಬಿ.ಬಿ.ಎಂ.ಪಿ ಸುಲಭ ಶೌಚಲಯ ಮತ್ತು ನಂದಿನಿ ಡೈರಿ ಇರುತ್ತದೆ. ಇದರ ಪಕ್ಕದಲ್ಲಿ ಲಭ್ಯವಿರುವ ಖಾಲಿ ಸ್ಥಳದಲ್ಲಿ ಗಿಡಗಳನ್ನು ಬೆಳೆಸಿದ್ದು, ಸಾರ್ವಜನಿಕ ಉದ್ದೇಶಕ್ಕೋಸ್ಕರ ಉಪಯೋಗಿಸಿಕೊಳ್ಳುವುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಅಪರ ಆಯುಕ್ತರು (ಕಲ್ಯಾಣ ಮತ್ತು ಆಸ್ತಿಗಳು) ರವರು ಈ ಪ್ರಸ್ತಾವನೆ ಮರು ಪರಿಶೀಲಿಸಲು ಸೂಚಿಸಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಅರ್ಜಿದಾರರಿಂದ ಪ್ರಮಾಣ ಪತ್ರ ಬರೆದು ಅದರಲ್ಲಿ ಅರ್ಜಿದಾರರು ನಿರುದ್ಯೋಗಿಯಾಗಿದ್ದು, ಯಾವುದೇ ವರಮಾನವಿರುವುದಿಲ್ಲ ಮತ್ತು ಅಪ್ರಾಪ್ತ ಮಕ್ಕಳಿರುತ್ತಾರೆಂದು ತಿಳಿಸುತ್ತಾ, ತಹಶೀಲ್ದಾರ್‌ರಿಂದ ಸಲ್ಲಿಸಲಾಗಿರುವ ಆದಾಯ ಪ್ರಮಾಣ ಪತ್ರದ ಪ್ರಕಾರ ವಾರ್ಷಿಕ ಆದಾಯ ರೂ.11,000/- ಇರುತ್ತದೆ.

ಕರ್ನಾಟಕ ಮುನಿಷಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ-176 ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಇ/129/ಡಿ.ಎಂ.ಡಿ./2002, ದಿನಾಂಕ: 2-6-2002 ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸರ್ಕಾರಿ ಆದೇಶ ಸಂಖ್ಯೆ:ನಇ/222/ಎಂ.ಎನ್.ವೈ/2008, ದಿನಾಂಕ: 3-9-2009 ರ ಅನುಸಾರ ಬೃಹತ್ ಬೆಂಗಳೂರು ಮಹಾಗನರ ಪಾಲಿಕೆ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಸರ್ಕಾರವೇ ಸೂಕ್ತವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇರುವ ಸಮಿತಿಯ ಸಲಹೆ ಪಡೆಯಬೇಕೆಂಬುದಾಗಿ ಇರುತ್ತದೆ.

ಒಂದು ವೇಳೆ ಗುತ್ತಿಗೆಗೆ ನೀಡಿದಲ್ಲಿ ಪ್ರಸಕ್ತ ಸಾಲಿನ ಮಾರುಕಟ್ಟೆ ದರದಲ್ಲಿ ಶೇ.10% ರಷ್ಟು ವಾರ್ಷಿಕ ದರವನ್ನು ನಿಗದಿಪಡಿಸಬಹುದಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ 3 ರಸ್ತೆಗಳ ಮಧ್ಯದಲ್ಲಿ ಬರುವ ಪ್ರದೇಶದಲ್ಲಿರುವ ಭಾಗವನ್ನು ಗುತ್ತಿಗೆಗೆ ಕೋರಲಾಗಿದ್ದು, ಮೇಲ್ಕಂಡ ಸರ್ಕಾರಿ ಆದೇಶಗಳನ್ವಯ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 31-12-2010 ರ ಟಿಪ್ಪಣಿಯನ್ನು ಒಪ್ಪುತ್ತಾ 3ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11-01-2011 ರ ನಿರ್ಣಯ

**-ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ-**

**37]. ವಿಷಯದ ಸಂಖ್ಯೆ :-ತೆಆಸ್ಥಾಸ/180/2010-11**

**ನಿರ್ಣಯ :- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು ಉಪಮಹಾಪೌರರು ಮತ್ತು ಸದಸ್ಯರುಗಳಿಗೆ ಗೌರವ ಸಂಭಾವನೆ, ವಾಹನ ಭತ್ಯೆ, ಸಭಾಭತ್ಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ ನಇ 94 ಎಂ.ಎಲ್.ಆರ್2010(ಭಾಗ) ಬೆಂಗಳೂರು ದಿನಾಂಕ 05-01-2011ರಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದರೆ 97ರ ಸರ್ಕಾರಿ ಆದೇಶದ ದಿನಾಂಕದಿಂದ 2 ತಿಂಗಳಿಗೊಮ್ಮೆ ರೂ.750/-ರಂತೆ**

.....46

**ದೂರವಾಣಿ ಭತ್ಯೆಯನ್ನು ನೀಡಲಾಗುತ್ತಿರುವುದನ್ನು, ಇದುವರೆವಿಗೂ ಪರಿಷ್ಕರಿಸದೇ ಇರುವ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರುಗಳಿಗೆ ಸ್ಥಿರ/ಸಂಚಾರಿ ದೂರವಾಣಿ ಭತ್ಯೆ ಮಾಸಿಕ ರೂ.3000/–ಗಳನ್ನು ನೀಡಲು ಪಾಲಿಕೆಯ ಸಭೆಯ ಅನುಮೋದನೆ ಕೋರಲು ಸಮಿತಿಯು ತೀರ್ಮಾನಿಸಿತು.**

## 38]. ವಿಷಯದ ಸಂಖ್ಯೆ :–ತೆಲಆಸ್ಥಾಸ/181/2010–11

ಪೂಜ್ಯ ಮಹಾಪೌರರ ಕಛೇರಿ ಟಿಪ್ಪಣಿ ಸಂಖ್ಯೆ : ಎಂ.ಪಿಎಸ್/3754/2010–11 ದಿನಾಂಕ: 07–01–2011ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ 260 ಶಿಕ್ಷಕಿಯರು, 24 ಮೇಲ್ವಿಚಾರಕರು, 3 ಹೊಲಿಗೆ ಯಂತ್ರ ದುರಸ್ಥಿಗಾರರು ಗೌರವಧನ ಆಧಾರದ ಮೇಲೆ ನೇಮಕಗೊಂಡು ಕೆಲಸ ನಿರ್ವಹಿಸುತ್ತಿದ್ದಾರೆ.

ಸದರಿ ನೌಕರರುಗಳು ಸುಮಾರು 20–22 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು. ಪ್ರಸ್ತುತ, ಶಿಕ್ಷಕಿಯರಿಗೆ ಮಾಸಿಕ ರೂ.4,000–00 ಮೇಲ್ವಿಚಾರಕರು ಮಾಸಿಕ ರೂ.4,500–00 ಹಾಗೂ ದುರಸ್ಥಿಗಾರರು ಮಾಸಿಕ ರೂ.4,250–00 ಗೌರವಧನ ನೀಡಲಾಗುತ್ತಿದ್ದು. ಇದರಿಂದ ಮಕ್ಕಳ ವಿದ್ಯಾಭ್ಯಾಸದ ವೆಚ್ಚ, ಮನೆ ಬಾಡಿಗೆ, ದಿನಸಿಗಳು, ವಿದ್ಯುತ್/ನೀರಿನ ಬಿಲ್ಲುಗಳ ಪಾವತಿ ಸೇರಿದಂತೆ ದಿನನಿತ್ಯದ ಎಲ್ಲಾ ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿದ್ದು, ಇದರಂದ ಜೀವನ ನಿಭಾಯಿಸಲು ತುಂಬಾ ಕಷ್ಟಕರವಾಗಿದ್ದು, ತಮ್ಮಗಳ ಗೌರವ ಧನವನ್ನು ರೂ10,000–00 ಗಳಿಗೆ ಹೆಚ್ಚಿಸಬೇಕೆಂದು ಸಲ್ಲಿಸಿರುವ ಸದರಿ ನೌಕರರುಗಳ ಮನವಿಯನ್ನು ಪರಿಗಣಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ತೀರ್ಮಾನಕ್ಕಾಗಿ ಕಳುಹಿಸಿರುವ ಪೂಜ್ಯ ಮಹಾಪೌರರ ಟಿಪ್ಪಣಿ.

ನಿರ್ಣಯ :–ಪ್ರಸ್ತುತ ಕಲ್ಯಾಣ ಇಲಾಖೆಯಲ್ಲಿ ಗೌರವಧನದ ಆಧಾರದ ಮೇಲೆ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ಶಿಕ್ಷಕಿಯರು, ಮೇಲ್ವಿಚಾರಕರು, ಹಾಗೂ ದುರಸ್ಥಿಗಾರರಿಗೆ ಹಾಲಿ ನೀಡುತ್ತಿರುವ ಮಾಸಿಕ ಗೌರವಧನ ಇಂದಿನ ದಿನಗಳಲ್ಲಿ ಕಡಿಮೆಯೆಂದು ಕಂಡುಬರುವುದರಿಂದ ಅವರ ಮನವಿಯನ್ನು ಮಾನವಿಯತೇಯ ದೃಷ್ಟಿಯಿಂದ ಪರಿಗಣಿಸಿ ಹಾಲಿ ಪಡೆಯುತ್ತಿರುವ ಮಾಸಿಕ ಗೌರವಧನಕ್ಕೆ ಹೆಚ್ಚುವರಿಯಾಗಿ ರೂ.2000–00 ಗಳನ್ನು ಸೇರಿಸಿ 2011–ಜನವರಿ ಮಾಹೆಯಿಂದ ಗೌರವಧನವನ್ನು ಹೊಸದಾಗಿ ನಿಗಧಿ ಪಡಿಸುವುದೆಂದು ಸಮಿತಿಯು ತಿರ್ಮಾನಿಸಲಾಯಿತು

## 39]. ವಿಷಯದ ಸಂಖ್ಯೆ :–ತೆಲಆಸ್ಥಾಸ/182/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:20–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ರಾಜರಾಜೇಶ್ವರಿನಗರ ವಲಯವು ಹೊಸದಾಗಿ ಸೇರ್ಪಡೆಯಾಗಿದ್ದು, ಸದರಿ ವಲಯದ ವಾರ್ಡ್ 129ರ ಜ್ಞಾನಭಾರತಿ ಪ್ರದೇಶವು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದು, ಈ ಪ್ರದೇಶದಲ್ಲಿ ಹೆಚ್ಚಾಗಿ ಪರಿಶಿಷ್ಟಜಾತಿ/ಪಂಗಡದ ಫಲಾನುಭವಿಗಳು ವಾಸಿಸುತ್ತಿರುತ್ತಾರೆ. ಈ ಪ್ರದೇಶದಲ್ಲಿ ಚರಂಡಿಗಳು, ರಸ್ತೆಗಳು ಇಲ್ಲದೆ ಮಳೆ ನೀರು ಮತ್ತು ಮಲಿನ ನೀರು ಹರಿಯವ ವ್ಯವಸ್ಥೆ ಇಲ್ಲದೆ ರೋಗರುಜಿನಗಳು ಹೆಚ್ಚಾಗಿ ಹರಡುತ್ತಿದ್ದು ಸ್ಥಳೀಯ ನಿವಾಸಿಗಳು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಸ್ಥಳೀಯ ಪಾಲಿಕೆ ಸದಸ್ಯರು ಇದನ್ನು ಖುದ್ದಾಗಿ ಪರಿಶೀಲಿಸಿ ಶೇಕಡ 22.75 ಅನುದಾನದಡಿಯಲ್ಲಿ ಮೂಲಭೂತಸೌಕರ್ಯದ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುವ ಮೇರೆಗೆ ಒಟ್ಟು 24ಕಾಮಗಾರಿಗಳಿಗೆ ಅಂದಾಜು ಮೊತ್ತ ರೂ. 577.50ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದ್ದು ನಂತರ ಸ್ಥಳೀಯ ಪಾಲಿಕೆ ಸದಸ್ಯರ ಪರಿಷ್ಕೃತ ಅಂದಾಜು ಪಟ್ಟಿ ರೂ. 479.63ಲಕ್ಷಗಳಿಗೆ ಜಾಬ್ ಕೋಡ್ ನೀಡಲು ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಿ, ಟೆಂಡರ್ ಕರೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

| Sl.No. | Name of Works | Estimated cost (Rs. in lakhs) |
|---|---|---|

| | | |
|---|---|---|
| 1 | Providing CC Drains and Slab to 1st & 2nd cross of Earnapalya in Ward No. 129, | 19.999 |
| 2 | Providing CC drains and slab to internal road of Earanapalya in Ward No. 129 | 19.998 |

.....47



| | | |
|---|---|---|
| 3 | Providing CC drains and slab to 4th cross of Hanumantharayanapalya in Ward No. 129 | 19.97 |
| 4 | Providing CC drains and slab to 3rd cross of Hanumantharayanapalya in Ward No. 129 | 19.97 |
| 5 | Providing CC drains and slab to Temple Road of Hanumantharayanapalya in Ward No. 129 | 19.975 |
| 6 | Providing CC drains and slab to 1st cross road Kenguntepalya in Ward No. 129 | 19.978 |
| 7 | Providing CC drains and slab to 3rd cross road Kenguntepalya in Ward No. 129 | 19.979 |
| 8 | Providing CC drains and slab to 2nd cross road Kenguntepalya in Ward No. 129 | 19.985 |
| 9 | Providing CC drains and slab to Munivenkatappa House road of Kenguntepalya in Ward No. 129 | 19.986 |
| 10 | Providing CC drains and slab to Munyappa House road of Kenguntepalya in Ward No. 129 | 19.996 |
| 11 | Providing CC drains and slab to Mallanna House road of Kenguntepalya in Ward No. 129 | 19.989 |
| 12 | Providing CC drains and slab to Mayanna House road of Kenguntepalya in Ward No. 129 | 19.988 |
| 13 | Providing CC drains and slab to Venkataswamy House road of Kenguntepalya in Ward No. 129 | 19.994 |
| 14 | Providing CC drains and slab to Venkatappa House road of Kenguntepalya in Ward No. 129 | 19.993 |
| 15 | Providing CC drains and slab to Muthuraya House road of Kenguntepalya in Ward No. 129 | 19.982 |
| 16 | Providing CC drains and slab to Ramamurthy House road of Mallathahalli in Ward No. 129 | 19.983 |
| 17 | Providing CC drains and slab to Muthaiah House road of Mallathahalli in Ward No. 129 | 19.989 |
| 18 | Providing CC drains and slab to Muthuvenkatappa House road of Mallathahalli in Ward No. 129 | 19.971 |
| 19 | Providing CC drains and slab to Gopalappa House road of Mallathahalli in Ward No. 129 | 19.972 |
| 20 | Providing CC drains and slab to Govt. School Road of Mallathahalli in Ward No. 129 | 19.973 |
| 21 | Providing CC Road to Mallathahalli in Ward No. 129 | 19.9945 |
| 22 | Providing CC roads to Papareddypalya in Ward No. 129 | 19.9955 |
| 23 | Providing & Asphalting to Kenguntepalya in Ward No. 129 | 19.982 |
| 24 | Providing & Aspalting to Kebbehalla in Ward No. 129 | 19.991 |
| | Total | 479.633 |

**ನಿರ್ಣಯ :– ಆಯುಕ್ತರ ದಿನಾಂಕ 20–01–2011ರ ಟಿಪ್ಪಣಿಯನ್ನು ಒಪ್ಪಿದೆ.**

.....48



## 40]. ವಿಷಯದ ಸಂಖ್ಯೆ :–ತೆಆಸ್ಥಾಸ/183/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)/ಪಿಆರ್/163/10–11, ದಿನಾಂಕ: 01–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್–176ರ 16ನೇ ಮುಖ್ಯರಸ್ತೆ, ಬಿ.ಟಿ.ಎಂ.2ನೇ ಹಂತದಲ್ಲಿನ ಬಿ.ಬಿ.ಎಂ.ಪಿ. ನಿರ್ಮಿತ ಕಟ್ಟಡದ ನೆಲ ಅಂತಸ್ತಿನ 902 ಚ.ಅಡಿಗಳ ಕಟ್ಟಡವನ್ನು ಅಂಚೆ ಕಛೇರಿಗೆ ಗುತ್ತಿಗೆ ನೀಡುವಂತೆ ಕೋರಿ, ವರಿಷ್ಟ ಅಧೀಕ್ಷಕರು, ಬೆಂಗಳೂರು ದಕ್ಷಿಣ ಅಂಚೆ ವಿಭಾಗ, ರವರು ಕೋರಿರುತ್ತಾರೆ.

ವಲಯಾಧಿಕಾರಿಗಳು ಸದರಿ ಸ್ಥಳದಲ್ಲಿ ಪಾಲಿಕೆಯಿಂದ ನಿರ್ಮಿಸಲಾದ ಕಟ್ಟಡದಲ್ಲಿ ನೆಲ ಅಂತಸ್ತು ಖಾಲಿ ಇದ್ದು, ಈ ಕಟ್ಟಡದ ಅಳತೆ 902 ಚ.ಅಡಿಗಳಿದ್ದು, ಪ್ರಸ್ತುತ ಮೈಕೋ ಬಡಾವಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಛೇರಿಗಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಗುತ್ತಿಗೆ ಆಧಾರ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ಸಂಸ್ಥೆಯು ಸರ್ಕಾರಿ ಸಂಸ್ಥೆಯಾಗಿರುವುದರಿಂದ, ಅಂಚೆ ಕಛೇರಿಗೆ ಪಾಲಿಕೆ ಕಟ್ಟಡವನ್ನು ಗುತ್ತಿಗೆ ಆಧಾರ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಗುತ್ತಿಗೆ ಹಣವನ್ನು ಕಾಮಗಾರಿ ಇಲಾಖೆಯವರು ಸರ್ಕಾರಿ ಆದೇಶದಂತೆ, ನಿವೇಶನದ ಅಳತೆ, ಕಟ್ಟಡದ ಅಳತೆ, ನಿರ್ಮಾಣದ ವೆಚ್ಚಗಳನ್ನೊಳಗೊಂಡಂತೆ ಲೆಕ್ಕಚಾರ ಮಾಡಿ, ಮಾಸಿಕ ಗುತ್ತಿಗೆ ಹಣ 11,215/–ರೂ. ನಿಗಧಿಪಡಿಸಿರುತ್ತಾರೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆ ದರ ಪರಿಷ್ಕರಣೆಗೊಂಡಲ್ಲಿ, ಆ ಆಧಾರ ಗುತ್ತಿಗೆ ಹಣ ವಸೂಲು ಮಾಡುವ ಷರತ್ತಿಗೊಳಪಡಿಸಿದೆ.

ಈ ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ:ನಅಇ/ 222/ಎಂ.ಎನ್.ವೈ/2008, ಬೆಂಗಳೂರು, ದಿ:03–09–2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕರ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ಅಂಚೆ ಕಛೇರಿಗಾಗಿ ಮುಂದಿನ 5 ವರ್ಷಗಳ ಅವಧಿಗೆ ಕಂಡಿಕೆ(3) ರಂತೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 01–01–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011 ರ ನಿರ್ಣಯ

**ನಿರ್ಣಯ :– ಆಯುಕ್ತರ ದಿನಾಂಕ 01–01–2011ರ ಟಿಪ್ಪಣಿಯನ್ನು ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 11–01–2011ರ ನಿರ್ಣಯವನ್ನು ಒಪ್ಪಿದೆ.**

## 41]. ವಿಷಯದ ಸಂಖ್ಯೆ :–ತೆಆಸ್ಥಾಸ/184/2010–11

ಆಯುಕ್ತರವರ ಟಿಪ್ಪಣಿ ದಿನಾಂಕ : 18–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಯೋಜನೆ ಪಶ್ಚಿಮ ರವರು, ವಾರ್ಡ್ 97 ರಲ್ಲಿ ದಯಾನಂದನಗರದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| Sl.No. | Name of work | Estimate Amount |
|---|---|---|

| | | |
|---|---|---|
| 1 | Construction of Old Age Home at Srirampuram Girls High School premises in Ward No.97 at Dayanandanagar | 127.50 |
| 2 | Proposed construction of Multipurpose BBMP Office complex in Ward No.97 Bangalore. | 411.00 |
| | Total Rs. | 538.50 |

ಕಡತದ ಕಂಡಿಕೆ ಸಂಖ್ಯೆ 10 ರಲ್ಲಿ ಮಾನ್ಯ ಆಯುಕ್ತರು ಸ್ಥಾಯಿ ಸಮಿತಿಯ ಸೂಕ್ತ ನಿರ್ಧಾರಕ್ಕೆ ಮಂಡಿಸಲು ಸೂಚಿಸಿರುತ್ತಾರೆ.

ಸದರಿ ಕಾಮಗಾರಿಗೆ 2010–11ನೇ ಸಾಲಿನ ಆಯವ್ಯಯದ 19– ಕಾಮಗಾರಿ ಯೋಜನೆ ವಿಭಾಗ – ಮೂಲಭೂತ ಸೌಕರ್ಯಗಳು – ವಾರ್ಡ್ 97 ರಲ್ಲಿ ಬಿ.ಬಿ.ಎಂ.ಪಿ. ಒನ್ ವಿವಿದ್ದೋದ್ದೇಶ ಕಟ್ಟಡಗಳ ನಿರ್ಮಾಣ ಪಿ.ಸಂಖ್ಯೆ 2251/104 ರಲ್ಲಿ ರೂ.200.00 ಲಕ್ಷಗಳನ್ನು ಮೀಸಲಿರಿಸಲಾಗಿದೆ.

.....49



ಅದೇ ರೀತಿ ದಯಾನಂದನಗರದಲ್ಲಿ ವೃದ್ದಾಶ್ರಮ ನಿರ್ಮಾಣ ಕಾಮಗಾರಿಗೆ ಆಯವ್ಯಯ ಪುಟ ಸಂಖ್ಯೆ 104 ರಲ್ಲಿ ಪಿ.ಸಂಖ್ಯೆ 2253 ರಲ್ಲಿ ರೂ.50.00 ಲಕ್ಷಗಳನ್ನು ಮೀಸಲಿರಿಸಲಾಗಿದೆ.

2010–11ನೇ ಸಾಲಿನಲ್ಲಿ ಎರಡು ಕಾಮಗಾರಿಗಳಿಗೆ ಮೀಸಲಿರಿಸಿರುವ ಒಟ್ಟು ರೂ.250.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡಿ ಉಳಿದ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಬಹುದಾಗಿರುತ್ತದೆ

ಮೇಲ್ಕಂಡ ಎರಡು ಕಾಮಗಾರಿಗಳಿಗೆ ಕಾಮಗಾರಿ ಸಂಖ್ಯೆ ನೀಡಿರುವುದಿಲ್ಲ.

ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೆಚ್ಚವನ್ನು ಭರಿಸಿ ಕಾಮಗಾರಿ ಸಂಕೇತ ಪ್ರಮಾಣ ಪತ್ರವನ್ನು ನೀಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿಯನ್ನು ಮಂಡಿಸಿದೆ.

**ನಿರ್ಣಯ :– ಆಯುಕ್ತರ ದಿನಾಂಕ 18–01–2011ರ ಟಿಪ್ಪಣಿಯನ್ನು ಒಪ್ಪಿದೆ.**

## 42]. ವಿಷಯದ ಸಂಖ್ಯೆ :–ತೆಆಸ್ಥಾಸ/185/2010–11

ಆಯುಕ್ತರವರ ಟಿಪ್ಪಣಿ ದಿನಾಂಕ : 20–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ಸುಮಾರು 800.00 ಚ.ಕಿ.ಮೀ ವಿಸ್ತೀರ್ಣದಿಂದ ಕೂಡಿರುತ್ತದೆ. ಬೆಂಗಳೂರು ನಗರದ ವ್ಯಾಪ್ತಿಯನ್ನು 5 ಹೊಸ ವಲಯಗಳಾದ ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಮಹದೇವಪುರ, ಬ್ಯಾಟರಾಯನಪುರ, ದಾಸರಹಳ್ಳಿ ವಲಯಗಳಾಗಿ ಸೃಷ್ಟಿಸಿ ಸೇರ್ಪಡೆ ಮಾಡಲಾಗಿದ್ದು, ಹಾಲಿ 8 ವಲಯಗಳಾಗಿ ವಿಭಜಿಸಿ ಕಾರ್ಯನಿರ್ವಹಣೆ ಮಾಡಲಾಗಿರುತ್ತದೆ. ಬೆ0ಗಳೂರು ನಗರದ ಜನಸ0ಖ್ಯೆಯು 2001ರ ಜನಗಣತಿ ಪ್ರಕಾರ ಸುಮಾರು 60 ಲಕ್ಷವಿದ್ದು 2025ರ ವೇಳೆಗೆ ಜನಸ0ಖ್ಯೆಯ ಪ್ರಮಾಣ ಸುಮಾರು 122 ಲಕ್ಷಗಳಷ್ಟು ಆಗಬಹುದೆ0ದು ಅ0ದಾಜಿಸಲಾಗಿದೆ. ವಾಹನ ಸ0ಖ್ಯೆಯ ವಾರ್ಷಿಕ ಬೆಳವಣಿಗೆಯು ಪ್ರಸ್ತುತ 12 ರಿ0ದ 14 ರಷ್ಟಿದ್ದು, ಒಟ್ಟು ವಾಹನ ಸ0ಖ್ಯೆಯು 35 ರಿ0ದ 38 ಲಕ್ಷಗಳಷ್ಟು ಇರುತ್ತದೆ.

ಬೆ0ಗಳೂರು ಮಹಾನಗರವು ದಕ್ಷಿಣ ಭಾರತದಲ್ಲೇ ಒ0ದು ಪ್ರಮುಖ ನಗರವಾಗಿ ಬೆಳವಣಿಗೆಯಾಗುತ್ತಿದ್ದು, ಆರ್ಥಿಕವಾಗಿ ವಾರ್ಷಿಕ ಸುಮಾರು 26000.00 ಕೋಟಿಗಳಷ್ಟು ವಹಿವಾಟು ನಡೆಸಲಾಗುತ್ತಿರುತ್ತದೆ ಎ0ದು ಅ0ದಾಜಿಸಲಾಗಿದೆ ಹಾಗೂ ಬೆ0ಗಳೂರು ನಗರವು ಮಾಹಿತಿ ತ0ತ್ರಜ್ಞಾನದಲ್ಲಿ ಪ್ರಪ0ಚದಲ್ಲೇ ಒ0ದು ಪ್ರಮುಖ ನಗರವಾಗಿ ಗುರುತಿಸಲಾಗಿದೆ ಹಾಗು ಇದು ಸಿಲಿಕಾನ್ ನಗರವೆ0ದು ಪ್ರಸಿದ್ದಿಯಾಗಿದೆ. ಈ ಎಲ್ಲಾ ಕಾರಣಗಳಿ0ದ ಬೃಹತ್ ಬೆ0ಗಳೂರು ಮಹಾನಗರ ಪಾಲಿಕೆಯು ಬೆ0ಗಳೂರಿನ ಸಮಗ್ರ ಅಭಿವೃದ್ದಿಗೆ ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಕೈಗೊ0ಡು ನಿರ್ವಹಿಸಲಾಗುತ್ತಿದೆ.

ಬೃಹತ್ ಬೆ0ಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಮುಖ್ಯ ಕಣಿವೆಗಳಾದ ವೃಷಭಾವತಿ, ಕೋರಮ0ಗಲ, ಹೆಬ್ಬಾಳ, ಛಲಘಟ್ಟ ನೀರುಗಾಲುವೆಗಳು ಹರಿಯುತ್ತಿರುತ್ತವೆ. ನಗರ ಪ್ರದೇಶದಲ್ಲಿ ಈಶಾನ್ಯ ಮತ್ತು ನೈರುತ್ಯ ಮು0ಗಾರು ಮಳೆಯಿ0ದ ಒಟ್ಟು ಸುಮಾರು 800 ಮಿಲಿ ಮೀಟರ್‌ನಷ್ಟು ವಾರ್ಷಿಕ ಮಳೆಯಾಗುತ್ತಿರುತ್ತದೆ.

2010–11ನೇ ಸಾಲಿಗೆನಲ್ಲಿ ಮಹಾನಗರ ಪಾಲಿಕೆಯಿಂದ ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳ ಅಡಿಯಲ್ಲಿ ಯೋಜನಾ ಶಾಖೆಯ ವತಿಯಿಂದ ಆರ್.ಓ.ಬಿ./ ಆರ್.ಯು.ಬಿ.ಗಳು. ಸುರ0ಗಮಾರ್ಗಗಳು, ರಸ್ತೆಗೆ ಸ0ಬ0ಧಪಟ್ಟ ಕಾಮಗಾರಿಗಳು, ಮೂಲಭೂತ ಸೌಕರ್ಯಗಳ ಶಾಖೆಗೆ ಸ0ಬ0ಧಪಟ್ಟ ಕಾಮಗಾರಿಗಳು ಬೃಹತ್ ರಸ್ತೆಗಳು ವಿಭಾಗದ

ಕಾಮಗಾರಿಗಳು, ಮಳೆನೀರಿನ ಚರ0ಡಿಗಳ ಕಾಮಗಾರಿಗಳು, ಸ0ಸ್ಕೃತಿ ಮತ್ತು ಕ್ರೀಡೆಗೆ ಸ0ಬ0ಧಪಟ್ಟ0ತೆ ಕ್ರೀಡಾ0ಗಣ, ಆಟದ ಮೈದಾನ ಮತ್ತು ಉದ್ಯಾನವನದ ಕಾಮಗಾರಿಗೆ ಒಟ್ಟು ರೂ.126478.97 ಲಕ್ಷಗಳನ್ನು 2010-11ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. ಇವುಗಳಲ್ಲಿ ರೂ.70745.00 ಲಕ್ಷಗಳನ್ನು ಯೋಜನಾ ವಿಭಾಗದ ಕಾಮಗಾರಿಗಳಿಗೆ, ರೂ.15255.00 ಲಕ್ಷಗಳನ್ನು ಜೆ.ಎನ್.ಎನ್.ಯು.ಆರ್.ಎ0 ಕಾಮಗಾರಿಗಳಿಗೆ ಹಾಗೂ ರೂ.3000.00 ಲಕ್ಷಗಳನ್ನು ಮೆಗಾಸಿಟಿ ಯೋಜನೆಯ ಕಾಮಗಾರಿಗಳಿಗೆ ಸಾಲ ಪಡೆಯಲು 2010-11 ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.89000.00 ಲಕ್ಷಗಳನ್ನು ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅದರ0ತೆ ಈ ಕೆಳಕ0ಡ ಲೆಕ್ಕ ಶೀರ್ಷಿಕೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊ0ಡು ಬೃಹತ್ ಬೆ0ಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.

.....50



| ಆಯವ್ಯಯ ಪುಸ್ತಕದ ಕ್ರಮ ಸ0ಖ್ಯೆ | | ಲೆಕ್ಕ ಶೀರ್ಷಿಕೆಯ ವಿವರ | ಆಯವ್ಯಯ ಪುಸ್ತಕದ ಪು.ಸ0. | 2010-11ನೇ ಸಾಲಿಗೆ ಬೇಕಾಗುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 19 | | ಕಾಮಗಾರಿ ಯೋಜನಾ ಶಾಖೆ | | |
| | 1 | ಇತರೆ ಮೂಲಭೂತ ಸೌಕರ್ಯ ಕಾಮಗಾರಿಗಳು | 102-106 | 4766.73 |
| | 2 | ಆರ್.ಓ.ಬಿ/ ಆರ್.ಯು.ಬಿ.ಗಳು | 106-109 | 6444.80 |
| | 3 | ಕ್ರೀಡಾ0ಗನ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 109-111 | 3600.23 |
| | 4 | ಸುರ0ಗಮಾರ್ಗಗಳು | 110-111 | 1647.68 |
| | 5 | ಮೂಲಭೂತ ಸೌಕರ್ಯ ಕಾಮಗಾರಿಗಳು (ಚಾಮರಾಜಪೇಟೆ ರುದ್ರಭೂಮಿ ಮತ್ತು ಹರಿಶ್ಚ0ದ್ರ ಘಾಟ್) | 112 | 105.06 |
| | 6 | ರಸ್ತೆಗೆ ಸ0ಬ0ಧಿಸಿದ ಕೆಲಸಗಳು (ರಸ್ತೆ ಮೇಲು ಸೇತುವೆ) | 113-115 | 3796.61 |
| | 7 | ರಸ್ತೆಗೆ ಸ0ಬ0ಧಪಟ್ಟ ಕೆಲಸಗಳು | 115 | 21146.03 |
| 20 | | ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | | |
| | 1 | ಕೂಡು ರಸ್ತೆಗಳ ಅಭಿವೃದ್ಧಿ (ಬೃಹತ್ ರಸ್ತೆಗಳು) ರಸ್ತೆಗೆ ಸ0ಬ0ಧಪಟ್ಟ ಕೆಲಸಗಳು | 125-126 | 25883.70 |
| | 2 | ರಸ್ತೆ ಅಗಲೀಕರಣ | 126-128 | 30303.61 |
| 21 | 1 | ಮಳೆನೀರಿನ ಚರ0ಡಿಗಳ ಕಾಮಗಾರಿಗಳು (ಜೆ.ಎನ್.ಎನ್.ಯು.ಆರ್.ಎ0.) | 129 | 19969.00 |
| | 2 | ಇತರೆ ಕಾಮಗಾರಿಗಳು ಕೊಳಚೆ ಚರ0ಡಿ ಮೋರಿಗಳ ಕಾಮಗಾರಿಗಳು | 130 | 6264.00 |
| 24 | | ಸ0ಸ್ಕೃತಿ ಮತ್ತು ಕ್ರೀಡೆ: ಮೂಲಭೂತ ಸೌಕರ್ಯಗಳು ಕ್ರೀಡಾ0ಗಣ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 137-139 | 9551.52 |
| | | | **ಒಟ್ಟು** | **126478.97** |

ಮೇಲ್ಕ0ಡ ಲೆಕ್ಕಶೀರ್ಷಿಕೆಯಲ್ಲಿನ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ 2010-11ನೇ ಸಾಲಿನಲ್ಲಿ ವಿವಿಧ ಹಣಕಾಸು ಸ0ಸ್ಥೆಗಳಿ0ದ ಬ್ಯಾ0ಕುಗಳಿ0ದ ರೂ.860.00 ಕೋಟಿಗಳ ಸಾಲ ಪಡೆಯಲು ದಿನಾಂಕ: 29-09-2011 ರಂದು ನೆಡದ ಪಾಲಿಕೆಯ ಸಭೆಯಲ್ಲಿ ಅನುಮೋದನೆ ನೀಡಿರುತ್ತದೆ, ಈ ಮೊತ್ತದಲ್ಲಿ ಸರ್ಕಾರದ ಅನುಮೋದನೆಯನ್ನ ನಿರೀಕ್ಷಿಸಿ ರೂ. 250.00 ಕೋಟಿ ಸಾಲವನ್ನು ಪಡೆಯಲು ಅನುಮೋದನೆಯನ್ನು ನೀಡಿರುತ್ತದೆ. ಈ ಅನುಮೋದನೆಯಂತೆ ರೂ.250.00 ಕೋಟಿ ಸಾಲವನ್ನು ಪಡೆಯಲಾಗಿದೆ.

ದಿನಾಂಕ 18.10.2010ರಂದು ರೂ.860.00 ಕೋಟಿ ಸಾಲವನ್ನು ವಿವಿದ ಬ್ಯಾಂಕ್‌ಗಳಿಂದ ಪಡೆಯಲು ಅನುಮೋದನೆ ಕೋರಿ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ 2010-11ನೇ ಸಾಲಿನಲ್ಲಿ ಪುನಃ ರೂ.250.00

ಕೋಟಿ ಸಾಲವನ್ನು ವಿವಿದ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆಯುಲು ತೆರಿಗೆ ಮತ್ತು ಆರ್ಥಿಕ ಸಮಿತಿ ಮತ್ತು ಪಾಲಿಕೆ ಸಭೆಯ ನಿರ್ಣಯಕ್ಕಾಗಿ ಮ0ಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 20–01–2011ರ ಟಿಪ್ಪಣಿಯನ್ನು ಒಪ್ಪಿದೆ.**

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ